ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 23 ಮಂಗಳವಾರ 2023

ಸಂಪುಟ: 44 | ಸಂಚಿಕೆ: 37 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಶನಿವಾರ ಮಂತ್ರಿಮಂಡಲ ವಿಸ್ತರಣೆ

20 ಮಂದಿ ಸಂಪುಟಕ್ಕೆ ಸೇರಿಕೊಳ್ಳಲು ಸಿದ್ಧತೆ

● ನಾಳೆ ಸಂಜೆ ಪಟ್ಟಿ ಅಂತಿಮಗೊಳಿಸಲು ಸಿಎಂ ಸಿದ್ದರಾಮಯ್ಯ, ಡಿಸಿಎಂ ಶಿವಕುಮಾರ್ ದೆಹಲಿಗೆ ● ಗುರುವಾರ ವರಿಷ್ಠರೊಂದಿಗೆ ಚರ್ಚೆ ● ಸೋಮವಾರದೊಳಗೆ ಸಚಿವರಿಗೆ ಖಾತೆ ಹಂಚಿಕೆ

ಬೆಂಗಳೂರು, ಮೇ 22(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ತಮ್ಮ ಮಂತ್ರಿಮಂಡಲವನ್ನು ವಿಸ್ತರಿಸಿ 20 ಮಂದಿಯನ್ನು ಹೊಸದಾಗಿ ಸೇರ್ಪಡೆ ಮಾಡಿಕೊಳ್ಳಲಿದ್ದಾರೆ.

ಸಂಪುಟಕ್ಕೆ ಯಾರನ್ನು ಸೇರ್ಪಡೆ ಮಾಡಿಕೊಳ್ಳಬೇಕು. ಯಾರಿಗೆ ಯಾವ ಖಾತೆ ನೀಡಬೇಕು ಎಂಬ ಬಗ್ಗೆ ಸಮಾಲೋಚನೆ ನಡೆಸಿ ವರಿಷ್ಠರ ಅನುಮತಿ ಪಡೆಯಲು ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಜತೆಗೂಡಿ ಬುಧವಾರ ಸಂಜೆ ಮುಖ್ಯಮಂತ್ರಿ ದೆಹಲಿಗೆ ತೆರಳಲಿದ್ದಾರೆ. ಗುರುವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್ ಮತ್ತು ಸುರ್ಜೆವಾಲ ಅವರ ಜೊತೆ ಚರ್ಚೆ ನಡೆಸಿ ಪಟ್ಟಿ ಅಂತಿಮಗೊಳಿಸಲಿದ್ದಾರೆ.

ಶುಕ್ರವಾರವೇ ಸಂಪುಟ ವಿಸ್ತರಣೆ ಮಾಡಲು ರಾಜಭವನದ ಸಮಯ ಕೋರಿದ್ದರು. ಆದರೆ, ರಾಜ್ಯಪಾಲರು ಪ್ರವಾಸದಲ್ಲಿರುವ ಕಾರಣ ಶನಿವಾರಕ್ಕೆ ಸಮಯ ನಿಗದಿ ಮಾಡಿಕೊಂಡಿದ್ದಾರೆ. ಈಗಾಗಲೇ ಉಪ ಮುಖ್ಯಮಂತ್ರಿ ಸೇರಿದಂತೆ 9 ಮಂದಿಯನ್ನು ಸೇರ್ಪಡೆ ಮಾಡಿಕೊಂಡಿದ್ದು ▶ 8ನೇ ಪುಟಕ್ಕೆ

ಸಿಎಂ ಸಚಿವಾಲಯಕ್ಕೆ ಅಧಿಕಾರಿಗಳ ನೇಮಕ

● ಕೆ.ವಿ.ಪ್ರಭಾಕರ್ ಮಾಧ್ಯಮ ಸಲಹೆಗಾರ ● ಡಾ.ರಜನೀಶ್ ಗೋಯಲ್ ಸಿಎಂ ಮುಖ್ಯ ಕಾರ್ಯದರ್ಶಿ ● ಶಿವಸ್ವಾಮಿ ಜಂಟಿ ಕಾರ್ಯದರ್ಶಿ ● ಡಾ.ವೆಂಕಟೇಶಯ್ಯ ಸಿಎಂ ಆಪ್ತ ಕಾರ್ಯದರ್ಶಿ

ಬೆಂಗಳೂರು, ಮೇ22 (ಕೆಎಂಶಿ)– ಮುಖ್ಯಮಂತ್ರಿಯವರ ಸಚಿವಾಲಯಕ್ಕೆ ಅಧಿಕಾರಿಗಳನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಪ್ರತ್ಯೇಕ ಆದೇಶಗಳನ್ನು ಹೊರಡಿಸಿದೆ.

ಸಿದ್ದರಾಮಯ್ಯ ಅವರು ತಮ್ಮ ಮೊದಲ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಮುಖ್ಯಮಂತ್ರಿಯವರ ಮಾಧ್ಯಮ ಸಮನ್ವಯಕರಾಗಿದ್ದ ಹಿರಿಯ ಪತ್ರಕರ್ತ ಕೆ.ವಿ.ಪ್ರಭಾಕರ್ ಅವರನ್ನು ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರರನ್ನಾಗಿ ನೇಮಕ ಮಾಡಲಾಗಿದೆ. ಅಲ್ಲದೆ, ಕೆ.ವಿ.ಪ್ರಭಾಕರ್ ಅವರಿಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನವನ್ನೂ ಕೂಡ ನೀಡಲಾಗಿದೆ. ಅಂತೆಯೇ ರಾಜ್ಯ ಸರ್ಕಾರದ ಗೃಹ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಡಾ.ರಜನೀಶ್ ಗೋಯಲ್ ಅವರನ್ನು ಮುಖ್ಯಮಂತ್ರಿಯವರ ಆಪರ ಮುಖ್ಯ ಕಾರ್ಯದರ್ಶಿ ಹುದ್ದೆಗೆ ಸಮವರ್ತಿ ಪ್ರಭಾರದಲ್ಲಿರಿಸಿ ನೇಮಕ ಮಾಡಲಾಗಿದೆ. ಪೌರಾಡಳಿತ ಇಲಾಖೆಯ ಜಂಟಿ ನಿರ್ದೇಶಕ ಬಿ.ಶಿವಸ್ವಾಮಿ ಅವರನ್ನು ಮುಖ್ಯಮಂತ್ರಿಯವರ ಜಂಟಿ ▶ 8ನೇ ಪುಟಕ್ಕೆ

ಸಿಎಂ ಸಿದ್ದು, ಡಿಸಿಎಂ ಡಿಕೆಶಿ, ಮಾಜಿ ಸಿಎಂ ಬೊಮ್ಮಾಯಿ ಸೇರಿ

140 ಶಾಸಕರು ಪ್ರಮಾಣ ಸ್ವೀಕಾರ

■ ನಾಳೆ ಹೊಸ ಸಭಾಧ್ಯಕ್ಷರ ಆಯ್ಕೆ ■ ಸಭಾಧ್ಯಕ್ಷ ಸ್ಥಾನಕ್ಕೆ ಆಸಕ್ತಿ ತೋರದ ಹಿರಿಯ ಕಾಂಗ್ರೆಸ್ಸಿಗರು





ಬೆಂಗಳೂರು, ಮೇ 22–16ನೇ ವಿಧಾನ ಸಭೆಯ ಮೊದಲ ಅಧಿವೇಶನದ ಮೊದಲ ದಿನದ ಕಲಾಪ ಸೋಮವಾರ ಆರಂಭಗೊಂಡಿದ್ದು, ಮೊದಲ ದಿನದ ಅಧಿವೇಶನದಲ್ಲಿ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಸೇರಿ ನೂತನ ಸಚಿವರು ಹಾಗೂ ಶಾಸಕರು ಪ್ರಮಾಣವಚನ ಸ್ವೀಕರಿಸಿದ್ದಾರೆ.

ಸೋಮವಾರದಿಂದ ಬುಧವಾರದವರೆಗೆ (ಮೇ 22ರಿಂದ ಮೇ 24) ವಿಧಾನ ಸಭೆ ಅಧಿವೇಶನ ನಡೆಯಲಿದ್ದು, ಇಂದು ಬೆಳಗ್ಗೆ 11.15ರ ಹೊತ್ತಿಗೆ ಅಧಿವೇಶನ ಆರಂಭವಾಗಿದೆ. ಮೊದಲ ಎರಡು ದಿನಗಳ ಕಾಲ ಎಲ್ಲ ಶಾಸಕರ ಪ್ರಮಾಣ ವಚನ ಸ್ವೀಕಾರ ನಡೆಯಲಿದೆ. ಮೂರನೇ ದಿನ ಸಭಾಧ್ಯಕ್ಷರ ಆಯ್ಕೆ ನಡೆಯಲಿದೆ.

ಶಾಸಕರಿಗೆ ಪ್ರಮಾಣವಚನ ಬೋಧಿಸುವ ಜವಾಬ್ದಾರಿಯನ್ನು ಹಿರಿಯ ಶಾಸಕ, ಮಾಜಿ ಸಚಿವ ಆರ್.ವಿ. ದೇಶಪಾಂಡೆ ಅವರು ವಹಿಸಿಕೊಂಡಿದ್ದರು. ಅವರನ್ನು ಹಂಗಾಮಿ ಸ್ಪೀಕರ್ ಆಗಿ ನೇಮಿಸಲಾಗಿದೆ. ಈ ನಡುವೆ, ಶಾಸಕರಿಗೆ ಪ್ರಮಾಣ ವಚನ ಬೋಧಿಸುವ ಹಂಗಾಮಿ ಸ್ಪೀಕರ್ ಅವರಿಗೆ ರಾಜ್ಯಪಾಲರು ಪ್ರಮಾಣವಚನ ಬೋಧಿಸಿದರು. ಇದು ರಾಜಭವನದಲ್ಲಿ ನಡೆಯುವ ಪ್ರಕ್ರಿಯೆಯಾಗಿದೆ. ಅದಾದ ಬಳಿಕ ವಿಧಾನಸಭೆಯಲ್ಲಿ ಶಾಸಕರಿಗೆ ಪ್ರಮಾಣ ವಚನ ಬೋಧನೆ ಆರಂಭಗೊಂಡಿತು.

ಇದರಂತೆ ಹಂಗಾಮಿ ಸ್ಪೀಕರ್ ದೇಶಪಾಂಡೆಯವರು ಎಲ್ಲಾ ಶಾಸಕರಿಗೆ ಪ್ರತ್ಯೇಕವಾಗಿ ಪ್ರಮಾಣ ವಚನ ಬೋಧನೆ ನಡೆಸುತ್ತಿದ್ದಾರೆ. ಮೊದಲಿಗೆ ವರುಣಾ ವಿಧಾನ ಸಭಾ ಕ್ಷೇತ್ರದ ಶಾಸಕರಾಗಿ ಸಿದ್ದರಾಮಯ್ಯ ಅವರು ಭಗವಂತನ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಇನ್ನು ಕನಕಪುರ ಕ್ಷೇತ್ರದ ಶಾಸಕರಾಗಿ ಡಿ.ಕೆ.ಶಿವಕುಮಾರ್ ಅವರು, ಗಂಗಾಧರ ಅಜ್ಜಯ್ಯನ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಜೊತೆ ಸಚಿವರಾಗಿರುವ ಡಾ.ಜಿ.ಪರಮೇಶ್ವರ್, ಕೆ.ಎಚ್.ಮುನಿಯಪ್ಪ, ಕೆ.ಜೆ. ಜಾರ್ಜ್, ಎಂ.ಬಿ.ಪಾಟೀಲ, ಪ್ರಿಯಾಂಕ್ ಖರ್ಗೆ ಪ್ರಮಾಣವಚನ ಸ್ವೀಕರಿಸಿದರು. ಕೊರಟಗೆರೆ ಕ್ಷೇತ್ರದ ಶಾಸಕರಾಗಿ ಡಾ.ಜಿ. ಪರಮೇಶ್ವರ್ ಅವರು ಸಂವಿಧಾನದ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರೆ, ದೇವನಹಳ್ಳಿ ▶ 6ನೇ ಪುಟಕ್ಕೆ

ಕೋಟ್ಯಾಂತರ ರೂ. ಮೌಲ್ಯದ ಭೂಮಿ ಖಾಸಗಿ ವ್ಯಕ್ತಿ ಪಾಲಾಗಲು ಅನುವಾಗುವಂತೆ ಮುಡಾದಿಂದ ಹೈಕೋರ್ಟ್‌ಗೆ ವರದಿ!

● ಜಿಲ್ಲಾಧಿಕಾರಿಗಳಿಂದ ಮುಡಾ ಆಯುಕ್ತರಿಗೆ ನೋಟೀಸ್
● 27.34 ಎಕರೆ ಭೂಮಿಗೆ ಸಂಬಂಧಿಸಿದಂತೆ ಮುಡಾ ಸಭೆಯಲ್ಲಿ ನಿರ್ಣಯ ಸ್ವೀಕೃತವಾಗದಿದ್ದರೂ ಹೈಕೋರ್ಟ್‌ಗೆ ವರದಿ ಸಲ್ಲಿಕೆ ಆರೋಪ


ಡಾ.ಕೆ.ವಿ.ರಾಜೇಂದ್ರ




ಜಿ.ಟಿ.ದಿನೇಶ್‌ಕುಮಾರ್

ಮೈಸೂರು, ಮೇ 22–ಮೈಸೂರಿನ ಹೃದಯ ಭಾಗದಲ್ಲಿರುವ ಕೋಟ್ಯಾಂತರ ರೂ. ಮೌಲ್ಯದ ಭೂಮಿಯನ್ನು ಖಾಸಗಿ ವ್ಯಕ್ತಿಗೆ ಅನುವಾಗುವಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಸಭೆಯಲ್ಲಿ ನಿರ್ಣಯವಾಗಿದೆ ಎಂದು ಹೈಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿರುವ ಆರೋಪದ ಮೇರೆಗೆ ವಿವರಣೆ ನೀಡುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಅವರಿಗೆ ನೋಟೀಸ್ ನೀಡಿದ್ದಾರೆ.

ಮೈಸೂರು ತಾಲೂಕು ದಟ್ಟಗಳ್ಳಿ ಸರ್ವೆ ನಂ.27/1, 27/2, 27/3, 27/4, 29/1ಎ, 32, 38/1, 38/2 ಮತ್ತು 41/2ರ ಒಟ್ಟು 27.34 ಎಕರೆ ಜಮೀನಿಗೆ ▶ 6ನೇ ಪುಟಕ್ಕೆ

“ ಜಿಲ್ಲಾಧಿಕಾರಿಗಳಿಂದ ನನಗೆ ನೋಟೀಸ್ ಬಂದಿರುವುದು ನಿಜ. ಆದರೆ ನೋಟೀಸ್‌ನಲ್ಲಿ ಉಲ್ಲೇಖಿಸಿರುವ ಆರೋಪಗಳೆಲ್ಲವೂ ಸತ್ಯಕ್ಕೆ ದೂರವಾಗಿದೆ. ಈ ಸಂಬಂಧ ಜಿಲ್ಲಾಧಿಕಾರಿಗಳಿಗೆ ಸ್ಪಷ್ಟನೆ ನೀಡಲಾಗುವುದು. ತಮ್ಮ ವಕೀಲರ ಮೂಲಕ ಲೀಗಲ್ ನೋಟೀಸ್ ಕಳುಹಿಸಿರುವ ವೀರ್ ಕುಮಾರ್ ಜೈನ್ ಎಂಬುವರಿಗೂ ನೋಟೀಸ್ ನೀಡಲಾಗುವುದು.

–ಜಿ.ಟಿ.ದಿನೇಶ್‌ಕುಮಾರ್, ಮುಡಾ ಆಯುಕ್ತ

ರಾಜ್ಯದಲ್ಲಿ ಮಳೆ ಅವಾಂತರ: ಇಂದು ಡಿಸಿ, ಸಿಇಓಗಳೊಂದಿಗೆ ಸಿಎಂ ಸಿದ್ದರಾಮಯ್ಯ ಸಭೆ

ಬೆಂಗಳೂರು, ಮೇ 22– ರಾಜ್ಯಾದ್ಯಂತ ಪೂರ್ವ ಮುಂಗಾರು ಮಳೆಯಿಂದ ಭಾರೀ ಅವಾಂತರ ಸೃಷ್ಟಿಯಾಗುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ(ಮೇ 23) ಮಧ್ಯಾಹ್ನ 3 ಗಂಟೆಗೆ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿಗಳ ಸಿಇಓಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಮಹತ್ವದ ಸಭೆ ನಡೆಸಲಿದ್ದಾರೆ.

ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದ ಮಳೆ ಸುರಿಯುತ್ತಿದ್ದು, ಕರ್ನಾಟಕದಲ್ಲೂ ಅನಾಹುತಗಳನ್ನು ಸೃಷ್ಟಿಸಿದೆ. ಬೆಂಗಳೂರು, ಮೈಸೂರು ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಭಾರೀ ಮಳೆಯಿಂದ ಸಾರ್ವಜನಿಕ ಆಸ್ತಿ–ಪಾಸ್ತಿಗಳಿಗೆ ನಷ್ಟ ಉಂಟಾಗಿದೆ. ಹಲವೆಡೆ ▶ 8ನೇ ಪುಟಕ್ಕೆ

ನಿಗಮ–ಮಂಡಳಿಗಳ ಅಧ್ಯಕ್ಷರು, ನಿರ್ದೇಶಕರ ನೇಮಕ ರದ್ದು

ಬೆಂಗಳೂರು, ಮೇ 22– ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೊದಲ ಅಧಿವೇಶನದ ದಿನವೇ ಈ ಹಿಂದಿನ (ಬಿಜೆಪಿ) ಸರ್ಕಾರದಲ್ಲಿ ರಾಜ್ಯದ ಎಲ್ಲಾ ನಿಗಮ ಮಂಡಳಿಗಳಿಗೆ ನೇಮಕ ಮಾಡಲಾಗಿದ್ದ ಅಧ್ಯಕ್ಷರು, ನಿರ್ದೇಶಕರು ಹಾಗೂ ಪದಾಧಿಕಾರಿಗಳ ನೇಮಕಾತಿಗಳನ್ನು ರದ್ದುಗೊಳಿಸಲಾಗಿದೆ. ಜೊತೆಗೆ, ನಿಗಮ ಮಂಡಳಿಗಳಿಗೆ ನೀಡಲಾದ ಅನುದಾನ ಹಾಗೂ ಹಣ ಹಂಚಿಕೆಯನ್ನು ತತ್‌ಕ್ಷಣದಿಂದಲೇ ತಡೆ ಹಿಡಿಯುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆದೇಶ ಹೊರಡಿಸಿದ್ದಾರೆ. ▶ 8ನೇ ಪುಟಕ್ಕೆ

ಸಿದ್ದರಾಮಯ್ಯನವರೇ ಐದು ವರ್ಷ ಸಿಎಂ

ಸಚಿವ ಎಂ.ಬಿ.ಪಾಟೀಲ್



ನಂಜನಗೂಡು ತಾಲೂಕಿನ ಶ್ರೀ ಸುತ್ತೂರು ಮಠಕ್ಕೆ ಸೋಮವಾರ ನೂತನ ಸಚಿವ ಎಂ.ಬಿ.ಪಾಟೀಲ್, ತಮ್ಮ ಪತ್ನಿ ಆಶಾ ಪಾಟೀಲ್ ಅವರೊಂದಿಗೆ ಭೇಟಿ ನೀಡಿ, ಶ್ರೀ ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿಯವರ ಆಶೀರ್ವಾದ ಪಡೆದರು.

ಮೈಸೂರು, ಮೇ 22– ಸಿದ್ದರಾಮಯ್ಯನವರೇ ಪೂರ್ಣಾವಧಿ ವರೆಗೂ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಲಿದ್ದಾರೆ ಎಂದು ನೂತನ ಸಚಿವ ಎಂ.ಬಿ. ಪಾಟೀಲ್ ಹೇಳಿದ್ದಾರೆ. ನಂಜನಗೂಡು ತಾಲೂಕಿನ ಶ್ರೀ ಸುತ್ತೂರು ಕ್ಷೇತ್ರಕ್ಕೆ ಸೋಮವಾರ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಆಶೀರ್ವಾದ ಪಡೆದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಅಧಿಕಾರ ಹಂಚಿಕೆ ಬಗ್ಗೆ ಪ್ರಸ್ತಾಪವಿಲ್ಲ, 5 ವರ್ಷಗಳ ಕಾಲ ಸಿದ್ದರಾಮಯ್ಯನವರೇ ▶ 6ನೇ ಪುಟಕ್ಕೆ



ಮಳೆ ಹಾನಿ ನಿಭಾಯಿಸಲು ಪಾಲಿಕೆ ‘ಅಭಯ’ ತಂಡ ರೆಡಿ



ಮಳೆ–ಗಾಳಿಯಿಂದ ಯಾವುದೇ ಅವಾಂತರ ಸಂಭವಿಸಿದರೂ ಮೈಸೂರು ಮಹಾನಗರ ಪಾಲಿಕೆ ಪ್ರಧಾನ ಕಚೇರಿಯ ಕಂಟ್ರೋಲ್ ರೂಂ 9449841196 ಅಥವಾ 9449841195 ಮೊಬೈಲ್ ನಂಬರ್‌ಗಳಿಗೆ ಕರೆ ಮಾಡಿ ಮಾಹಿತಿ ನೀಡಿದಲ್ಲಿ ತಡ ಮಾಡದೇ ಅಭಯ ತಂಡ ತಕ್ಷಣವೇ ಸ್ಥಳಕ್ಕೆ ಬಂದು ಕ್ಷಿಪ್ರ ಕಾರ್ಯಾಚರಣೆ ನಡೆಸಲಿವೆ.

ಮೈಸೂರು, ಮೇ 22(ಆರ್‌ಕೆ)–ಮಳೆಯಿಂದಾಗುವ ಹಾನಿ ನಿಭಾಯಿಸಲು ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಹಾಗೂ ಅಭಯ ತಂಡದ ಸಿಬ್ಬಂದಿಗಳು ಸನ್ನದ್ಧರಾಗಿದ್ದಾರೆ. ಮುಂದಿನ 5 ದಿನ ರಾಜ್ಯದಲ್ಲಿ ಭಾರೀ ಪ್ರಮಾಣದ ಮಳೆ ಬೀಳಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿರುವುದರಿಂದ ವರುಣನ ಆರ್ಭಟದಿಂದಾಗಿ ಮರ, ವಿದ್ಯುತ್ ಕಂಬಗಳು ಧರೆಗುರುಳಿ ಸಾವು–ನೋವು, ಸಂಚಾರ ವ್ಯತ್ಯಯವಾಗುವ ಸಾಧ್ಯತೆ ಇರುವುದರಿಂದ ಮುಂಜಾಗ್ರತೆಯಾಗಿ ಮೈಸೂರು ಮಹಾನಗರ ಪಾಲಿಕೆ ಅಭಯ ತಂಡದ ಸಿಬ್ಬಂದಿಗಳು ಸರ್ವ ರೀತಿಯಲ್ಲಿ ತಯಾರಾಗಿದ್ದಾರೆ.

ಮೈಸೂರಿನ ಕೆ.ಆರ್., ಎನ್.ಆರ್. ಮತ್ತು ಚಾಮರಾಜ ವಿಧಾನಸಭಾ ಕ್ಷೇತ್ರಗಳಿಗೆ ತಲಾ ಒಂದರಂತೆ ಮೈಸೂರು ಮಹಾನಗರ ಪಾಲಿಕೆಯು ಅಭಯ ತಂಡವನ್ನು ಸಜ್ಜುಗೊಳಿಸಿದೆ. ಈ ಅಭಯ ತಂಡಗಳಿಗೆ ಒಂದೊಂದು ವಾಹನ ಹಾಗೂ ಚಾಲಕ ಸೇರಿ ಐವರು ಸಿಬ್ಬಂದಿಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ನಿಯೋಜಿಸಲಾಗಿದೆ. ಗಾಳಿ–ಮಳೆ, ವಿದ್ಯುತ್ ಕಂಬಗಳು ಮುರಿದು ಬಿದ್ದರೆ ಅವುಗಳನ್ನು ▶ 8ನೇ ಪುಟಕ್ಕೆ



ಅವಾಂತರವಾಗದಂತೆ ಕ್ರಮ



ಮೈಸೂರು, ಮೇ 22–(ಆರ್‌ಕೆ)– ಮಳೆ–ಗಾಳಿಯಂತಹ ನಿಸರ್ಗ ವಿಪತ್ತು ಸಂಭವಿಸಿದಾಗ ಅವಾಂತರ ತಡೆಗಟ್ಟಲು ಮೈಸೂರು ಮಹಾನಗರ ಪಾಲಿಕೆಯಿಂದ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಭಾನುವಾರ ಸುರಿದ ಮಳೆಯಿಂದ ಬೆಂಗಳೂರಲ್ಲಿ ಪ್ರಾಣ ಹಾನಿ, ಆಸ್ತಿ–ಪಾಸ್ತಿ ನಷ್ಟ ಉಂಟಾಗಿದ್ದು, ಮೈಸೂರಿನಲ್ಲೂ ಸುಮಾರು 30 ಕಡೆ ಮರ ಬಿದ್ದಿವೆ. ಅಲ್ಲಲ್ಲಿ ನೀರು ನಿಂತು ಸಂಚಾರಕ್ಕೂ ಅಡ್ಡಿಯುಂಟಾಗಿರುವುದನ್ನು ▶ 8ನೇ ಪುಟಕ್ಕೆ

ಇಂದಿನಿಂದ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ

ಮೈಸೂರು ನಗರದ 7 ಸೇರಿ ಜಿಲ್ಲೆಯಲ್ಲಿ 13 ಕೇಂದ್ರಗಳು, 7,350 ವಿದ್ಯಾರ್ಥಿಗಳು ನೋಂದಣಿ

ಮೈಸೂರು, ಮೇ 22(ಆರ್‌ಕೆ)–ನಾಳೆ (ಮೇ 23)ಯಿಂದ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗಳು ನಡೆಯಲಿವೆ. ಮೈಸೂರು ನಗರದ 7 ಸೇರಿದಂತೆ ಜಿಲ್ಲೆಯ 13 ಕೇಂದ್ರಗಳಲ್ಲಿ ನಡೆಯುವ ಪರೀಕ್ಷೆಗೆ 7,350 ಮಂದಿ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಶಾರದಾವಿಲಾಸ, ಡಿ.ಬನುಮಯ್ಯ, ಮಹಾರಾಜ, ಮಹಾರಾಣಿ, ಸೆಂಟ್ ಫಿಲೋಮಿನಾ, ಎಸ್‌ಬಿಆರ್‌ಆರ್, ಮಹಾಜನ, ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು ಹಾಗೂ ಎಲ್ಲಾ ತಾಲೂಕು ಕೇಂದ್ರಗಳಲ್ಲೊಂದರಂತೆ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಜೂನ್ 3ರವರೆಗೆ ನಡೆಯಲಿರುವ ದ್ವಿತೀಯ ಪಿಯುಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕೇಂದ್ರಗಳಲ್ಲಿ ನೋಂದಣಿ ಸಂಖ್ಯೆ, ಕೊಠಡಿ ಸಂಖ್ಯೆ ಮತ್ತಿತರ ಮಾಹಿತಿ ಪ್ರಕಟಿಸಲಾಗಿದ್ದು, ಕುಡಿಯುವ ನೀರು, ಶೌಚಾಲಯ ಮತ್ತಿತರ ಸೌಲಭ್ಯಗಳನ್ನು ಒದಗಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತ ಸೆಕ್ಷನ್ 144 ರೀತ್ಯಾ ನಿಷೇಧಾಜ್ಞೆ ಹೊರಡಿಸಲಾಗಿದ್ದು, ಪೊಲೀಸ್ ಭದ್ರತೆ ಒದಗಿಸಲಾಗಿದೆ.

ಎಸ್.ಎಂ.ಕೃಷ್ಣ, ಹೆಚ್.ಡಿ.ದೇವೇಗೌಡರನ್ನು ಭೇಟಿಯಾದ ಡಿಕೆಶಿ





ಬೆಂಗಳೂರು, ಮೇ 22– ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತಂದ ಹುಮ್ಮಸ್ಸಿನಲ್ಲಿರುವ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪಕ್ಷ ಭೇದ ಮರೆತು ಹಿರಿಯ ರಾಜಕಾರಣಿಗಳನ್ನು ಭೇಟಿ ಮಾಡುವ ಮೂಲಕ ಅವರ ಆಶೀರ್ವಾದ ಪಡೆದುಕೊಳ್ಳುತ್ತಿದ್ದಾರೆ. ಸೋಮವಾರ ಬೆಳಗ್ಗೆ ಬಿಜೆಪಿ ಹಿರಿಯ ಮುಖಂಡ ಎಸ್.ಎಂ.ಕೃಷ್ಣ ಅವರನ್ನು ಭೇಟಿಯಾಗಿದ್ದ ಡಿ.ಕೆ.ಶಿವಕುಮಾರ್, ಸಂಜೆ ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರನ್ನು ಭೇಟಿಯಾಗಿದ್ದಾರೆ. ಪದ್ಮನಾಭ ನಗರದಲ್ಲಿರುವ ನಿವಾಸಕ್ಕೆ ತೆರಳಿ ದೇವೇಗೌಡ ಅವರನ್ನು ಭೇಟಿಯಾಗಿದ್ದು, ಅವರ ಕಾಲುಗಳಿಗೆ ನಮಸ್ಕರಿಸಿ, ಶಾಲು ಹೊದಿಸಿ ಸನ್ಮಾನಿಸುವ ಮೂಲಕ ಆಶೀರ್ವಾದ ಪಡೆದುಕೊಂಡಿದ್ದಾರೆ.

ಇದೇ ಸಂದರ್ಭದಲ್ಲಿ ದೇವೇಗೌಡರ ಆರೋಗ್ಯ ಸೇರಿದಂತೆ ಹಲವು ವಿಚಾರ ಕುರಿತು ಮಾತುಕತೆ ನಡೆಸಿದ್ದಾರೆ. ಶಾಸಕ ಶರತ್ ಬಚ್ಚೇಗೌಡ ಸೇರಿದಂತೆ ಹಲವು ಮಂದಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಇದಕ್ಕೂ ಮುನ್ನಾ ಸದಾಶಿವನಗರದ ನಿವಾಸಕ್ಕೆ ತೆರಳಿ ಎಸ್‌ಎಂ ಕೃಷ್ಣ ಅವರನ್ನು ಭೇಟಿ ಮಾಡಿದ್ದಾರೆ. ಭಾನುವಾರ ರಾಜೀವ್ ಗಾಂಧಿ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ನಾನು ಎಸ್.ಎಂ.ಕೃಷ್ಣ ಶಿಷ್ಯನಲ್ಲ, ನಾನು ಬಂಗಾರಪ್ಪ ಶಿಷ್ಯ ಎಂದು ಹೇಳಿ ಅಚ್ಚರಿ ಮೂಡಿಸಿದ್ದ ಶಿವಕುಮಾರ್ ಮರುದಿನವೇ ಮಾಜಿ ಮುಖ್ಯಮಂತ್ರಿ ಭೇಟಿಯಾಗುವ ಮೂಲಕ ಡ್ಯಾಮೇಜ್ ಕಂಟ್ರೋಲ್‌ಗೆ ಮುಂದಾಗಿದ್ದಾರಾ ಎಂಬ ಮಾತು ಕೇಳಿ ಬಂದಿತ್ತು.

ಶಿಕ್ಷಣ ಭವಿಷ್ಯದ ಬದುಕು ರೂಪಿಸುತ್ತದೆ

ಸಾಹಿತಿ ಬನ್ನೂರು ರಾಜು ಅಭಿಮತ



ಮೈಸೂರು, ಮೇ 22–ಶಿಕ್ಷಣವೆಂಬುದು ವ್ಯಕ್ತಿತ್ವದ ಜೊತೆಗೆ ಭವಿಷ್ಯದಲ್ಲಿ ಗೌರವಯುತವಾದ ಸುಂದರ ಬದುಕನ್ನು ರೂಪಿಸಿಕೊಡುತ್ತದೆಯಾದ್ದರಿಂದ ವಿದ್ಯಾರ್ಥಿಗಳು ಸಂಪೂರ್ಣವಾಗಿ ಶಿಕ್ಷಣವನ್ನು ಕೈವಶ ಮಾಡಿಕೊಳ್ಳಬೇಕೆಂದೂ, ಕಲಿಕೆಯಲ್ಲಿ ಆಸಕ್ತಿ ಇದ್ದಲ್ಲಿ ಇದಾವುದೂ ಕಷ್ಟವಲ್ಲವೆಂದು ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ನಗರದ ರಾಮಾನುಜಾ ರಸ್ತೆಯಲ್ಲಿರುವ ಶ್ರೀ ಶಿರಡಿ ಸಾಯಿಬಾಬ ಮಂದಿರದಲ್ಲಿ ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗದ ಸಂಯುಕ್ತ ಆಶ್ರಯದಲ್ಲಿ ಪ್ರಸ್ತುತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉನ್ನತ ಸ್ಥಾನ ಗಳಿಸಿರುವ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ವಿದ್ಯಾರ್ಥಿಯೂ ಪ್ರಾಥಮಿಕ ಶಿಕ್ಷಣದಿಂದ ಪ್ರಾರಂಭಿಸಿ ಉನ್ನತ ಶಿಕ್ಷಣದ ತನಕವೂ ಪ್ರತಿಯೊಂದು ಹಂತದಲ್ಲೂ ಕಲಿಕೆಯಲ್ಲಿ ಹೆಚ್ಚೆಚ್ಚು ಆಸಕ್ತಿಯನ್ನು ಬೆಳೆಸಿಕೊಳ್ಳುತ್ತಾ ಹೋಗಬೇಕು ಹಾಗೂ ಅದನ್ನು ಹಾಗೆಯೇ ಉಳಿಸಿಕೊಂಡಲ್ಲಿ ಆಗ ಸಾಧನೆ ಎಂಬುದು ಶಿಕ್ಷಣದ ಮೂಲಕ ಕಲಿಕಾಸಕ್ತಿಯಲ್ಲಿ ಮುಂದಿರುವ ಸಾಧಕರ ಕೈವಶವಾಗುತ್ತದೆ ಎಂದರು.

ಆದರೆ ವಿದ್ಯಾರ್ಥಿ ದಿಸೆಯಲ್ಲಿ ಯಾರು ಕಲಿಕೆಯಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾರೋ ಅವರು ವಿದ್ಯಾರ್ಥಿ ಜೀವನದಲ್ಲಿ ಏನನ್ನೂ ಸಾಧಿಸಲಾಗದು. ಹಾಗೆಯೇ ಭವಿಷ್ಯದಲ್ಲಿ ಎಲ್ಲದರಲ್ಲೂ ವಿಫಲರಾಗುತ್ತಾರೆ. ಇದಾಗಬಾರದೆಂದರೆ ವಿದ್ಯಾರ್ಥಿಗಳು ಕಲಿಯುವಿಕೆಯಲ್ಲಿ ಎಂದಿಗೂ ಆಸಕ್ತಿ ಕಳೆದು ಕೊಳ್ಳಬಾರದು. ಸ್ಟೂಡೆಂಟ್ ಲೈಫ್ ಈಸ್ ಗೋಲ್ಡನ್ ಲೈಫ್ ಎನ್ನುತ್ತಾರೆ. ಈ ಮಾತು ಅಕ್ಷರಶಃ ಸತ್ಯ. ಇದು ಪ್ರತಿಯೊಬ್ಬ ವಿದ್ಯಾರ್ಥಿಯ ಜೀವನದಲ್ಲೂ ಸಾರ್ಥಕವಾಗಿ ಅವರ ಜೀವನ ಚಿನ್ನದಂತಾಗಬೇಕಾದರೆ ಶೈಕ್ಷಣಿಕ ಸಾಧನೆಯೇ ಮಾನದಂಡವಾಗುತ್ತದೆ. ಕಾಲಕ್ಕೆ ತುಂಬಾ ಮಹತ್ವವಿದೆ. ಕಣ್ಣಿಗೆ ಕಾಣದಂತೆ ತನ್ನ ಪಾಡಿಗೆ ತಾನು ನಿಲ್ಲದೆ ಓಡುವ ಕಾಲಕ್ಕೆ ಬೆಲೆ ಕಟ್ಟಲಾಗದು. ಕಳೆದು ಹೋದ ಕಾಲ ಎಂದೂ ಮರಳದು. ಆದ್ದರಿಂದ ವಿದ್ಯಾರ್ಥಿಗಳು ಕಾಲದ ಮಹತ್ವವನ್ನೂ ಅರ್ಥ ಮಾಡಿಕೊಂಡು ಸಿಗುವ ಕಾಲವನ್ನು ಅದು ಕಳೆದು ಹೋಗುವ ಮುನ್ನ ಕಿಂಚಿತ್ತೂ ವ್ಯರ್ಥ ಮಾಡದೆ ಕಲಿಕೆಗಾಗಿಯೇ ಅದನ್ನು ಮೀಸಲಿಟ್ಟು ಸದ್ಬಳಕೆ ಮಾಡಿಕೊಂಡು ಭವಿಷ್ಯದಲ್ಲಿ ದೇಶದ ಸತ್ಪ್ರಜೆಗಳಾಗಬೇಕು ಎಂದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿರುವ ವಿವಿಧ ಶಾಲೆಗಳ ಆಯ್ದ ವಿದ್ಯಾರ್ಥಿಗಳಾದ ಧನುಷ್ ಕೆ.ಅರಸ್, ಎಸ್.ಪವಿತ್ರಾ, ಪುಣ್ಯಾ, ಹರ್ಷಿಣಿ, ಪ್ರಧಾಯಿನಿ, ಪಿ.ತಾನ್ಯಾ, ನಿಶಾಂತ್ ಪಿ.ಶಾಸ್ತ್ರಿ, ಮಹಮದ್ ಸುಹೇಲ್, ಲತಾಶ್ರೀ, ಎಸ್.ಧನುಶ್, ಕಶ್ಯಪ್, ಎಸ್.ಲಕ್ಷ್ಮೀ, ಸಿ.ಪೂಜಾ, ವಿದ್ಯಾಶ್ರೀ, ಅಭಿನವ ರವಿಕುಮಾರ್, ಬೇಬಿಹಾಜಿರಾ, ಸಂಜಯ್, ಪೂಜಾ, ಗಣೇಶ, ಎಂ.ಕೃಷ್ಣ, ಆರ್.ನವೀನ್ ಅವರುಗಳಿಗೆ ಸಮಾಜ ಸೇವಕ ಯುವ ಉದ್ಯಮಿ ವೆಂಕಟೇಶ್ ಪ್ರಾಯೋಜಕತ್ವದಲ್ಲಿ ಪ್ರತಿಭಾ ಪುರಸ್ಕಾರ ನೀಡಿ ಗಣ್ಯರು ಗೌರವಿಸಿದರು.

ಗಾಳಿ–ಮಳೆಗೆ ಬೆಸ್ಕಾಂ ವ್ಯಾಪ್ತಿಯಲ್ಲಿ 546 ವಿದ್ಯುತ್ ಕಂಬಗಳು ಧರೆಗೆ!



ಬೆಂಗಳೂರು, ಮೇ 22– ಬೆಸ್ಕಾಂ ವ್ಯಾಪ್ತಿಯಲ್ಲಿ ಕಳೆದ ಎರಡು ದಿನಗಳಿಂದ ಸುರಿದ ಭಾರಿ ಗಾಳಿ–ಮಳೆಗೆ 546 ವಿದ್ಯುತ್ ಕಂಬಗಳು ಧರೆಗುರುಳಿವೆ.

ದುರಸ್ತಿ ಕಾರ್ಯ ಭರದಿಂದ ಸಾಗಿದ್ದು, ಹಾನಿಯ ಅಂದಾಜು ಮಾಡಲಾಗುತ್ತಿದೆ. ಭಾರೀ ಮಳೆ–ಗಾಳಿಗೆ ವಿದ್ಯುತ್ ಮೂಲ ಸೌಕರ್ಯಗಳು ಹಾನಿಗೊಂಡಿದ್ದು, ವಿದ್ಯುತ್ ವ್ಯತ್ಯಯ ಉಂಟಾಗಿರುವ ಪ್ರದೇಶಗಳಲ್ಲಿ ವಿದ್ಯುತ್ ಮರು ಸ್ಥಾಪನೆಗೆ ಕ್ರಮ ವಹಿಸಲಾಗಿದೆ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

ಶನಿವಾರ ಬೆಂಗಳೂರು ನಗರ ಸೇರಿ ಬೆಸ್ಕಾಂ ವ್ಯಾಪ್ತಿಯ ಹಲವು ಭಾಗಗಳಲ್ಲಿ 142 ಕಂಬಗಳು ಮುರಿದಿದ್ದು ಹಾಗೂ 20 ಟಿಸಿಗಳು ಹಾನಿಗೊಳಗಾಗಿವೆ. ಹಾಗೆಯೇ ಭಾನುವಾರ 404 ಕಂಬಗಳು ಮುರಿದಿದ್ದು, 44 ಟಿಸಿಗಳು ಹಾಗೂ 9 ಡಬಲ್ ಪೋಲ್ ಸ್ಟ್ರಕ್ಚರ್‌ಗಳು ಹಾನಿಗೊಳಗಾಗಿವೆ. ಬೆಸ್ಕಾಂ ಅಭಿಯಂತರರು ಹಾಗೂ ಸಿಬ್ಬಂದಿ ಸ್ಥಳಕ್ಕೆ ತೆರಳಿದ್ದು, ದುರಸ್ತಿ ಕಾರ್ಯದಲ್ಲಿ ತೊಡಗಿದ್ದಾರೆ. ಕೆಲ ಪ್ರದೇಶದಲ್ಲಿ ಭಾರೀ ಗಾಳಿಗೆ ಮರಗಳು ವಿದ್ಯುತ್ ತಂತಿ ಮೇಲೆ ಬಿದ್ದಿದ್ದು, ಅವುಗಳ ತೆರವು ಕಾರ್ಯ ಮಾಡಲಾಗಿದೆ ಎಂದು ಬೆಸ್ಕಾಂ ಎಂಡಿ ಮಾಹಿತಿ ನೀಡಿದ್ದಾರೆ.

ಬೆಂಗಳೂರು ನಗರ ವ್ಯಾಪ್ತಿಯ ಹೆಬ್ಬಾಳ, ಮಲ್ಲೇಶ್ವರಂ, ಯಲಹಂಕ, ವಿಜಯನಗರ, ನಾಗರಭಾವಿ, ಮಹಾಲಕ್ಷ್ಮಿ ಬಡಾವಣೆ, ಹೆಸರಘಟ್ಟ, ಕೋರಮಂಗಲ, ರಾಜನಕುಂಟೆ, ಜಯನಗರ, ಶಿವಾಜಿನಗರ, ಇಂದಿರಾನಗರ, ಕೆಂಗೇರಿ, ಆರ್.ಆರ್. ನಗರ, ಪೀಣ್ಯ ಸೇರಿದಂತೆ ಮತ್ತಿತರ ಪ್ರದೇಶಗಳಲ್ಲಿ, ಬೆಸ್ಕಾಂನ ಗ್ರಾಮಾಂತರ ವ್ಯಾಪ್ತಿಯ ತುಮಕೂರು, ಮಾಲೂರು, ಸರ್ಜಾಪುರ, ಚಂದಾಪುರ, ಶಿಡ್ಲಘಟ್ಟ, ಕೆಜಿಎಫ್, ಕೈವಾರ, ಮಧುಗಿರಿ, ಪಾವಗಡ, ಹಿರಿಯೂರು, ಚಿಂತಾಮಣಿ, ತಿಪಟೂರು, ರಾಮನಗರ ಸೇರಿದಂತೆ ಮತ್ತಿತರ ಕಡೆ ವಿದ್ಯುತ್ ವ್ಯತ್ಯಯ ಉಂಟಾಗಿದೆ. ವಿದ್ಯುತ್ ಕಂಬಗಳ ಮೇಲೆ ಬಿದ್ದಿರುವ ಮರ ಹಾಗೂ ಕೊಂಬೆಗಳನ್ನು ತೆರವುಗೊಳಿಸಲಾಗಿದ್ದು, ವಿದ್ಯುತ್ ಮರುಸ್ಥಾಪನೆ ಮಾಡಲಾಗಿದೆ. ಮುರಿದಿರುವ ಕಂಬಗಳ ಬದಲಾವಣೆ ಮಾಡಿ ಶೀಘ್ರ ವಿದ್ಯುತ್ ಪೂರೈಸಲು ಕ್ರಮ ವಹಿಸಲಾಗಿದೆ ಎಂದು ತಿಳಿಸಿದ್ದಾರೆ.

ಸಹಾಯವಾಣಿಗೆ ದೂರುಗಳ ಸುರಿಮಳೆ: ಭಾನುವಾರ ಒಟ್ಟು 44,784 ಕರೆಗಳು ಬೆಸ್ಕಾಂ ಸಹಾಯವಾಣಿ 1912ಕ್ಕೆ ಬಂದಿದ್ದು, ಈ ಪೈಕಿ 22,249 ದೂರುಗಳನ್ನು ದಾಖಲಿಸಿಕೊಳ್ಳಲಾಗಿದೆ. ಹಾಗೆಯೇ ಪ್ರತಿ 1 ಗಂಟೆ ಅವಧಿಯಲ್ಲಿ ಸರಾಸರಿ 1691 ಕರೆಗಳು ಬಂದಿದ್ದು, 779 ದೂರುಗಳು ದಾಖಲಾಗಿವೆ. ಹೆಚ್ಚಿನ ಕರೆಗಳು ಗಾಳಿ–ಮಳೆಯಿಂದಾಗಿ ವಿದ್ಯುತ್ ವ್ಯತ್ಯಯಕ್ಕೆ ಸಂಬಂಧಿಸಿದ್ದಾಗಿದೆ. ವಿದ್ಯುತ್ ಅವಘಡ ಮತ್ತು ಅಪಘಾತ ತಡೆಗೆ ಸಹಾಯವಾಣಿ ಎಚ್ಚರದಿಂದ ಕಾರ್ಯನಿರ್ವಹಿಸುತ್ತಿದ್ದು, ದೂರುಗಳನ್ನು ದಾಖಲಿಸಿಕೊಂಡು ಪರಿಹಾರಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ರವಾನಿಸುತ್ತಿದೆ.

ಬೆಂಗಳೂರು ಅಂಡರ್ ಪಾಸ್‌ನಲ್ಲಿ ಕಾರು ಮುಳುಗಿ ಟೆಕ್ಕಿ ಸಾವು ಪ್ರಕರಣ

ಕ್ಯಾಬ್ ಚಾಲಕನ ಬಂಧನ



ಬೆಂಗಳೂರು, ಮೇ 22– ಬೆಂಗಳೂರು ನಗರದ ಕೆಆರ್ ಸರ್ಕಲ್ ಅಂಡರ್‌ಪಾಸ್‌ನಲ್ಲಿ ಕಾರು ಮುಳುಗಡೆಯಾಗಿ ಟೆಕ್ಕಿ ಸಾವನ್ನಪ್ಪಿದ ಪ್ರಕರಣ ಸಂಬಂಧ ಕಾರು ಚಾಲಕನನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ನಗರದ ಕೆ.ಆರ್.ಸರ್ಕಲ್ ಅಂಡರ್‌ಪಾಸ್‌ನಲ್ಲಿ ಕಾರು ಮುಳುಗಡೆಯಾಗಿ ಟೆಕ್ಕಿ ಸಾವನ್ನಪ್ಪಿದ ಪ್ರಕರಣ ಸಂಬಂಧ ಕಾರು ಚಾಲಕನನ್ನು ಹಲಸೂರು ಗೇಟ್ ಠಾಣಾ ಪೊಲೀಸರು ಬಂಧಿಸಿದ್ದಾರೆ. ಕಾರು ಚಾಲಕ ಹರೀಶ್ ಎಂಬಾತನನ್ನು ಹಲಸೂರು ಗೇಟ್ ಠಾಣಾ ಪೊಲೀಸರು ಬಂಧಿಸಿದ್ದು, ಮೃತ ಯುವತಿ ಸಹೋದರ ನೀಡಿದ ದೂರಿನ ಅನ್ವಯ ಕ್ಯಾಬ್ ಚಾಲಕ ಹರೀಶ್ ಮತ್ತು ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ಹಾಕಲಾಗಿದೆ.

ಕಾರಿನಲ್ಲಿದ್ದ ಪ್ರಯಾಣಿಕರು ಬೇಡ ಎಂದು ಹೇಳಿದರೂ ಕೇಳದ ಚಾಲಕ ಹರೀಶ್, ನೀರು ತುಂಬಿದ್ದ ಅಂಡರ್ ಪಾಸ್‌ನಲ್ಲಿ ಕಾರು ಚಲಾಯಿಸಿದ್ದಾನೆ. ಈ ವೇಳೆ ಕಾರಿನ ಬಾಗಿಲು ಬಂದ್ ಆದ ಹಿನ್ನೆಲೆ ಪ್ರಯಾಣಿಕರು ಕಾರಿನಿಂದ ಇಳಿಯಲು ಯತ್ನಿಸಿದಾಗ ಹರೀಶ್, ಬೇಡ ತಾನೇ ಕಾರ್ ಆನ್ ಮಾಡಿ ಕರೆದೊಯ್ಯುವುದಾಗಿ ಹೇಳಿದ್ದ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ದೂರಿನಲ್ಲಿ ಬಿಬಿಎಂಪಿ ಅಧಿಕಾರಿಗಳ ನಿರ್ಲಕ್ಷ್ಯವೂ ಉಲ್ಲೇಖ: ಅಂತೆಯೇ ಬಿಬಿಎಂಪಿ ಬೇಜವಾಬ್ದಾರಿಗೆ ಅಂಡರ್ ಪಾಸ್‌ನಲ್ಲಿ ಮಳೆ ನೀರು ತುಂಬಿದೆ ಎಂದು ಹೇಳಲಾಗಿದ್ದು ಈ ಬಗ್ಗೆಯೂ ದೂರಿನಲ್ಲಿ ಉಲ್ಲೇಖ ಮಾಡಲಾಗಿದೆ. ಭಾನುರೇಖಾ ಸಾವಿಗೆ ಚಾಲಕ ಹರೀಶ್, ಬಿಬಿಎಂಪಿ ಕಾರಣ ಎಂದು ಮೃತಳ ಸಹೋದರ ಬಿಬಿಎಂಪಿ ಹಾಗೂ ಕಾರ್ ಚಾಲಕನ ವಿರುದ್ಧ ದೂರು ನೀಡಿದ್ದರು. ಅದರಂತೆ ಕಾರು ಚಾಲಕನ್ನು ಬಂಧಿಸಲಾಗಿದೆ. ಮಳೆ ಬರುತ್ತದೆ ಎಂಬ ಮುನ್ಸೂಚನೆ ಇದ್ದರೂ ಮುನ್ನೆಚ್ಚರಿಕೆ ಕೈಗೊಳ್ಳದ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಕ್ರಮವಾಗುವುದೇ ಕಾದುನೋಡಬೇಕಿದೆ.

ಏನಿದು ಘಟನೆ?: ನಿನ್ನೆ ಸಂಜೆ ಸುರಿದ ಭಾರೀ ಮಳೆಗೆ ಕೆ.ಆರ್. ಸರ್ಕಲ್‌ನ ಅಂಡರ್‌ಪಾಸ್‌ನಲ್ಲಿ ಸುಮಾರು 5 ಅಡಿಯಷ್ಟು ಎತ್ತರಕ್ಕೆ ನೀರು ತುಂಬಿತ್ತು. ಹೀಗಿದ್ದರೂ ಆರು ಮಂದಿ ಪ್ರಯಾಣಿಸುತ್ತಿದ್ದ ಕಾರು ಈ ಅಂಡರ್‌ಪಾಸ್‌ನಲ್ಲಿ ಮುಳುಗಿತ್ತು. ಕೂಡಲೇ ಎಚ್ಚೆತ್ತ ಸ್ಥಳೀಯರು, ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ರಕ್ಷಣಾ ಕಾರ್ಯ ನಡೆಸಿ ಆರು ಮಂದಿಯನ್ನು ರಕ್ಷಿಸಿದ್ದರು. ಈ ಪೈಕಿ ತೀವ್ರ ಅಸ್ವಸ್ಥಗೊಂಡಿದ್ದ ಬಾನುರೇಖಾ ಸಾವನ್ನಪ್ಪಿದ್ದಳು. ಘಟನೆ ನಂತರ ಕಾರು ಚಾಲಕ ಪರಾರಿಯಾಗಿದ್ದನು.

ಈ ಘಟನೆ ನಡೆದ ನಂತರ ಅದೇ ನೀರಿನಲ್ಲಿ ಆಟೋವೊಂದು ಮುಳುಗಡೆಯಾಗಿತ್ತು. ಆಟೋ ಚಾಲಕ ಬಚಾವ್ ಆಗಿದ್ದರೆ ಮಹಿಳೆ ಸಂಕಷ್ಟಕ್ಕೆ ಸಿಲುಕಿದ್ದಳು. ಈಕೆಂಯನ್ನೂ ಅಗ್ನಿಶಾಮಕದಳದ ಸಿಬ್ಬಂದಿ ರಕ್ಷಣೆ ಮಾಡಿದ್ದರು.

ಡಾ.ವಿಜಯಾ ದಬ್ಬೆ ನೆನಪಿನ ಕವನ, ಕಥಾ ಸ್ಪರ್ಧೆ ಫಲಿತಾಂಶ



ಡಾ.ವಿಜಯಾ ದಬ್ಬೆ

ಮೈಸೂರು, ಮೇ 22– ಮೈಸೂರಿನ 'ಸಮತಾ ಅಧ್ಯಯನ ಕೇಂದ್ರ'ವು ಸ್ಥಾಪಕ ಅಧ್ಯಕ್ಷೆ ಡಾ.ವಿಜಯಾ ದಬ್ಬೆ ಅವರ ನೆನಪಿನಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ರಾಜ್ಯಮಟ್ಟದ 'ಕವನ/ ಕಥಾ ಸ್ಪರ್ಧೆ–2023'ಯಲ್ಲಿ ಬೆಂಗಳೂರು ವಿಜಯಾ ಟೀಚರ್ಸ್ ಕಾಲೇಜಿನ ಎಂ.ಸಿ.ಜಗದೀಶ (ಕವನ), ಉಜಿರೆ ಎಸ್‌ಡಿಎಂ ಕಾಲೇಜಿನ ಜಿ.ಎಂ.ಸಂಜಯ್ (ಕಥೆ) ಪ್ರಥಮ ಬಹುಮಾನ ಪಡೆದಿದ್ದಾರೆ.

ಕವನ ವಿಭಾಗದಲ್ಲಿ ಕಾಸರಗೋಡಿನ ಕೇರಳ ಕೇಂದ್ರೀಯ ವಿವಿಯ ಕೆ.ಸ್ವಾತಿ, ಸಾಗರ ತಾಲೂಕು ಹೊಸಕೊಪ್ಪದ ಎಚ್.ಜಿ.ಅಭಿನಂದನ್, ಕಥಾ ವಿಭಾಗದಲ್ಲಿ ಸಕಲೇಶಪುರ ಜೆಎಸ್‌ಎಸ್ ಮಹಾವಿದ್ಯಾಲಯದ ಶಿವಶಂಕರ ಕಡದಿನ್ನಿ, ಕೇರಳ ಕೇಂದ್ರೀಯ ವಿವಿಯ ಆರ್.ನವ್ಯಾ ಕ್ರಮವಾಗಿ ದ್ವಿತೀಯ, ತೃತೀಯ ಬಹುಮಾನ ಪಡೆದಿದ್ದಾರೆ.

ಪ್ರೋತ್ಸಾಹಕರ ಬಹುಮಾನ ಪಡೆದವರು:

ಕವನ ವಿಭಾಗ: ಪಿ.ರಂಜಿತಾ (ಕೇರಳ ಕೇಂದ್ರೀಯ ವಿವಿ), ಜಿ.ಎಂ.ಸಂಜಯ್ (ಉಜಿರೆ ಎಸ್‌ಡಿಎಂ ಕಾಲೇಜು), ಚೇತನ್ (ಮೈಸೂರು ಕುವೆಂಪುನಗರ ಪ್ರ.ದ. ಕಾಲೇಜು), ತರುಣ್ ವಿಶ್ವಜಿತ್ (ಚಿಕ್ಕಬಳ್ಳಾಪುರ ಪ್ರ.ದ.ಕಾಲೇಜು), ಎನ್.ಲಾವಣ್ಯ (ಎಚ್.ಡಿ.ಕೋಟೆ ತಾ.ರಾಗಲಕುಪ್ಪೆ), ಲಕ್ಷ್ಮಿ ಶ್ರೀಶೈಲ ಕಾತ್ರಾಳ (ಹೊನವಾಡ, ವಿಜಯಪುರ ಜಿಲ್ಲೆ), ಆನಂದಕುಮಾರ್ (ಮೈಸೂರು ಸಿದ್ಧಾರ್ಥನಗರ ಪ್ರ.ದ. ಕಾಲೇಜು), ಬಿ.ಎಸ್.ಕಿಶನ್‌ಗೌಡ (ಮೂಡುಬಿದಿರೆ ಆಳ್ವಾಸ್ ಕಾಲೇಜು), ಶಿಲ್ಪಾ ಶ್ರೀನಿವಾಸ ರಾಜು (ಸಂತ ಫ್ರಾನ್ಸಿಸ್ ಕಾಲೇಜು, ಕೋರಮಂಗಲ), ಸುಮಾ ಎಂ.(ಸುರಾನಾ ಕಾಲೇಜು, ಪೀಣ್ಯಾ ಕ್ಯಾಂಪಸ್).

ಕಥಾ ವಿಭಾಗ: ಸಾಧನ ಕೆ.ಜೋಷಿ (ಬಿಜಿಎಸ್ ಕಾಲೇಜು, ಗುರುಪುರ, ಶಿವಮೊಗ್ಗ), ಸಿದ್ಧಾರೂಢ ಗುಗ್ಗರಿ (ಎಸ್‌ಆರ್ ಎಫ್‌ಜಿಸಿ ಕಾಲೇಜು, ಬೆಳಗಾವಿ), ದೇವಿಕಾ (ಕೇರಳ ಕೇಂದ್ರೀಯ ವಿವಿ, ಕಾಸರಗೋಡು), ಅಂಕಿತಾ ವಿ.ಎ.(ಬಿಜಿಎಸ್ ಪಿಯು ಕಾಲೇಜು, ಗೌರಿಬಿದನೂರು), ವಿನಾಯಕ ಸ.ಹಿರೇಮಠ (ಬಿವಿವಿ ಸಂಘ ಶಿಕ್ಷಣ ಮಹಾವಿದ್ಯಾಲಯ, ಬಾಗಲಕೋಟೆ), ಪವಿತ್ರ ಎಸ್.ಪಂಚಣ್ಣವರ್ (ಐಎಸ್ ಯಾದವಾಡ ಪ್ರ.ದ.ಕಾಲೇಜು, ರಾಮದುರ್ಗ, ಬೆಳಗಾವಿ).

ತೀರ್ಪುಗಾರರು: ಡಾ.ಮೀನಾ ಮೈಸೂರು, ಡಾ.ಸಂತೋಷ್ ಚೊಕ್ಕಾಡಿ, ಡಾ.ಎಂ.ಎಸ್. ವೇದಾ (ಕವನ), ಡಾ.ಸುಮಾ ಎಂಬಾರ್, ಡಾ.ಚಿಕ್ಕಮಗಳೂರು ಗಣೇಶ್, ಡಾ.ಎಚ್.ಎಂ. ಕಲಾಶ್ರೀ (ಕಥಾ ವಿಭಾಗ) ಇವರು ತೀರ್ಪುಗಾರರಾಗಿದ್ದರು. ಜೂನ್ 1ರಂದು ಬಹುಮಾನ ವಿತರಣಾ ಸಮಾರಂಭವು ಮೈಸೂರಿನಲ್ಲಿ ನಡೆಯಲಿದೆ.


ನೂತನ ರಾಜಯೋಗ ಆಧ್ಯಾತ್ಮಿಕ ಶಿಕ್ಷಣ ಕೇಂದ್ರ ಉದ್ಘಾಟನೆ

ಪುನರ್ಜನ್ಮದ ಜ್ಞಾನದಿಂದ ಅಪರಾಧಗಳ ನಿರ್ಮೂಲನೆ ಸಾಧ್ಯ

ಮೈಸೂರು, ಮೇ 22– ಇಂದು ಜಗತ್ತಿನಾದ್ಯಂತ ಅಪರಾಧ ಪ್ರಕರಣಗಳು ಜಾಸ್ತಿಯಾಗುತ್ತಿದ್ದು, ಇದರ ನಿರ್ಮೂಲನೆಗಾಗಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಕಲಿಸುವ ರಾಜಯೋಗ ಕರ್ಮಸಿದ್ಧಾಂತ ಪುನರ್ಜನ್ಮದ ಜ್ಞಾನದಿಂದ ಅಪರಾಧಗಳು ನಿರ್ಮೂಲನೆಯಾಗಲು ಸಾಧ್ಯ ಎಂದು ನಿವೃತ್ತ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ನಾಗಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸರದಾರ ವಲ್ಲಭಬಾಯಿ ಪಟೇಲ್ ನಗರದಲ್ಲಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ನೂತನ ರಾಜಯೋಗ ಆಧ್ಯಾತ್ಮಿಕ ಶಿಕ್ಷಣ ಕೇಂದ್ರವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಈ ಸಂಸ್ಥೆಯು 1936ರಲ್ಲಿ ಸಣ್ಣ ಮಹಿಳೆಯರ ಸಂಘಟನೆಯೊಂದಿಗೆ ಪ್ರಾರಂಭವಾಗಿ ಇಂದು ವಿಶ್ವದಾದ್ಯಂತ 147 ರಾಷ್ಟ್ರಗಳವರೆಗೆ ಅತಿ ಕಡಿಮೆ ಸಮಯದಲ್ಲಿ ತಲುಪಿರುವುದು ಶ್ಲಾಘನೀಯ. ಏಕೆಂದರೆ ಇಲ್ಲಿ ಯಾರೇ ಬಂದರೂ ಶಾಂತಿಯ ವೈಬ್ರೇಷನ್ ಪ್ರತಿಯೊಬ್ಬರನ್ನು ಆಕರ್ಷಿಸುತ್ತಿದೆ ಎಂದರು. ಜನರಿಗೆ ತಾವು ಮಾಡುವ ಕರ್ಮಗಳ ಆದಿ ಮಧ್ಯ ಅಂತ್ಯದ ಫಲಿತಾಂಶ ಅರಿಯದೆ ಇರುವ ಕಾರಣ ಅಪರಾಧಗಳು ಪೊಲೀಸ್ ಠಾಣೆಗಳು, ಕೋರ್ಟ್‌ಗಳು ಜಾಸ್ತಿಯಾಗುತ್ತಿವೆ. ಇದು ಒಳ್ಳೆಯ ಬೆಳವಣಿಗೆಯಲ್ಲ ಎಂದು ವಿಷಾದಿಸಿದರು.

ಹಿರಿಯ ಆಧ್ಯಾತ್ಮಿಕ ಚಿಂತಕ ಬಿ.ಕೆ.ರಂಗನಾಥ್ ಮಾತನಾಡಿ, ಇಂದು ಜಗತ್ತು ಅಶಾಂತಿಯಿಂದ ತತ್ತರಿಸುತ್ತಿದ್ದು, ಶಾಂತಿ ಅಗಾಧ ಪ್ರಕಂಪನ ಅಥವಾ ಶಾಂತಿಯ ದಿನವನ್ನು ಮಾಡುವ ಅವಶ್ಯಕತೆಯಿದ್ದು, ಇದನ್ನು ಕಲಿಸುವ ದೃಷ್ಟಿಯಿಂದ ಈ ಸೇವಾ ಕೇಂದ್ರವನ್ನು ತೆರೆಯಲಾಗಿದೆ ಎಂದರು.




ಮೈಸೂರಿನ ಸರ್ದಾರ ವಲ್ಲಭಬಾಯಿ ಪಟೇಲ್ ನಗರದಲ್ಲಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿವಿ ನೂತನ ರಾಜಯೋಗ ಆಧ್ಯಾತ್ಮಿಕ ಶಿಕ್ಷಣ ಕೇಂದ್ರವನ್ನು ಉದ್ಘಾಟಿಸಿ ನಿವೃತ್ತ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ನಾಗಪ್ಪ ಮಾತನಾಡಿದರು.

ಸಹಾಯಕ ಪೊಲೀಸ್ ಆಯುಕ್ತ ಗಜೇಂದ್ರ ಪ್ರಸಾದ್ ಮಾತನಾಡಿ, ಒತ್ತಡ ನಿವಾರಣೆಗಾಗಿ ಉನ್ನತ ಚಿಂತನೆ ಆಚಾರ ವಿಚಾರದಲ್ಲಿ ಸರಳತೆ ಕೆಟ್ಟ ಅಭ್ಯಾಸಗಳಿಂದ ದೂರ ವಿದ್ದರೆ ಖಂಡಿತ ಮನಶಾಂತಿ ಕಂಡುಕೊಳ್ಳಬಹುದು ಎಂದರು.

ಉಪನ್ಯಾಸಕ ಪಂಡಿತ್ ಸಿದ್ದಲಿಂಗಸ್ವಾಮಿ, ನಿವೃತ್ತ ಎಸ್‌ಬಿಐ ಮ್ಯಾನೇಜರ್ ರಂಗಸ್ವಾಮಿ, ನಿವೃತ್ತ ಡಿವೈಎಸ್ಪಿ ಕೃಷ್ಣಮೂರ್ತಿ ತಮ್ಮ ನಿಜ ಜೀವನದ ಅನುಭವ ಹಂಚಿಕೊಂಡರು. ಗೀತಾ ಗಾಯನ ಹಾಗೂ ನೃತ್ಯವನ್ನು ಹಮ್ಮಿಕೊಳ್ಳಲಾಗಿತ್ತು. ದಿವ್ಯ ಸಾನ್ನಿಧ್ಯವನ್ನು ವಹಿಸಿದ್ದ ಮೈಸೂರು ಉಪವಿಭಾಗದ ಮುಖ್ಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ ಆಶೀರ್ವದಿಸಿ ಇಲ್ಲಿ ಕಲಿಸುವ ರಾಜಯೋಗ ಶಿಕ್ಷಣವು ಮನುಷ್ಯನ ಸರ್ವತೋಮುಖ ಪ್ರಗತಿಗೆ ಆಧಾರವಾಗಿದ್ದು ಇಲ್ಲಿನ ಬಡಾವಣೆಯ ಜನತೆ ಸಂಪೂರ್ಣ ಪ್ರಯೋಜನ ಪಡೆಯುತ್ತೀರ ಎಂದರು.

ಕಾರ್ಯಕ್ರಮದಲ್ಲಿ ಬಿ.ಕೆ.ರಾಮಚಂದ್ರ, ಬಿ.ಕೆ.ರಶ್ಮಿ, ಬಿ.ಕೆ.ಶಿವಲೀಲ, ಬಿ.ಕೆ.ಮಂಜುಳ, ಮನಿಯನ್ನ ಕುಮಾರ್ ಬಿ.ಕೆ.ಆರಾಧ್ಯ ಹಾಜರಿದ್ದರು. ಬಡಾವಣೆಯ ರಾಜಬೀದಿಗಳಲ್ಲಿ ರಾಜಯೋಗ ವಿದ್ಯಾರ್ಥಿಗಳು ಹಾಗೂ ಬ್ರಹ್ಮಾಕುಮಾರ, ಬ್ರಹ್ಮಾಕುಮಾರಿಯರಿಂದ ಶಾಂತಿ ಶೋಭಾ ಯಾತ್ರೆಯನ್ನು ಹಮ್ಮಿಕೊಳ್ಳಲಾಗಿತ್ತು.

ಇಂದಿನಿಂದ 2 ದಿನ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು, ಮೇ 22–ಹುಲ್ಲಹಳ್ಳಿ, ಹುರಾ ಮತ್ತು ಸಿಂಧುವಳ್ಳಿ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೇ 23, 24ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಕೆಳಕಂಡ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕಾಂ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 23: ಹುಲ್ಲಹಳ್ಳಿ, ಶಿರಮಳ್ಳಿ, ಹಗಿನವಾಳು, ರಾಂಪುರ, ಹೆಗ್ಗಡಹಳ್ಳಿ, ದುಗ್ಗಳ್ಳಿ ಮತ್ತು ಹುಸ್ಕೂರು, ಕುರಿಹುಂಡಿ, ಹಾಲಹಳ್ಳಿ, ವಳಗೆರೆ, ಹರತಲೆ, ಮೊಬ್ಬಳ್ಳಿ, ಗಾಂಧಿ ಗ್ರಾಮ, ಬ್ಯಾಳಾರು, ಮಾದಾಪುರ, ಕಾರ್ಯ ಗ್ರಾಮ ಪಂಚಾಯಿತ್ತಿ ಮತ್ತು ಗ್ರಾಮಗಳ ಸುತ್ತಮುತ್ತ.

ಮೇ 24 : ಹುರಾ, ಹಾಡ್ಯ, ಹಲ್ಲರೆ, ದೇವರಾಯಶೆಟ್ಟಿಪುರ ಮತ್ತು ಹೆಡಿಯಾಲ ಗ್ರಾಮಗಳ ಸುತ್ತಮುತ್ತ.

ಪದವಿ ಪ್ರಮಾಣ ಪತ್ರ ಪಡೆಯಲು ಅರ್ಜಿ ಆಹ್ವಾನ



ಮೈಸೂರು,ಮೇ 22–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 18ನೇ ವಾರ್ಷಿಕ ಘಟಿಕೋತ್ಸವವು ಜೂನ್ ತಿಂಗಳಿನಲ್ಲಿ ನಡೆಯಲಿದ್ದು, 2018–19, 2019–20 ಹಾಗೂ 2020–21ನೇ ಸಾಲಿನ ಸ್ನಾತಕ, ಸ್ನಾತಕೋತ್ತರ ಹಾಗೂ ವಿದ್ಯಾರ್ಥಿಗಳಿಂದ ಪದವಿ ಪ್ರಮಾಣ ಪತ್ರಗಳನ್ನು ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಹರು www.ksoumysuruac.in ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ನಿಗದಿತ ನಮೂನೆಯಲ್ಲಿ ಅರ್ಜಿ ಭರ್ತಿ ಮಾಡಿ ಆನ್‌ಲೈನ್ ಮುಖಾಂತರವೇ ಸಲ್ಲಿಸಿ, ಉಪಸ್ಥಿತಿಯಲ್ಲಿ ಅಥವಾ ಅನುಪಸ್ಥಿತಿಯಲ್ಲಿ ಪದವಿ ಪ್ರಮಾಣ ಪತ್ರವನ್ನು ಪಡೆಯಬಹುದಾಗಿದೆ. ಪದಕ ಮತ್ತು ನಗದು ಬಹುಮಾನ ಪಡೆದ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು, ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಸ್ನಾತಕೋತ್ತರ ಅಭ್ಯರ್ಥಿಗಳು ಹಾಗೂ ಪಿಹೆಚ್‌ಡಿ ಪದವೀಧರರು ವಾರ್ಷಿಕೋತ್ಸವದಲ್ಲಿ ಉಪಸ್ಥಿತರಾಗಲು ಅರ್ಹರಾಗಿರುತ್ತಾರೆ. ಇವರು ಅರ್ಜಿ ಸಲ್ಲಿಸಲು ಜೂ.9 ಕಡೆಯ ದಿನವಾಗಿದ್ದು, 100 ರೂ. ದಂಡ ಶುಲ್ಕದೊಡನೆ ಜೂ.15ರವರೆಗೆ ಶುಲ್ಕ ಪಾವತಿಸಬಹುದು ಎಂದು ಪರೀಕ್ಷಾಂಗ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.5.2023 ಮಂಗಳವಾರ, ಮಳೆ ನಕ್ಷತ್ರ: ಕೃತ್ತಿಕ, 11.05.2023ರಿಂದ 24.05.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ,
ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ–ಡಾ.ಟಿ.ಎಸ್.ಗೋಪಾಲ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ–ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, ಪ್ರಸ್ತುತಿ–ಪ್ರೊ.ಲಕ್ಷ್ಮೀನಾರಾಯಣ ಅರೋರಾ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿ ಓದಿನ ಕುರಿತು ಕೇಳುಗರ ಪ್ರತಿಕ್ರಿಯೆ, ಪ್ರಸ್ತುತಿ–ಎಸ್.ಲಕ್ಷ್ಮೀನಾರಾಯಣ, 8.30 ಕರೆಗೊಂದು ಗೀತೆ, 10.00 ಮೌನದಾಚೆಯ ಬೆಳಕು–ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ. ನಿರ್ದೇಶನ ಹಾಗೂ ನಿರೂಪಣ ಸಾಹಿತ್ಯ– ಎಸ್.ಶಂಕರ್, ನಿರ್ಮಾಣ–ಗೀತಾ ರಮಾನಂದ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆಗಳು–ಬಾಳಪ್ಪ ಹುಕ್ಕೇರಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಜಿ.ಎಸ್.ಕಮಲ ಮತ್ತು ಜಿ.ಎಸ್.ರಾಜಲಕ್ಷ್ಮಿ–ಯುಗಳ ಗಾಯನ, 4.00 ಕಥಾ ಕಾಲಕ್ಷೇಪ "ವೀರ ಅಭಿಮನ್ಯು", ಪ್ರಸ್ತುತಿ– ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ– ಅರಣ್ಯ ಕೃಷಿ–ರೈತರಿಗೆ ಇರುವ ಅವಕಾಶಗಳು ಮತ್ತು ಸೌಲಭ್ಯಗಳು–ಈ ಬಗ್ಗೆ ನಿವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಹೆಚ್.ಸಿ.ಕಾಂತರಾಜ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಜಿ.ಶಾಂತಕುಮಾರ್, 9.15 ಯಕ್ಷಗಾನದ ಹಾಡುಗಳು–ಪ್ರಸಾದ್ ಭಟ್ ಬಲಿಪ, 9.30 ಜಿ.ಶ್ರೀಕಾಂತ್–ಹಾಡುಗಾರಿಕೆ, 10.30 ಗಮಕ ವ್ಯಾಖ್ಯಾನ, ವಾಚನ– ಪದ್ಮಾ ಶ್ರೀವತ್ಸ್, ವ್ಯಾಖ್ಯಾನ–ಡಾ.ಎನ್.ಕೆ.ರಾಮಶೇಷನ್

■ **ಜೆಎಸ್‌ಎಸ್ ಮೈಸೂರ್ ಅರ್ಬನ್ ಹಾತ್, ಮೈಸೂರು:** ಗುಜರಾತ್ ಹ್ಯಾಂಡಿಕ್ರಾಫ್ಟ್ ಉತ್ಸವ. ಸ್ಥಳ ಅರ್ಬನ್ ಹಾತ್ ಆವರಣ, ಹೆಬ್ಬಾಳು ಕೈಗಾರಿಕ ಪ್ರದೇಶ, ರಿಂಗ್ ರೋಡ್. ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆವರೆಗೆ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ಬಳಗಗಳು:** ಅಕ್ಕಮಹಾದೇವಿ ಜಯಂತಿ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಇನ್‌ಫೋಸಿಸ್ ಫೌಂಡೇಷನ್ ಸಂಸ್ಥಾಪಕಿ ಪದ್ಮಭೂಷಣ ಡಾ.ಸುಧಾಮೂರ್ತಿ, ಅಧ್ಯಕ್ಷತೆ: ದಾವಣಗೆರೆ ವಿವಿ ವಿಶ್ರಾಂತ ಕುಲಪತಿ ಡಾ.ಇಂದುಮತಿ, ಉಪಸ್ಥಿತರು: ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು.ಸದಾನಂದಯ್ಯ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ, ವಿಶ್ವವಿದ್ಯಾನಿಲಯ ಕೆರಿಯರ್ ಹಬ್, ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು:** ವೃತ್ತಿ ಮಾರ್ಗದರ್ಶನ, ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಕೌಶಲ್ಯಾಭಿವೃದ್ಧಿ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ, ಅಧ್ಯಕ್ಷತೆ: ಕೆ.ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಪ್ರೊ.ಜೆ.ಮಹೇಶ್, ಉದ್ಘಾಟನೆ: ಮೈಸೂರು ನಗರಪಾಲಿಕೆ ಪರಿಷತ್ತಿನ ಕಾರ್ಯದರ್ಶಿ ಆರ್.ರಂಗಸ್ವಾಮಿ, ಮುಖ್ಯ ಅತಿಥಿಗಳು: ಪ್ರೊ.ಹಂಸವೇಣಿ, ಎಂ.ಜೆ.ಜಯಶ್ರೀ, ಡಾ.ಎಂ.ಬಿ.ಸುರೇಶ್, ಡಿ. ರವಿಕುಮಾರ್, ಸ್ಥಳ: ಕೆ.ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು, ಗೋಕುಲಂ 2ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಗೃಹ ಶೋಭ:** ಟ್ರೇಡ್ ಫೇರ್. ಸ್ಥಳ: ಮಹಾರಾಜ ಕಾಲೇಜು ಮೈದಾನ. ಬೆಳಗ್ಗೆ 11ರಿಂದ ರಾತ್ರಿ 9 ರವರೆಗೆ.

■ **ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನ ಸನ್ನಿಧಾನ:** ಶ್ರೀ ರಾಘವೇಂದ್ರ ಸ್ವಾಮಿಗಳ 76ನೇ ಬೃಂದಾವನ ಪ್ರತಿಷ್ಠಾಪನಾ ವರ್ಧಂತ್ಯುತ್ಸವ. ಧಾರವಾಡದ ಪಂಡಿತ ಶ್ರೀ ಕಪಿಲಾಚಾರ್ಯ ಹಲಗಲಿ ಅವರಿಂದ 'ಶ್ರೀಮದ್ಭಾಗವತ' ಪ್ರವಚನ. ಸ್ಥಳ: ತತ್ವಜ್ಞಾನ ಮಂದಿರ, ಶ್ರೀರಾಯರ ಮಠದ ಆವರಣ, ಕೃಷ್ಣಮೂರ್ತಿಪುರಂ. ಸಂಜೆ 6ಕ್ಕೆ.

ಮೈಸೂರು ಮಿತ್ರ

ಸೋಲು ಸಾಮಾನ್ಯ, ನಾವು ಜಗ್ಗುವುದಿಲ್ಲ; ಜನರೊಂದಿಗೆ ಬೆರೆಯುತ್ತೇವೆ...

ಮೈಸೂರು, ಮೇ 22(ಎಂಕೆ)– ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಸಿದ್ದಾಜಿದ್ದಿನ ಪೈಪೋಟಿ ನಡೆಸಿ ಪರಾಭವಗೊಂಡ ಮೈಸೂರು ನಗರ ವ್ಯಾಪ್ತಿಯ ಚಾಮರಾಜ, ಕೃಷ್ಣರಾಜ, ನರಸಿಂಹರಾಜ ಹಾಗೂ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಗಳು ಮುಂದಿನ ವಿಧಾನಸಭಾ ಚುನಾವಣೆಗೆ ಪುಟಿದೇಳುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಅಲ್ಲದೆ ತಮ್ಮ ಸೋಲಿನ ಪ್ರಮುಖ ಕಾರಣಗಳನ್ನು 'ಮೈಸೂರು ಮಿತ್ರ'ನೊಂದಿಗೆ ಮುಕ್ತವಾಗಿ ಹಂಚಿಕೊಂಡಿದ್ದಾರೆ. ಕ್ಷೇತ್ರದಲ್ಲಿ ತಮಗೆ ಹಿನ್ನೆಡೆಯಾಗಿದ್ದರೂ ಮತದಾರರೊಂದಿಗೆ ಇದ್ದು, ಅವರ ವಿಶ್ವಾಸವನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಸಂಘಟನಾತ್ಮಕ ಕಾರ್ಯಕ್ರಮಗಳನ್ನು ನಡೆಸುವ ಯೋಜನೆಗಳನ್ನು ಹಾಕಿಕೊಳ್ಳಲಾಗುವುದು. ಕ್ಷೇತ್ರದ ಜನತೆಯ ಕಷ್ಟಗಳಿಗೆ ಸದಾ ನಮ್ಮ ಕಚೇರಿ ಹಾಗೂ ಮನೆ ಬಾಗಿಲು ತೆರೆದೇ ಇರುತ್ತದೆ. ಇದರಲ್ಲಿ ಯಾವುದೇ ಸಂಶಯ ಬೇಡ. ಸೋಲಿಗೆ ಹೆದರಿ ಮರೆಯಾಗುವ ಮಾತೇ ಇಲ್ಲ ಎಂಬ ಆತ್ಮವಿಶ್ವಾಸದ ನುಡಿಗಳನ್ನಾಡಿದ್ದಾರೆ.

ಚುನಾವಣೆಯಲ್ಲಿ ಪರಾಜಿತರ ಆತ್ಮವಿಶ್ವಾಸ; ಭವಿಷ್ಯದ ಚಿಂತನೆ

ಚಾಮರಾಜ ವಿಧಾನಸಭಾ ಕ್ಷೇತ್ರದ ಪರಾಜಿತ ಬಿಜೆಪಿ ಅಭ್ಯರ್ಥಿ ಎಲ್.ನಾಗೇಂದ್ರ, ಚುನಾವಣಾ ಫಲಿತಾಂಶದ ಬಳಿಕ ತಮ್ಮ ವೈಯುಕ್ತಿಕ ಕೆಲಸಗಳಲ್ಲಿ ನಿರತರಾಗಿದ್ದಾರೆ. ಸಂಬಂಧಿಕರ ಭೇಟಿ ಮಾಡುತ್ತಿದ್ದಾರೆ. ಕ್ಷೇತ್ರದ ಜನರ ಕಷ್ಟಕ್ಕೆ ಒಂಟಿಕೊಪ್ಪಲಿನಲ್ಲಿರುವ ನನ್ನ ಕಚೇರಿ ಹಾಗೂ ಮನೆಯ ಬಾಗಿಲು ಸದಾ ತೆರೆದಿರುತ್ತದೆ ಎಂದು ತಿಳಿಸಿ, ಚುನಾವಣೆಯ ಸೋಲಿನ ವಿಮರ್ಶೆ ಮಾಡಿದ್ದಾರೆ.

ಮಿತ್ರ: ಶಾಸಕರಾಗಿಯೂ ತಮ್ಮ ಸೋಲಿಗೆ ಕಾರಣಗಳೇನು?

ಎಲ್.ನಾಗೇಂದ್ರ: 2018ರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಸುಮಾರು 26 ಸಾವಿರ ವೋಟ್ ತೆಗೆದುಕೊಂಡಿದ್ದರು. ಆದರೆ ಈ ಬಾರಿ ಜೆಡಿಎಸ್ ಅಭ್ಯರ್ಥಿ ಕೇವಲ 4549 ವೋಟ್ ತೆಗೆದುಕೊಂಡಿದ್ದಾರೆ. ಜೆಡಿಎಸ್ ಅಭ್ಯರ್ಥಿ 15 ಸಾವಿರ ವೋಟ್ ತೆಗೆದುಕೊಂಡರೆ, ಉಳಿದ ವೋಟ್‌ಗಳು ನಮಗೆ ಬರಲಿವೆ ಎಂದು ಲೆಕ್ಕಾಚಾರ ಹಾಕಿಕೊಂಡಿದ್ದೆವು. ಆದರೆ ಜೆಡಿಎಸ್ ಮತಗಳು ಕಾಂಗ್ರೆಸ್ ಪಾಲಾಗಿರುವುದು ಸೋಲಿಗೆ ಪ್ರಮುಖ ಕಾರಣವಾಗಿದೆ. ಅದಾಗ್ಯೂ ಕಳೆದ ಬಾರಿಗಿಂತ ಸುಮಾರು 17 ಸಾವಿರ ಅಧಿಕ ಮತಗಳು ಬಂದಿರುವುದರಿಂದ ಕ್ಷೇತ್ರದ ಜನರು ನನ್ನನ್ನು ರಿಜೆಕ್ಟ್ ಮಾಡಿಲ್ಲ ಎಂಬುದು ಸ್ಪಷ್ಟವಾಗಿದೆ.



ಮಿತ್ರ: ಶಾಸಕರಾಗಿ ಐದು ವರ್ಷ ಸಾಕಷ್ಟು ಕೆಲಸ ಮಾಡಿದ್ದರೂ ಹಿನ್ನೆಡೆಯಾಗಿದ್ದು ಎಲ್ಲಿ?

ಎಲ್.ನಾಗೇಂದ್ರ: ಚಾಮರಾಜ ಕ್ಷೇತ್ರದಲ್ಲಾಗಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ಕ್ಷೇತ್ರದ ಜನರಿಗೆ ಯಾವುದೇ ಬೇಸರವಿಲ್ಲ. ನಾನು ಮಾಡಿದ ಅಭಿವೃದ್ಧಿ ಕಾರ್ಯಗಳನ್ನು ಒಪ್ಪಿಕೊಂಡಿದ್ದಾರೆ. 5 ವರ್ಷಗಳ ಕಾಲ ನಿರಂತರ ಸಾರ್ವಜನಿಕರೊಂದಿಗೆ ಇದ್ದು, ಎಂದಿಗೂ ಆಗದಂತಹ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ. ಇಷ್ಟೆಲ್ಲಾ ಪರಿಶ್ರಮಪಟ್ಟರೂ ನನಗೆ ಸೋಲಾಗಿದೆ ಎಂದರೆ, ನಾನು ಮತ್ಯಾವ ರೀತಿಯಲ್ಲಿ ಕೆಲಸ ಮಾಡಬೇಕು ಎಂಬುದನ್ನು ಚಿಂತಿಸುವಂತೆ ಮಾಡಿದೆ.

ಮಿತ್ರ: ಕ್ಷೇತ್ರದಲ್ಲಿ ಮುಂದಿನ 5 ವರ್ಷ ತಮ್ಮ ತಯಾರಿ ಹೇಗಿರುತ್ತೆ?

ಎಲ್.ನಾಗೇಂದ್ರ: ಶಾಸಕನಾಗುವ ಹಿಂದಿನ ಚುನಾವಣೆಯಲ್ಲೂ ಸೋತಿದ್ದೆ. ಆದರೂ ಜನರೊಂದಿಗೆ ಸೇರಿ ಕೆಲಸ ಮಾಡುತ್ತಿದ್ದರ ಫಲವಾಗಿ 2018ರ ಚುನಾವಣೆಯಲ್ಲಿ ಗೆದ್ದು ಶಾಸಕನಾದೆ. ಅದೇ ರೀತಿ ನಿರಂತರವಾಗಿ ಜನರೊಂದಿಗೆ ಇರುತ್ತೇನೆ. ಈ ವಿಚಾರದಲ್ಲಿ ಹಿಂದೆ ಬೀಳುವ, ಜನರಿಂದ ಮರೆಯಾಗಿರುವ ಮಾತೇ ಇಲ್ಲ. ಕ್ಷೇತ್ರದ ಜನರೊಂದಿಗೆ ಸದಾ ಸಂಪರ್ಕದಲ್ಲಿರುತ್ತೇನೆ. ಒಂಟಿಕೊಪ್ಪಲಿನಲ್ಲಿ ನನ್ನ ಕಚೇರಿ ಇದೆ. ಅಲ್ಲದೆ ನಾನಿರುವುದೇ ಮೈಸೂರಿನಲ್ಲಿ. ಮೈಸೂರು ಬಿಟ್ಟು ಬೇರೆ ಕಡೆ ಹೋಗುವ ಮಾತೇ ಇಲ್ಲ.

ಮಿತ್ರ: ಕ್ಷೇತ್ರದಲ್ಲಿರುವ ಕೊಪ್ಪಲುಗಳಲ್ಲಿ ತಮಗೆ ಹಿನ್ನೆಡೆಯಾಗಿದೆ ಎನ್ನುತ್ತಿದ್ದಾರೆ ಇದು ನಿಜವೇ?

ಎಲ್.ನಾಗೇಂದ್ರ: ಹೌದು! ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲು ಭಾಗದಲ್ಲಿ ಕಡಿಮೆ ಮತಗಳು ಬಂದಿವೆ. ಅಲ್ಲಿನ ಜನರ ಭಾವನೆಗೆ ಹೇಗೆ ಸ್ಪಂದಿಸಬೇಕು ಎಂಬುದು ನನ್ನ ಮುಂದಿರುವ ಪ್ರಶ್ನೆಯಾಗಿದೆ. ಕಾಂಗ್ರೆಸ್‌ನ ನಕಲಿ ಗ್ಯಾರಂಟಿಗಳಿಗೆ ಮರುಳಾಗಿದ್ದಾರೆ ಎನ್ನಿಸುತ್ತಿದೆ. ಕಾಂಗ್ರೆಸ್‌ನ ಹುಸಿ ಭರವಸೆಗಳ ಬಗ್ಗೆ ಮುಂದೆ ಜನರಿಗೂ ಗೊತ್ತಾಗಲಿದೆ.

ಮಿತ್ರ: ಚುನಾವಣೆ ಬಳಿಕ ತಮ್ಮ ದಿನಚರಿ ಹೇಗಿದೆ?

ಎಲ್.ನಾಗೇಂದ್ರ: ನನ್ನೆಲ್ಲಾ ಬೆಂಬಲಿಗರು, ಪಕ್ಷದ ನಿಷ್ಠಾವಂತ ಕಾರ್ಯಕರ್ತರು ನನ್ನ ಮನೆಗೆ ಬಂದು ಮಾತನಾಡಿದ್ದಾರೆ. ನನಗೆ ಬೇರೆ ಬೇರೆ ವೈಯಕ್ತಿಕ ಕೆಲಸಗಳಿದ್ದವು. ಈಗ ಸ್ವಲ್ಪ ಬಿಡುವು ಸಿಕ್ಕಿರುವುದರಿಂದ ಸಂಬಂಧಿಕರ ಮನೆಗಳಿಗೆ ಭೇಟಿ ನೀಡುತ್ತಿದ್ದೇನೆ. ಚಾಮರಾಜ ಕ್ಷೇತ್ರದ ಗ್ರಾಮಗಳನ್ನು ಗ್ರಾಮಗಳಂತೆಯೇ ಇರಲು ಬಿಟ್ಟಿದ್ದರೆ ಸರಿಯಾಗುತ್ತಿತ್ತು. ಆದರೆ ನಾನು ಹಾಗೆ ಮಾಡಲಿಲ್ಲ. ಗ್ರಾಮಗಳಲ್ಲೂ ಉನ್ನತ ಮೂಲ ಸೌಕರ್ಯ ಕಲ್ಪಿಸುಸಿದೆ. ಇದು ತಪ್ಪಾಯಿತು ಎನಿಸುತ್ತಿದೆ.

****

ಮೊದಲ ಚುನಾವಣೆಯಲ್ಲಿಯೇ ಚಾಮುಂಡೇಶ್ವರಿ ಕ್ಷೇತ್ರದ ಮತದಾರರು, ಬಿಜೆಪಿ ಹಿರಿಯ ನಾಯಕರ ಗಮನ ಸೆಳೆದ ಪರಾಜಿತ ಅಭ್ಯರ್ಥಿ ಕವೀಶ್‌ಗೌಡ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಪಕ್ಷವನ್ನು ತಳಮಟ್ಟದಿಂದ ಸಂಘಟನೆ ಮಾಡುವ ಮೂಲಕ ಗಟ್ಟಿಗೊಳಿಸುವ ಹಾಗೂ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಅಚ್ಚರಿ ಫಲಿತಾಂಶ ನೀಡುವ ವಿಶ್ವಾಸದಲ್ಲಿದ್ದಾರೆ.

ಮಿತ್ರ: ಮೊದಲ ವಿಧಾನಸಭಾ ಚುನಾವಣೆಯ ಅನುಭವ ಹೇಗಿತ್ತು.

ಕವೀಶ್‌ಗೌಡ: ಒಳ್ಳೆಯ ಅನುಭವ. ಈ ಬಾರಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಹೆಚ್ಚಿನ ಮತದಾರರು ನನಗೆ ಮತ ನೀಡುವ ಮೂಲಕ ನನ್ನಲ್ಲಿ ಆತ್ಮವಿಶ್ವಾಸ ಮೂಡಿ ಸಿದ್ದಾರೆ. ಒಬ್ಬ ಯುವಕನಿಗೆ ಅವಕಾಶ ಮಾಡಿ ಕೊಡಬೇಕು ಎಂಬುದು ತುಂಬಾ ಜನರ ಮನಸ್ಸಿ ನಲ್ಲಿತ್ತು. ಹಾಗೆಯೇ ಬಿಜೆಪಿಯಲ್ಲಿಯೂ ಈ ಬಾರಿ ಯುವಕರಿಗೆ ಅವಕಾಶ ನೀಡಬೇಕು ಎಂಬ ಉದ್ದೇಶದಿಂದ ಅವಕಾಶ ಮಾಡಿಕೊಟ್ಟಿದ್ದಾರೆ. ಫಲಿತಾಂಶ ನೋಡಿದರೆ ಒಳ್ಳೆಯ ಸಂಖ್ಯೆಯಲ್ಲಿ ಮತದಾನವಾಗಿದೆ. ಪಕ್ಷ ಸೇರ್ಪಡೆ ಗೊಂಡ ಕೆಲವೇ ದಿನಗಳಲ್ಲಿ ಚುನಾವಣಾ ಅಭ್ಯರ್ಥಿಯನ್ನಾಗಿ ಘೋಷಣೆ ಮಾಡಿ ಬಿ–ಫಾರಂ ನೀಡಿದ್ದು ಅಚ್ಚರಿ ನೀಡಿತು. ಯುವಕರನ್ನು ಗುರ್ತಿಸಿ ಜವಾಬ್ದಾರಿ ನೀಡುವ ವಿಶೇಷತೆ ಇರುವುದು ಬಿಜೆಪಿಯಲ್ಲಿ ಮಾತ್ರ ಈ ಮೂಲಕ ಪಕ್ಷದ ವರಿಷ್ಠರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.



ಮಿತ್ರ: ಮುಂದಿನ ದಿನಗಳಲ್ಲಿ ತಮ್ಮ ಕಾರ್ಯಚಟುವಟಿಕೆಗಳೇನು?

ಕವೀಶ್‌ಗೌಡ: ಚುನಾವಣೆಯಲ್ಲಿ ಸೋಲು–ಗೆಲುವು ಇದ್ದೆ ಇರುತ್ತೆ. ಆದರೆ ಕ್ಷೇತ್ರದ ಅಭಿವೃದ್ಧಿ ಕೆಲಸಗಳು 5 ವರ್ಷ ಮುಂದೂಡಿದ್ದರ ಬೇಸರವಿದೆ. ತಳ ಮಟ್ಟದಿಂದ ಮತ್ತೆ ಪಕ್ಷ ಸಂಘಟನೆ ಮಾಡುತ್ತೇನೆ. ನಿರಂತರವಾಗಿ ಸಂಘಟನಾತ್ಮಕ ಕಾರ್ಯಕ್ರಮಗಳು ನಡೆಯಲಿವೆ.

ಮಿತ್ರ: ಮತಯಾಚನೆ ವೇಳೆ ಕ್ಷೇತ್ರದ ಮತದಾರರು ತಮ್ಮ ಮುಂದಿಡುತ್ತಿದ್ದ ವಿಚಾರಗಳೇನು?

ಕವೀಶ್‌ಗೌಡ: ಚಾಮುಂಡೇಶ್ವರಿ ಕ್ಷೇತ್ರದ ಜನರಿಗೆ ಬೇಕಾಗಿರುವುದು ಅಭಿವೃದ್ಧಿ ಮತ್ತು ಬದಲಾವಣೆ. ಅದರಲ್ಲೂ ಯುವಕರು ಅಭ್ಯರ್ಥಿಯಾದಾಗ ನಂಬಿಕೆ ಮತ್ತು ನಿರೀಕ್ಷೆ ಹೆಚ್ಚಾಗಿರುತ್ತದೆ. ಮತಯಾಚನೆ ವೇಳೆ ನೀವಿಲ್ಲಿ ಬಂದು ಕೆಲಸ ಮಾಡಬೇಕು. ಸುಮ್ಮನೆ ವೋಟ್ ಕೇಳುವುದಲ್ಲ ಎಂದು ನೇರವಾಗಿ ಹೇಳುತ್ತಿದ್ದರು. ಇದರಿಂದ ಜನರ ಕೆಲಸ ಮಾಡಬೇಕೇಂದು ರಾಜಕಾರಣಕ್ಕೆ ಬಂದ ನನಗೆ ಖುಷಿಯಾಗುತ್ತಿತ್ತು. ನನ್ನ ಆತ್ಮವಿಶ್ವಾಸ ಹೆಚ್ಚುತ್ತಿತ್ತು. ಜನರ ನಿರೀಕ್ಷೆ ಅಭಿವೃದ್ಧಿಪರ ಇದ್ದಾಗ ಕೆಲಸ ಮಾಡುವುದಕ್ಕೂ ಖುಷಿಯಾಗುತ್ತದೆ.

ಮಿತ್ರ: ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಭವಿಷ್ಯ ಹೇಗಿದೆ?

ಕವೀಶ್‌ಗೌಡ: ಕ್ಷೇತ್ರದಲ್ಲಿ ಬಿಜೆಪಿ ಪ್ರಾಬಲ್ಯ ಕಡಿಮೆ ಎಂಬುದು ಮೊದಲಿನಿಂದಲೂ ಇದೆ. ಆದರೆ ಈ ಬಾರಿಯ ಚುನಾವಣಾ ಫಲಿತಾಂಶ ಗಮನಿಸಿದರೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಪ್ರಬಲವಾಗುತ್ತಿದೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತಿದೆ. ಬಿಜೆಪಿ ಅಭ್ಯರ್ಥಿಯಾಗಿದ್ದ ನನಗೆ 51,318 ಜನ ಮತ ನೀಡಿ, ಆಶೀರ್ವಾದ ಮಾಡಿದ್ದಾರೆ. ಕಳೆದ ಬಾರಿಗಿಂತ ಹೆಚ್ಚಿನ ಮತ ಬಂದಿದೆ. ಮುಂದಿನ ಬಾರಿ ಇದಕ್ಕಿಂತ ಹೆಚ್ಚಿನ ಮತಗಳು ಬರಲಿದ್ದು, ಗೆಲ್ಲುವ ರೀತಿಯಲ್ಲಿ ಸಂಘಟನೆ ಮಾಡುತ್ತೇವೆ.

****

ಟಿಕೆಟ್‌ಗೆ ಅರ್ಜಿ ಹಾಕದೆ ಬಿ–ಫಾರಂ ಗಿಟ್ಟಿಸಿಕೊಂಡು 79,373 ಮತಗಳ ಪಡೆದು 2ನೇ ಸ್ಥಾನ ಪಡೆದ ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಸಿದ್ದೇಗೌಡ, ಕಾಸಿಲ್ಲದೆ ಚುನಾವಣೆ ಎದುರಿಸಿದ ನನಗೆ ಗೆಲುವು ಜಸ್ಟ್ ಮಿಸ್ ಅನ್ನುತ್ತಿದ್ದಾರೆ.

ಮಿತ್ರ: ತಮಗೆ ಕಾಂಗ್ರೆಸ್ ಬಿ–ಫಾರಂ ದೊರೆತದ್ದು ಹೇಗೆ?

ಎಸ್.ಸಿದ್ದೇಗೌಡ: ಮಾಜಿ ಸಿಎಂ ಸಿದ್ದರಾಮಯ್ಯ ಅವರು ನನ್ನ ಮೇಲೆ ವಿಶ್ವಾಸವಿಟ್ಟು ಅರ್ಜಿ ಹಾಕದಿದ್ದರೂ ಅಚ್ಚರಿ ಎಂಬಂತೆ ನನಗೆ ಟಿಕೆಟ್ ದೊರೆಯುವಂತೆ ಮಾಡಿದರು. ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್ ಕೂಡ ಒಪ್ಪಿ ನನಗೆ ಬಿ–ಫಾರಂ ನೀಡಿದರು. ಅದರಂತೆ ಎಲ್ಲರ ಬೆಂಬಲ ಪಡೆದು ಚುನಾವಣೆ ಎದುರಿಸಿದೆ. ಈ ಚುನಾವಣೆ ನನ್ನಲ್ಲಿ ವಿಶ್ವಾಸ ಹೆಚ್ಚಿಸಿದೆ.



ಮಿತ್ರ: ಕ್ಷೇತ್ರದ ಮತದಾರರ ಪ್ರತಿಕ್ರಿಯೆ ಹೇಗಿತ್ತು?

ಸಿದ್ದೇಗೌಡ: ಚಾಮುಂಡೇಶ್ವರಿ ಕ್ಷೇತ್ರದುದ್ದಕ್ಕೂ ಪ್ರಚಾರ ನಡೆಸಿ ಮತಯಾಚನೆ ಮಾಡಿದ್ದೇನೆ. ಅದರಂತೆ ಕ್ಷೇತ್ರದ ಮತದಾರರು ತುಂಬು ಹೃದಯದಿಂದ ಬೆಂಬಲ ನೀಡಿದ್ದು, ಮತದಾರರಿಗೆ ಋಣಿಯಾಗಿರುತ್ತೇನೆ. ಅವರ ಸಹಕಾರವನ್ನು ಸಾಯುವವರೆಗೂ ಮರೆಯುವುದಿಲ್ಲ. 50–55 ಸಾವಿರ ಮತ ಪಡೆದು ಗೆದ್ದವರಿದ್ದಾರೆ. ಆದರೆ ನನಗೆ 79,373 ಮತ ನೀಡಿದ್ದಾರೆ. ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಹೆಚ್.ಸಿ ಮಹದೇವಪ್ಪ ಸೇರಿದಂತೆ ಹಲವರು ನೀಡಿದ ಪ್ರೋತ್ಸಾಹ ಕಾರಣವಾಗಿದೆ.

ಮಿತ್ರ: ಜೆಡಿಎಸ್‌ನೊಂದಿಗೆ ತಾವು ಬುಕ್ ಆಗಿದ್ದು ನಿಜವೇ?

ಸಿದ್ದೇಗೌಡ: ಖಂಡಿತವಾಗಿಯೂ ಇಲ್ಲ. ನಮ್ಮವರೇ ಐದಾರು ಜನ ಸೇರಿಕೊಂಡು ಕಾಂಗ್ರೆಸ್ ಅಭ್ಯರ್ಥಿ ಜೆಡಿಎಸ್‌ನೊಂದಿಗೆ ಬುಕ್ ಆಗಿದ್ದಾರೆ. ಆದ್ದರಿಂದ ಬಿಜೆಪಿಗೆ ಮತ ನೀಡಿ ಎಂಬ ಸುಳ್ಳು ಸುದ್ದಿ ಹಬ್ಬಿಸಿದರು. ಸಿದ್ದೇಗೌಡ ಗೆದ್ದೇ ಬಿಡುತ್ತಾನೆ ಎಂದು ಮೇ 8ನೇ ತಾರೀಖಿನ ರಾತ್ರಿಯಿಂದಲೇ ಮತದಾರರಲ್ಲಿ ಗೊಂದಲ ಸೃಷ್ಟಿಸುವ ಪ್ರಯತ್ನ ನಡೆಸಿದರು. ಆದರೆ ನಾನೆಲ್ಲಿಯೂ ಜೆಡಿಎಸ್‌ನವರೊಂದಿಗೆ ಮಾತನಾಡಿಲ್ಲ. ಇದೆಲ್ಲದರ ನಡುವೆಯೂ ಜನರು ನೀಡಿದ ಬೆಂಬಲದಿಂದಾಗಿ 70 ಸಾವಿರಕ್ಕೂ ಹೆಚ್ಚಿನ ಮತಗಳನ್ನು ಪಡೆಯಲು ಸಾಧ್ಯವಾಯಿತು. ಈ ಸುದ್ದಿ ಸಿದ್ದರಾಮಯ್ಯ ಅವರಿಗೂ ತಿಳಿದಿದ್ದು, ತಲೆಕೆಡಿಸಿಕೊಳ್ಳಬೇಡ ಎಂದು ಧೈರ್ಯ ತುಂಬಿದ್ದಾರೆ.

ಮಿತ್ರ: ಕ್ಷೇತ್ರದಲ್ಲಿ ತಮ್ಮ ಮುಂದಿನ ಕಾರ್ಯಕ್ರಮಗಳೇನು?

ಸಿದ್ದೇಗೌಡ: ಸದ್ಯಕ್ಕೆ ರಾಜ್ಯದಲ್ಲಿ ಸಿಎಂ ಯಾರಾಗಬೇಕು ಎಂಬ ನಿರ್ಧಾರ ಅಂತಿಮವಾಗಿಲ್ಲ. ಒಂದೆರಡು ದಿನಗಳ ಬಳಿಕ ಕ್ಷೇತ್ರದಲ್ಲಿ ಎಲ್ಲಾ ಮತದಾರರು ಹಾಗೂ ಮುಖಂಡರಿಗೆ ಕೃತಜ್ಞತೆ ಸಲ್ಲಿಸುವ ದೃಷ್ಟಿಯಿಂದ ಕಾರ್ಯಕ್ರಮವನ್ನು ಆಯೋಜಿಸುತ್ತೇನೆ. ಹಾಗೆಯೇ ಕ್ಷೇತ್ರದ ಅಭಿವೃದ್ಧಿ ಹಾಗೂ ಪಕ್ಷ ಸಂಘಟನೆ ಕುರಿತಾದ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುತ್ತೇನೆ. ಗ್ರಾಪಂ ಅಧ್ಯಕ್ಷನಾಗಿ, ಎಪಿಎಂಸಿ ಹಾಗೂ ಮೈಮುಲ್ ಅಧ್ಯಕ್ಷನಾಗಿ ಸೇವೆ ಮಾಡಿದ್ದೇನೆ. ಅದರಂತೆ ಕಾಂಗ್ರೆಸ್ ಪಕ್ಷ ನೀಡುವ ಯಾವ ಜವಾಬ್ದಾರಿಯನ್ನೂ ನಿಭಾಯಿಸುತ್ತೇನೆ.

****

ರಾಜ್ಯದಲ್ಲಿ ಕಾಂಗ್ರೆಸ್ ಗೆಲುವಿನ ಅಲೆ ನಡುವೆಯೂ ಅಲ್ಪ ಮತಗಳ ಅಂತರದಿಂದ ಸೋಲು ಅನುಭವಿಸಿದ ಕೆ.ಆರ್.ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಚುನಾವಣೆಯಲ್ಲಿ ಸೋಲು–ಗೆಲುವು ಸಹಜ. ಕ್ಷೇತ್ರದ ಜನರ ಕಷ್ಟಗಳಿಗೆ ಸ್ಪಂದಿಸುವುದು ನನ್ನ ಮುಂದಿನ ನಡೆಯಾಗಿದೆ ಎಂದು ತಿಳಿಸಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಬಹುಮತ ಸರ್ಕಾರ ಬರುವ ಸಂದರ್ಭದಲ್ಲಿ ನಾನು ಸಹ ಕೃಷ್ಣರಾಜ ಕ್ಷೇತ್ರದ ಶಾಸಕನಾಗಿ ಒಳ್ಳೆಯ ಅಭಿವೃದ್ಧಿ ಕೆಲಸಗಳನ್ನು ಮಾಡಲು ಉತ್ಸುಕನಾಗಿದ್ದೆ. ಆದರೆ ಚುನಾವಣೆಯಲ್ಲಿ ಪರಾಭವಗೊಂಡಿದ್ದು, ಮತದಾರರ ತೀರ್ಪಿಗೆ ತಲೆಬಾಗುತ್ತೇನೆ. 65 ಸಾವಿರ ಮತಗಳನ್ನು ನೀಡುವ ಮೂಲಕ ನನ್ನನ್ನು ಬೆಂಬಲಿಸಿದ ಮತದಾರರಿಗೆ ಹಗಲಿರುಳು ಶ್ರಮಿಸಿದ ಕಾರ್ಯಕರ್ತರಿಗೆ, ಮುಖಂಡರಿಗೆ ಸದಾ ಋಣಿಯಾಗಿರುತ್ತೇನೆ. ನಾನು ಸೋತಿರಬಹುದು ಆದರೆ ನನ್ನ ಪಕ್ಷ ಅಧಿಕಾರಕ್ಕೆ ಬಂದಿದೆ. ನಾವು ತಿಳಿಸಿರುವ ಗ್ಯಾರಂಟಿ ಯೋಜನೆಗಳು ಖಂಡಿತವಾಗಿ ಕಾರ್ಯಗತವಾಗಲಿವೆ. ಬಡವರ, ನೊಂದವರ, ಕಣ್ಣೀರೊರೆಸುವ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತೇನೆ ಎಂದಿದ್ದಾರೆ.



ತೆಂಗಿನ ಸಸಿ ಖರೀದಿಗೆ ಅರ್ಜಿ ಆಹ್ವಾನ



ಮೈಸೂರು, ಮೇ 22– ಮೈಸೂರು ಜಿಲ್ಲೆಯ ವಿವಿಧ ತೋಟಗಾರಿಕೆ ಕ್ಷೇತ್ರಗಳಲ್ಲಿ ನಾಟಿ ಮಾಡಲು ಯೋಗ್ಯವಿರುವ ಉತ್ತಮ ಗುಣಮಟ್ಟದ ತೆಂಗಿನ ಸಸಿಗಳನ್ನು ಉತ್ಪಾದಿಸಲಾಗಿದ್ದು, ಪ್ರಸ್ತುತ ಮಳೆಯಾಗುತ್ತಿರುವುದರಿಂದ ತೆಂಗಿನ ಗಿಡಗಳನ್ನು ನಾಟಿ ಮಾಡಲು ಉತ್ತಮ ಸಮಯವಾಗಿರುತ್ತದೆ. ವಿವಿಧ ತೋಟಗಾರಿಕಾ ಕ್ಷೇತ್ರಗಳಲ್ಲಿ ಉತ್ತಮ ತೆಂಗಿನ ಸಸಿಗಳು ಮಾರಾಟಕ್ಕೆ ಲಭ್ಯವಿರುತ್ತವೆ.

ಹೆಬ್ಬಾಳು ತೋಟಗಾರಿಕೆ ಕ್ಷೇತ್ರ– ಜಯಲಕ್ಷ್ಮಿ, ದೂ.ಸಂ: 8747085225, ಹುಣಸೂರು–ದೇವರಾಜು–8722165357, ಯಲಚಹಳ್ಳಿ–ಪ್ರಸನ್ನಕುಮಾರ್–9591781344, ವಾರಂಚಿ–ವಿನಯ್‌ಕುಮಾರ್–9886356077, ಚೌಕಳ್ಳಿ–ಶೇಖರ್– 9900371051, ಕಬಿನಿ–ಸುಮತಿ–7892973151, ರಂಗಸಮುದ್ರ–ಮಂಜುನಾಥ್– 9008084635, ಕುಕ್ಕರಹಳ್ಳಿ–ಪ್ರಕಾಶ್–9341970649, ಹೆಚ್.ಡಿ.ಕೋಟೆ–ಹರೀಶ್–8971334859, ಕರಿಮುದ್ದನಹಳ್ಳಿ–ಶಂಕರ್–9448788701, ಟಿ.ನರಸೀಪುರ–ಪ್ರಸಾದ್–9845182631 ಸಂಪರ್ಕಿಸಬಹುದು.

ಶಿವಾರ್ಚಕ ಟ್ರಸ್ಟ್‌ನಿಂದ ಪ್ರತಿಭಾ ಪುರಸ್ಕಾರ

ಮೈಸೂರು, ಮೇ 22–ರಾಜ್ಯ ಶಿವಾರ್ಚಕ ಟ್ರಸ್ಟ್ ವತಿಯಿಂದ 2022–23ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿ ತೇರ್ಗಡೆ ಹೊಂದಿರುವ ಶಿವಾರ್ಚಕ ಜನಾಂಗದ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ನಿರ್ಧರಿಸಿದೆ. ಆಸಕ್ತರು ಮುಖ್ಯೋಪಾಧ್ಯಾಯರಿಂದ ದೃಢೀಕೃತ ಅಂಕಪಟ್ಟಿ, ಆಧಾರ್ ಪ್ರತಿ ಮತ್ತು ಮೊಬೈಲ್ ನಂ. ಮಾಹಿತಿಗಳನ್ನು ಜೂ.5ರೊಳಗೆ ವಾಮದೇವ, 896, 3ನೇ ಮುಖ್ಯ ರಸ್ತೆ, 3ನೇ ಅಡ್ಡ ರಸ್ತೆ, ಕನಕದಾಸನಗರ ಈ ವಿಳಾಸಕ್ಕೆ ಕಳುಹಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9448576450, 9731357585 ಸಂಪರ್ಕಿಸಬಹುದು.

ಸಿಬಿಎಸ್‌ಇ ಫಲಿತಾಂಶ ಭೂಮಿಕಗೆ ಶೇ.95

ಮೈಸೂರು, ಮೇ 22–ಈ ಬಾರಿಯ ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಮೈಸೂರಿನ ಯಾದವಗಿರಿಯಲ್ಲಿರುವ ಸಿಎಫ್‌ಟಿಆರ್‌ಐ ಶಾಲೆ ವಿದ್ಯಾರ್ಥಿನಿ ಜೆ. ಭೂಮಿಕ ಶೇ.95 ಅಂಕ ಗಳಿಸುವ ಮೂಲಕ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ವಿ.ಜಗದೀಶ ಮತ್ತು ಕೆ.ಆರ್.ಜ್ಯೋತಿ ದಂಪತಿಯ ಪುತ್ರಿ.



ಮಾನಸಿಕ ಆರೋಗ್ಯದ ಅರಿವು ಅವಶ್ಯಕ



ಮೈಸೂರು, ಮೇ 22– ಜೆಎಸ್‌ಎಸ್ ಪಾಲಿಟೆಕ್ನಿಕ್, ಮೈಸೂರಿನಲ್ಲಿ ರೆಡ್ ಕ್ರಾಸ್ ಘಟಕ ಮತ್ತು ರಾಷ್ಟ್ರೀಯ ಸೇವಾ ಯೋಜನಾ ಘಟಕದ ಸಂಯುಕ್ತ ಆಶ್ರಯದಲ್ಲಿ ವಿದ್ಯಾರ್ಥಿಗಳಿಗೆ ಮಾನಸಿಕ ಆರೋಗ್ಯದ ಅರಿವು ಎಂಬ ಶೀರ್ಷಿಕೆಯ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಪ್ರೇರಣಾ ಆಸ್ಪತ್ರೆಯ ಕ್ಲಿನಿಕಲ್ ಸೈಕಾಲಜಿಸ್ಟ್ ಡಾ.ನೇಹಾ ದೇಚಮ್ಮ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಮಾನಸಿಕ ಆರೋಗ್ಯದ ಅರಿವು ಮೂಡಿಸುವುದು ಅತ್ಯವಶ್ಯಕ ಮಾನಸಿಕ ಖಿನ್ನತೆಗೆ ಒಳಗಾದ ವಿದ್ಯಾರ್ಥಿಗಳಲ್ಲಿ ಸಮಾಜದಲ್ಲಿ ಹಲವು ಸಮಸ್ಯೆಗಳಿಗೆ ಒಳಗಾಗಬೇಕಾಗುತ್ತದೆ ಎಂದರು.


ಆಸ್ಪತ್ರೆಯ ಸಿಇಓ ಮತ್ತು ಕಾರ್ಯ ನಿರ್ವಾಹಕ ನಿರ್ದೇಶಕ ಮುಸ್ತಫಾ ಶರೀಫ್ ಮಾತನಾಡಿ, ವಿದ್ಯಾರ್ಥಿಗಳು ತಮಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಆಪ್ತರಲ್ಲಿ ಚರ್ಚಿಸಬೇಕೆಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಶ್ರೀರಂಜನ್ ಮ್ಯಾನೇಜಿಂಗ್ ಡೈರೆಕ್ಟರ್, ಶ್ರೀಮತಿ ಶಾಂತಿ ಮನುಪ್ರಸಾದ್, ಶ್ರೀಮತಿ ಯಶಸ್ವಿನಿ, ರೆಡ್ ಕ್ರಾಸ್ ಘಟಕದ ಕಾರ್ಯಕ್ರಮ ಅಧಿಕಾರಿಗಳಾದ ನಿರಂಜನ್‌ಮೂರ್ತಿ, ಶೃತಿ ಎಂ, ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿಗಳಾದ ಕೆ.ಬಿ.ಚಂದ್ರಶೇಖರಮೂರ್ತಿ, ಶೃತಿ ಎಸ್. ಮತ್ತು ಪಾಲಿಟೆಕ್ನಿಕ್ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಜನರ ಜೀವ ರಕ್ಷಣೆ ನಮ್ಮ ಕರ್ತವ್ಯ, ಅಂಡರ್‌ಪಾಸ್‌ಗಳ ವರದಿಗೆ ಆದೇಶ

ಬೆಂಗಳೂರು, ಮೇ 22– ನಾಗರಿಕರ ಜೀವ ರಕ್ಷಣೆ ನಮ್ಮ ಕರ್ತವ್ಯವಾಗಿದ್ದು, ಮುಂದೆ ಇಂತಹ ಘಟನೆಗಳು ಸಂಭವಿಸದಂತೆ ಎಚ್ಚರಿಕೆ ವಹಿಸಲಾಗುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೋಮವಾರ ಹೇಳಿದ್ದಾರೆ.

ಮಳೆಗೆ ಯುವತಿಯೊಬ್ಬಳು ಮೃತಪಟ್ಟ ಘಟನೆ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಟೆಕ್ಕಿಯೊಬ್ಬರು ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಬೆಂಗಳೂರಿನ 18 ಅಂಡರ್ ಪಾಸ್‌ಗಳು ಸೇರಿದಂತೆ ರಾಜ್ಯದ ಎಲ್ಲಾ ಅಂಡರ್‌ಪಾಸ್‌ಗಳ ಕುರಿತು ವರದಿ ಸಲ್ಲಿಸುವಂತೆ ಆದೇಶಿಸಲಾಗಿದೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಎಲ್ಲವೂ ಒಂದೇ ದಿನದಲ್ಲಿ ಆಗುವುದಿಲ್ಲ. ಆದರೆ, ಮುಂದೆ ಇಂತಹ ಘಟನೆ ನಡೆಯದಂತೆ ಎಚ್ಚರಿಕಾ ಕ್ರಮಗಳ ಕೈಗೊಳ್ಳಲಾಗುತ್ತಿದೆ. ನಮ್ಮ ನಾಗರಿಕರ ಜೀವ ರಕ್ಷಣೆ ನಮ್ಮ ಕರ್ತವ್ಯವಾಗಿದೆ ಎಂದು ತಿಳಿಸಿದರು.



ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಮಾತನಾಡಿ, ಭಾರೀ ಮಳೆ ಮತ್ತು ಅಂಡರ್‌ಪಾಸ್‌ಗಳು ಜಲಾವೃತವಾಗುವುದು ಈ ಹಿಂದೆಯೂ ಆಗಿದೆ. ಆದರೆ ಈ ಹಿಂದೆ ಯಾವುದೇ ಸಾವು ಸಂಭವಿಸಿದ್ದು ನನಗೆ ನೆನಪಿಲ್ಲ. ಬಿಬಿಎಂಪಿಯ ಸಕಾಲಿಕ ಕ್ರಮ ಕೈಗೊಂಡಿದ್ದೇ ಆಗಿದ್ದರೆ ಸಾವನ್ನು ತಪ್ಪಿಸಬಹುದಿತ್ತು. ಬಿಬಿಎಂಪಿಯಿಂದ ಕೆಲವು ಲೋಪಗಳಾಗಿವೆ. ಅದನ್ನು ಪರಿಶೀಲಿಸಬೇಕಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ವಿಧಾನಸೌಧ ಮುಂಭಾಗ ಗೋಮೂತ್ರ ಸಿಂಪಡಿಸಿದರು

ಬೆಂಗಳೂರು, ಮೇ 22– ಮೂರು ದಿನಗಳ ಕಾಲ ವಿಧಾನಸಭೆ ವಿಶೇಷ ಅಧಿವೇಶನ ಸೋಮವಾರ ಆರಂಭವಾಗಿದ್ದು, ಅಧಿವೇಶನ ಆರಂಭವಾಗುವುದಕ್ಕೂ ಮುನ್ನ ವಿಧಾನಸೌಧದ ಮುಂಭಾಗ ಕಾಂಗ್ರೆಸ್ ಕಾರ್ಯಕರ್ತರು ಗೋಮೂತ್ರ ಸಿಂಪಡಿಸಿ ಪೂಜೆ ಸಲ್ಲಿಸಿದರು. ಪ್ರವೇಶ ದ್ವಾರ ಹಾಗೂ ಹೊರ ಆವರಣದಲ್ಲಿ ಗೋಮೂತ್ರ ಸಿಂಪಡಿಸುವ ಮೂಲಕ ಕಾಂಗ್ರೆಸ್ ಕಾರ್ಯಕರ್ತರು ಶುದ್ಧೀಕರಣ ನಡೆಸಿದರು. ಬಳಿಕ ವೈದಿಕರ ಮೂಲಕ ಪೂಜೆ ನೆರವೇರಿಸಿದರು.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಮನೋಹರ್, ಹಿಂದಿನ ಭ್ರಷ್ಟ ಬಿಜೆಪಿ ಸರ್ಕಾರ ರಾಜ್ಯದಿಂದ ತೊಲಗಿ ಶುದ್ಧ ಆಡಳಿತ ನಡೆಸಲು ಕಾಂಗ್ರೆಸ್ ಪಕ್ಷಕ್ಕೆ ಜನ ಸ್ಪಷ್ಟ ಬಹುಮತ ನೀಡಿದ್ದಾರೆ.

ಈ ಹಿನ್ನೆಲೆಯಲ್ಲಿ ರಾಜ್ಯದ ಜನತೆಯ ಒಳಿತಿಗಾಗಿ ಶಕ್ತಿ ಕೇಂದ್ರ ವಿಧಾನಸೌಧದ ಮುಂಭಾಗದಲ್ಲಿ ವಿಶೇಷ ಪೂಜೆ ಸಲ್ಲಿಸಿ, ನಂತರ ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು ಎಂದು ಹೇಳಿದರು.

ಐಡಿ ಪುರಾವೆ ಇಲ್ಲದೆ 2000 ರೂ. ಮುಖ ಬೆಲೆ ನೋಟು ವಿನಿಮಯಕ್ಕೆ ಆರ್‌ಬಿಐ ಅನುಮತಿ

ಎಸ್‌ಬಿಐ ವಿರುದ್ಧ ದೆಹಲಿ ಹೈಕೋರ್ಟ್‌ಗೆ PIL

ನವದೆಹಲಿ, ಮೇ 22–ಇತ್ತೀಚೆಗಷ್ಟೇ ಹಿಂಪಡೆದಿರುವ 2000 ರೂ. ನೋಟುಗಳನ್ನು ಅಗತ್ಯ ನಮೂನೆ ಅಥವಾ ಗುರುತಿನ ಪುರಾವೆ ಇಲ್ಲದೆ ವಿನಿಮಯ ಮಾಡಿಕೊಡುತ್ತಿರುವುದನ್ನು ವಿರೋಧಿಸಿ ಇಂದು ದೆಹಲಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದೆ.

ಈ ಸಂಬಂಧ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅಧಿಸೂಚನೆಗಳು ಅನಿಯಂತ್ರಿತ, ತರ್ಕಬದ್ಧವಲ್ಲದ ಮತ್ತು ಭಾರತದ ಸಂವಿಧಾನದ 14ನೇ ವಿಧಿಯನ್ನು ಉಲ್ಲಂಘಿಸುತ್ತವೆ ಎಂದು ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ತಮ್ಮ ಅರ್ಜಿಯಲ್ಲಿ ವಾದಿಸಿದ್ದಾರೆ. ಹೆಚ್ಚಿನ ಸಂಖ್ಯೆಯ ನೋಟುಗಳು ಜನರ ಲಾಕರ್‌ಗಳನ್ನು ಸೇರಿವೆ ಅಥವಾ ಪ್ರತ್ಯೇಕತಾವಾದಿಗಳು, ಭಯೋತ್ಪಾದಕರು, ಮಾವೋವಾದಿಗಳು, ಮಾದಕವಸ್ತು ಕಳ್ಳಸಾಗಣೆದಾರರು, ಗಣಿಗಾರಿಕೆ ಮಾಫಿಯಾ ಮತ್ತು ಭ್ರಷ್ಟರಿಂದ ಸಂಗ್ರಹಿಸಲ್ಪಟ್ಟಿವೆ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.




ಹೆಚ್ಚಿನ ಮುಖಬೆಲೆ ನೋಟುಗಳ ನಗದು ವಹಿವಾಟು ಭ್ರಷ್ಟಾಚಾರದ ಮುಖ್ಯ ಮೂಲವಾಗಿದೆ ಮತ್ತು ಈ ನೋಟುಗಳನ್ನು ಭಯೋತ್ಪಾದನೆ, ನಕ್ಸಲಿಸಂ, ಪ್ರತ್ಯೇಕತಾ ವಾದ, ಮೂಲಭೂತವಾದ, ಜೂಜು, ಕಳ್ಳಸಾಗಣೆ, ಅಕ್ರಮ ಹಣ ವರ್ಗಾವಣೆ, ಅಪಹರಣ, ಸುಲಿಗೆ, ಲಂಚ ಮತ್ತು ವರದಕ್ಷಿಣೆ ಇತ್ಯಾದಿ ಕಾನೂನುಬಾಹಿರ ಚಟುವಟಿಕೆಗಳಲ್ಲಿ ಬಳಸಲಾಗುತ್ತದೆ ಎಂದು ಅದು ಹೇಳಿದೆ. ಈ ಹಿನ್ನೆಲೆಯಲ್ಲಿ ಆರ್‌ಬಿಐ ಮತ್ತು ಎಸ್‌ಬಿಐ 2000 ರೂ. ನೋಟುಗಳನ್ನು ಆಯಾ ಬ್ಯಾಂಕ್ ಖಾತೆಗಳಲ್ಲಿ ಮಾತ್ರ ಜಮಾ ಮಾಡುವಂತೆ ನೋಡಿಕೊಳ್ಳಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಅರ್ಜಿಯಲ್ಲಿ ಪ್ರತಿ ಕುಟುಂಬವೂ ಆಧಾರ್ ಕಾರ್ಡ್ ಮತ್ತು ಬ್ಯಾಂಕ್ ಖಾತೆಯನ್ನು ಹೊಂದಿರಬೇಕು ಎಂದು ಕೇಂದ್ರವು ಇತ್ತೀಚೆಗೆ ಘೋಷಿಸಿತ್ತು. ಹಾಗಾದರೆ ಐಡಿ ಪ್ರೂಫ್ ಇಲ್ಲದೆ 2,000 ನೋಟುಗಳನ್ನು ಬದಲಾಯಿಸಿಕೊಳ್ಳಲು ಆರ್‌ಬಿಐ ಏಕೆ ಅನುಮತಿ ನೀಡುತ್ತಿದೆ. ಬಡತನ ರೇಖೆಗಿಂತ ಕೆಳಗಿರುವ 80 ಕೋಟಿ ಕುಟುಂಬಗಳು ಉಚಿತ ಆಹಾರ ಧಾನ್ಯಗಳನ್ನು ಪಡೆಯುತ್ತವೆ ಎಂಬುದನ್ನೂ ಉಲ್ಲೇಖಿಸಬೇಕಾಗಿದೆ. ಆದ್ದರಿಂದ, 2,000 ರೂ. ನೋಟುಗಳನ್ನು ಬ್ಯಾಂಕ್ ಖಾತೆಗಳಲ್ಲಿ ಮಾತ್ರ ಠೇವಣಿ ಮಾಡುವುದನ್ನು ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ತೆಗೆದುಕೊಳ್ಳುವಂತೆ ಆರ್‌ಬಿಐ ಮತ್ತು ಎಸ್‌ಬಿಐಗೆ ನಿರ್ದೇಶನ ನೀಡಬೇಕು ಎಂದು ಅರ್ಜಿದಾರರು ಕೋರಿದ್ದಾರೆ.

ನಟ ಆದಿತ್ಯ ಸಿಂಗ್ ರಜಪೂತ್ ಬಾತ್ ರೂಂನಲ್ಲಿ ಶವವಾಗಿ ಪತ್ತೆ

ಮುಂಬೈ, ಮೇ 22–ಬಾಲಿವುಡ್‌ನಟ ಹಾಗೂ ರೂಪದರ್ಶಿ ಆದಿತ್ಯ ಸಿಂಗ್ ರಜಪೂತ್, ಸೋಮವಾರ ಮುಂಬೈನ ಅಂಧೇರಿಯಲ್ಲಿರುವ ತಮ್ಮ ಮನೆಯ ಸ್ನಾನಗೃಹ ದಲ್ಲಿ ಶವವಾಗಿ ಪತ್ತೆಯಾಗಿದ್ದಾರೆ. ಆತನ ಸಾವಿನ ಕಾರಣ ಇನ್ನು ನಿಗೂಢವಾಗಿಯೇ ಉಳಿದಿದೆ. ಆದಿತ್ಯ ಸಿಂಗ್ ವಾಸಿಸುತ್ತಿದ್ದ ಮುಂಬೈನ 11ನೇ ಮಹಡಿಯ ವಾಶ್ ರೂಂನಲ್ಲಿ ಆತನ ಶವವಾಗಿ ಪತ್ತೆಯಾಗಿದ್ದು, ಇಂದು ಮಧ್ಯಾಹ್ನ ಅವನ ಸ್ನೇಹಿತ ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಘಟನೆ ಬೆಳಕಿಗೆ ಬಂದಿದೆ. ತಕ್ಷಣವೇ ಆದಿತ್ಯನನ್ನು, ಸೆಕ್ಯೂರಿಟಿಯ ಸಹಾಯದಿಂದ ಆಸ್ಪತ್ರೆಗೆ ಕರೆದೊಯ್ದರೂ ಸಹ ಅಷ್ಟೊತ್ತಿಗೆ ಆತ ಮೃತಪಟ್ಟಿದ್ದ ಎಂದು ತಿಳಿಸಿದ್ದಾರೆ. ಇನ್ನು, ನಟನ ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲವಾದರೂ, ಮಿತಿಮೀರಿದ ಡ್ರಗ್ಸ್ ಸೇವನೆಯೆ ಇದಕ್ಕೆ ಕಾರಣ ಇರಬಹುದು ಎಂದು ಶಂಕೆ ವ್ಯಕ್ತಪಡಿಸಲಾಗಿದೆ. ಆದಿತ್ಯ ಸಾವಿನ ಕುರಿತು ಪೊಲೀಸರು ತನಿಖೆ ಆರಂಭಿಸಿದ್ದು, ಮರಣೋತ್ತರ ಪರೀಕ್ಷೆ ವರದಿಗಾಗಿ ಕಾಯುತ್ತಿದ್ದಾರೆ.



ಅಮೃತವರ್ಷಿಣಿ ಖ್ಯಾತಿಯ ಬಹುಭಾಷಾ ನಟ ಶರತ್ ಬಾಬು ವಿಧಿವಶ

ಹೈದರಾಬಾದ್, ಮೇ 22–ಕನ್ನಡ, ತಮಿಳು, ತೆಲುಗು, ಮಲಯಾಳಂ ಸೇರಿದಂತೆ ಹಲವು ಭಾಷೆಯ ಚಿತ್ರಗಳಲ್ಲಿ ನಟಿಸಿದ್ದ ನಟ ಶರತ್ ಬಾಬು ಅನಾರೋಗ್ಯದಿಂದ ಇಂದು ನಿಧನರಾಗಿದ್ದಾರೆ. ಕಳೆದ ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಶರತ್ ಅವರು ಹೈದ್ರಾಬಾದ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಸದ್ಯ ಅವರ ಪಾರ್ಥಿವ ಶರೀರವನ್ನು ಚೆನ್ನೈನಲ್ಲಿರುವ ಅವರ ನಿವಾಸಕ್ಕೆ ತರಲಾಗುತ್ತಿದೆ ಎಂದು ವರದಿಯಾಗಿದೆ. ಹಲವು ದಿನಗಳಿಂದ ಹೈದರಾಬಾದ್‌ನ ಖಾಸಗಿ ಆಸ್ಪತ್ರೆಯಲ್ಲಿ ಶರತ್ ಬಾಬು ಚಿಕಿತ್ಸೆ ಪಡೆಯುತ್ತಿದ್ದರು. ಬಹು ಅಂಗಾಂಗ ವೈಫಲ್ಯದಿಂದ ಬಳಲುತ್ತಿದ್ದ ಅವರನ್ನು ವೆಂಟಿಲೇಟರ್‌ನಲ್ಲಿರಿಸಿ ಚಿಕಿತ್ಸೆ ಮುಂದುವರಿಸಲಾಗಿತ್ತು. ಆದರೆ ಸೋಮವಾರ (ಮೇ 22) ಚಿಕಿತ್ಸೆ ಫಲಕಾರಿಯಾಗದೇ ಶರತ್‌ಬಾಬು ಅವರು ನಿಧನರಾಗಿದ್ದಾರೆ. ಶರತ್ ಬಾಬು ನಿಧನಕ್ಕೆ ಚಿತ್ರರಂಗದ ಗಣ್ಯರು, ಅಭಿಮಾನಿಗಳು ಸಂತಾಪ ಸೂಚಿಸಿದ್ದಾರೆ. ಚಿತ್ರರಂಗದಲ್ಲಿ 40 ವರ್ಷಗಳನ್ನು ಪೂರೈಸಿರುವ ಶರತ್ ಬಾಬು 200ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿದ್ದಾರೆ. ತೆಲುಗು ಮತ್ತು ತಮಿಳು ಸಿನಿಮಾರಂಗದಲ್ಲಿ ಜನಪ್ರಿಯ ನಟನಾಗಿರುವ ಶರತ್ ಬಾಬು ನಾಯಕನಾಗಿ ಪೋಷಕ ನಟನಾಗಿ ಕಾಣಿಸಿಕೊಂಡಿದ್ದಾರೆ. ರಜನೀಕಾಂತ್ ಜೊತೆಗೆ ಮುತ್ತು, ಅರುಣಾಚಲಂ ಸೇರಿದಂತೆ ಇನ್ನೂ ಕೆಲವು ಸಿನಿಮಾಗಳಲ್ಲಿ ನಟಿಸಿದ್ದಾರೆ.



ಕಿರಿಯ ಶಾಸಕರಾಗಿ ದರ್ಶನ್ ಧ್ರುವನಾರಾಯಣ್ ಸಂವಿಧಾನದ ಹೆಸರಲ್ಲಿ ಪ್ರಮಾಣವಚನ ಸ್ವೀಕಾರ

ಬೆಂಗಳೂರು: ರಾಜ್ಯ ವಿಧಾನಸಭೆಯ ಅತಿ ಕಿರಿಯ ಶಾಸಕರಾಗಿ ನಂಜನಗೂಡು ವಿಧಾನಸಭಾ ಕ್ಷೇತ್ರದ ದಿವಂಗತ ಆರ್.ಧ್ರುವನಾರಾಯಣ್ ಅವರ ಪುತ್ರ ದರ್ಶನ್ ಧ್ರುವನಾರಾಯಣ್ ಅವರು ಸೋಮವಾರ ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

28 ವರ್ಷದ ದರ್ಶನ್ ಧ್ರುವನಾರಾಯಣ್ ಅವರು ಇದೇ ಮೊದಲ ಬಾರಿ ಕರ್ನಾಟಕ ವಿಧಾನಸಭೆಗೆ ಸ್ಪರ್ಧೆ ಮಾಡಿದ್ದರು. ಅವರು ಈ ಚುನಾವಣೆಗೆ ಹಾಲಿ ಶಾಸಕರಾಗಿದ್ದ ಬಿ.ಹರ್ಷವರ್ಧನ್ ಅವರನ್ನು 49,393 ಮತಗಳ ಅಂತರದಿಂದ ಸೋಲಿಸಿದ್ದರು. ಈ ಚುನಾವಣೆಯಲ್ಲಿ ದರ್ಶನ್ ಧ್ರುವನಾರಾಯಣ್ ಅವರು 1,08,582 ಮತಗಳನ್ನು ಪಡೆದರೆ, ಹಾಲಿ ಶಾಸಕ ಬಿ.ಹರ್ಷವರ್ಧನ್ ಅವರು 60,959 ಮತಗಳನ್ನು ಪಡೆದಿದ್ದರು. ದರ್ಶನ್ ಪರ ಮೋಹಕ ತಾರೆ ರಮ್ಯಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸಂಸದ ಡಿ.ಕೆ.ಸುರೇಶ್ ಸೇರಿದಂತೆ ಅನೇಕ ಮಂದಿ ನಂಜನಗೂಡಿನಲ್ಲಿ ಪ್ರಚಾರ ಕೈಗೊಂಡಿದ್ದರು.



ಸೋಮವಾರದಿಂದ ವಿಧಾನಸಭಾ ಅಧಿವೇಶನ 3 ದಿನಗಳ ಕಾಲ ನಡೆಯ ಲಿದೆ. ಸದ್ಯ ಹಂಗಾಮಿ ಸಭಾಧ್ಯಕ್ಷರಾಗಿ ಆರ್‌ವಿ ದೇಶಪಾಂಡೆ ಅಧಿಕಾರ 'ರೂಢ'ರಾಗಿದ್ದಾರೆ. ನಂಜನಗೂಡು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ದರ್ಶನ್ ಅವ ರೊಂದಿಗೆ 9 ಮಂದಿ ಯುವ ಶಾಸಕರು ಈ ಬಾರಿಯ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ. ಇದಲ್ಲದೆ ಕಾಂಗ್ರೆಸ್‌ನಿಂದ 32 ಮಂದಿ, ಬಿಜೆಪಿಯ 22 ಮಂದಿ ಮೊದಲ ಬಾರಿ ಶಾಸಕರಾಗಿದ್ದಾರೆ. ಜೆಡಿಎಸ್‌ನಿಂದ 8 ಮಂದಿ ಸೇರಿ ಒಟ್ಟು 58 ಮಂದಿ ಮೊದಲ ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 22–ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ರಾಜ್ಯ ಸರ್ಕಾರಿ ನೌಕರರ ಮಕ್ಕಳ ಪ್ರತಿಭಾ ಪುರಸ್ಕಾರ–2023ಕ್ಕೆ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಮೇ 31 ಕೊನೇ ದಿನ. ರಾಜ್ಯ ಸರ್ಕಾರಿ ನೌಕರರ ಪ್ರತಿಭಾನ್ವಿತ ಮಕ್ಕಳನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರತಿವರ್ಷ ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ. ಅದರಂತೆ 2023ನೇ ಸಾಲಿನಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ವಿದ್ಯಾರ್ಥಿಯ ತಂದೆ–ತಾಯಿ ಸರ್ಕಾರಿ ನೌಕರರಾಗಿರಬೇಕು ಹಾಗೂ ಸಂಘದ ಸದಸ್ಯರಾಗಿರಬೇಕು. ಸಂಘದಿಂದ ನಿಗದಿಪಡಿಸಿರುವ ನಮೂನೆಯಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ, ತಾಲೂಕು, ಯೋಜನಾ ಶಾಖೆ ಅಧ್ಯಕ್ಷರು ಮತ್ತು ಬೆಂಗಳೂರು ನಗರ ರಾಜ್ಯ ಪರಿಷತ್ ಸದಸ್ಯರಿಂದ ದೃಢೀಕರಿಸಿ ಸಲ್ಲಿಸುವುದು. ನಿಗಮ, ಮಂಡಳಿ, ಪ್ರಾಧಿಕಾರ, ವಿಶ್ವವಿದ್ಯಾಲಯ, ಖಾಸಗಿ ಹಾಗೂ ಅನುದಾನಿತ ವಿದ್ಯಾಸಂಸ್ಥೆಯ ನೌಕರರಾಗಿದ್ದಲ್ಲಿ ಅರ್ಜಿ ಸಲ್ಲಿಸುವಂತಿಲ್ಲ. ನಮೂನೆ ಹಾಗೂ ಅಗತ್ಯ ದಾಖಲೆಗಳಿಲ್ಲದಿದ್ದಲ್ಲಿ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ನಕ್ಕರೆ ಅದೇ ಸ್ವರ್ಗ

ತಾಯಿ : (ಗಂಡನ ಮನೆಗೆ ಹೊರಟು ನಿಂತ ಮಗಳನ್ನು ನೇವರಿಸಿ) : "ಗಂಡನ ಮಾತು ಕೇಳಬೇಕು. ಎದುರು ವಾದಿಸಬೇಡ"

ಮಗಳು : "ಅಮ್ಮಾ, ನೀನು ಮಾತ್ರ ಅಪ್ಪನ ಮೇಲೆ ರೇಗ್ತೀಯಾ?"

ತಾಯಿ : "ಮೊದಮೊದಲು ಸುಮ್ಮನಿರಬೇಕು. ಗಂಡ ತನ್ನ ಎಲ್ಲಾ ಚಟಗಳನ್ನು ಹೇಳಿ ಬಿಡುತ್ತಾನೆ. ಆ ಮೇಲೆ ಅವನ ಜುಟ್ಟು ನಮ್ಮ ಕೈಲಿದ್ದಂತೆ!"

ಮೈಸೂರು ಮಿತ್ರ

ಮಂಗಳವಾರ, 23 ಮೇ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಪರೋಪಕಾರಕ್ಕಾಗಿ ಮರಗಳು ಹಣ್ಣು ಬಿಡುತ್ತವೆ. ನದಿಗಳು ಹರಿಯುತ್ತವೆ. ಹಸುಗಳು ಹಾಲು ಕರೆಯುತ್ತವೆ. ಈ ಶರೀರವು ಪರೋಪಕ್ಕಾರಕ್ಕಾಗಿಯೇ ಇದೆ. – ವಿಕ್ರಮ ಚರಿತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಲಾಭಕ್ಕೆ ಸಕ್ಕರೆ ಮಾರಿ ಗೋಣಿ ಚೀಲ ನೆಕ್ಕಿದ

ನಿಮ್ಮ ಪತ್ರಗಳು

ಮುಖ್ಯಮಂತ್ರಿ ಝೀರೋ ಟ್ರಾಫಿಕ್, ಹಾರ ತುರಾಯಿ ಸ್ವೀಕರಿಸದಿರುವ ನಿರ್ಧಾರ ಸ್ವಾಗತಾರ್ಹ



ಮಾನ್ಯರೆ.

ಎರಡನೇ ಬಾರಿಗೆ ಪ್ರಮಾಣ ಸ್ವೀಕರಿಸಿರುವ ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಝೀರೋ ಟ್ರಾಫಿಕ್ ಅನ್ನು ಹಿಂತೆಗೆದುಕೊಳ್ಳಲು ಬೆಂಗಳೂರು ನಗರ ಆಯುಕ್ತರಿಗೆ ಹೇಳಿರುವುದು ಹಾಗೂ ಸಾರ್ವಜನಿಕರಿಂದ ಗೌರವ ಸನ್ಮಾನದ ರೂಪದಲ್ಲಿ ಹಾಕುವ ಹಾರ ತುರಾಯಿ, ಶಾಲುಗಳನ್ನು ಸ್ವೀಕರಿಸದೆ ಇರಲು ನಿರ್ಧರಿಸಿರುವುದು ಸ್ವಾಗತಾರ್ಹ. ಹಾರ, ತುರಾಯಿ, ಶಾಲುಗಳನ್ನು ಹಾಗೂ ಪ್ರೀತಿ ಗೌರವ ಕಾಣಿಕೆಗಳನ್ನು ಸಲ್ಲಿಸಬೇಕೆನ್ನುವವರು ಪುಸ್ತಕಗಳನ್ನು ನೀಡಿ ಎಂದು ಹೇಳಿರುವುದು ಶ್ಲಾಘನೀಯ.

ಇಂದಿನ ದಿನಗಳಲ್ಲಿ ಪುಸ್ತಕ ಓದುವವರ ಸಂಖ್ಯೆ ಇಳಿಮುಖ. ಇಂತಹ ಸಂದರ್ಭದಲ್ಲಿ ನೂತನ ಮುಖ್ಯಮಂತ್ರಿಗಳು ಪುಸ್ತಕಗಳನ್ನು ನೀಡಿ ಎಂದು ಹೇಳಿರುವುದು ಓದುಗರ ಆಸಕ್ತಿ ಹೆಚ್ಚಿಸಿದಂತೆ, ಹಾರ ತುರಾಯಿ ಶಾಲು– ಶಲ್ಯಗಳಿಂದ ಸನ್ಮಾನ ಮಾಡಿಸಿಕೊಳ್ಳವವರು ಒಮ್ಮೆ ಯೋಚಿಸಬೇಕಾಗುತ್ತದೆ.

–ಪಿ.ಸಿ. ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು.

ಗ್ಯಾರಂಟಿ ನಂಬಿ ಬದುಕುವ ಬದಲು ಕಷ್ಟಪಟ್ಟು ದುಡಿಯುವ ಮನೋಭಾವ ಬೆಳೆಸಿಕೊಳ್ಳಿ



ಮಾನ್ಯರೆ,

ಕರ್ನಾಟಕ ವಿಧಾನಸಭಾ ಚುನಾವಣಾ ಸಮಯದಲ್ಲಿ ಕಾಂಗ್ರೆಸ್ ಪಕ್ಷ ರಾಜ್ಯದ ಜನರಿಗೆ ನೀಡಿದ್ದ ಐದು ಗ್ಯಾರಂಟಿಗಳ ಬಗ್ಗೆ ರಾಜ್ಯಾದ್ಯಂತ ಭಾರಿ ಚರ್ಚೆ ನಡೆಯುತ್ತಿದೆ. ಇದರ ಬಗ್ಗೆ ಪ್ರತಿಕ್ರಿಯಿಸಿರುವ ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯ, ನೂತನ ಸರ್ಕಾರದ ಪ್ರಥಮ ಕ್ಯಾಬಿನೆಟ್ ಸಭೆಯಲ್ಲಿ ಇದರ ಬಗ್ಗೆ ತಾತ್ವಿಕ ಒಪ್ಪಿಗೆ ನೀಡಲಾಗಿದೆ ಎಂದು ತಿಳಿಸಿ, ಮುಂದಿನ ಕ್ಯಾಬಿನೆಟ್ ಸಭೆಯಲ್ಲಿ ಉಳಿದ ವಿವರಗಳನ್ನು ಪ್ರಕಟಿಸಲಾಗುವುದು ಎಂದು ಹೇಳಿದ್ದಾರೆ.

ಸರ್ಕಾರಿ ಮೂಲಗಳ ಪ್ರಕಾರ ಈ ಗ್ಯಾರಂಟಿಗಳನ್ನು ಜಾರಿಗೆ ತರಲು ಸರ್ಕಾರದ ಬೊಕ್ಕಸಕ್ಕೆ ಪ್ರತಿ ವರ್ಷ 50,000 ಕೋಟಿ ರೂಪಾಯಿಗಳ ಖರ್ಚು ಬೀಳುತ್ತದೆ.

ಮತ್ತೊಂದು ಮೂಲದ ಪ್ರಕಾರ ಎಲ್ಲರಿಗೂ ಈ ಗ್ಯಾರಂಟಿಗಳು ಸಿಗುವುದಿಲ್ಲ. ಸರ್ಕಾರ ಶೀಘ್ರದಲ್ಲೇ ಫಲಾನುಭವಿಗಳನ್ನು ಗುರುತಿಸಲು ಕೆಲವು ಮಾನದಂಡಗಳ ಪ್ರಕಟಿಸಲಿದೆ ಎಂದು ಹೇಳಲಾಗಿದೆ. ಹೀಗಾಗಿ ಇವುಗಳ ಜಾರಿಯ ಬಗ್ಗೆ ಸಾರ್ವಜನಿಕರಲ್ಲಿ ಒಂದು ರೀತಿಯ ಗೊಂದಲ ಸೃಷ್ಟಿಯಾಗಿರುವುದಂತೂ ಸತ್ಯ.

ಈ ಹಿಂದೆ ಅಂದರೆ 2013ರ ಚುನಾವಣೆಯಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅನ್ನಭಾಗ್ಯ ಸೇರಿದಂತೆ ಜನರಿಗೆ ಹಲವಾರು ಭಾಗ್ಯಗಳನ್ನು ನೀಡಿತ್ತು. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಕೂಡ ಭಾಗ್ಯಲಕ್ಷ್ಮಿ ಸೇರಿದಂತೆ ಹಲವಾರು ಜನಪರ ಯೋಜನೆಗಳನ್ನು ಜಾರಿಗೆ ತಂದಿತು. ಇವು ಬಸವರಾಜ ಬೊಮ್ಮಾಯಿಯವರ ಕಾಲದಲ್ಲೂ ಸಹ ಮುಂದುವರೆಯಿತು.

ಜನರಿಗೆ ಉಚಿತ ಭಾಗ್ಯಗಳನ್ನು ನೀಡುವ ಮೂಲಕ ಅವರನ್ನು ಸೋಮಾರಿಗಳನ್ನಾಗಿ ಮಾಡಲಾಗುತ್ತಿದೆ ಎಂಬ ಆರೋಪ ಆಗಾಗ್ಗೆ ಕೇಳಿ ಬರುತ್ತಿದೆ. ಇಂತಹ ಭಾಗ್ಯಗಳು "ತೂಕಡಿಸುತ್ತಿದ್ದರಿಗೆ ಚಾಪೆ ಹಾಸಿ ಕೊಟ್ಟಂತೆ" ಎಂಬ ವಾದವೂ ಇದೆ. ಇಂತಹ ಉಚಿತ ಕೊಡುಗೆಗಳನ್ನು ನೀಡುವುದರ ಬದಲು ಹೆಚ್ಚು ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಿ ಜನರನ್ನು ಅದರಲ್ಲೂ ವಿಶೇಷವಾಗಿ ಯುವ ಜನತೆಯನ್ನು ಉದ್ಯೋಗಶೀಲರನ್ನಾಗಿ ಮಾಡುವುದು ಒಳ್ಳೆಯದು. ವೃದ್ಧರಿಗೆ, ವಿಶೇಷ ಚೇತನರಿಗಾಗಿ ಹಾಗೂ ಬೇರೆ ಬೇರೆ ಕಾರಣಗಳಿಂದ ಕೆಲಸ ಮಾಡಲು ಸಾಧ್ಯವಾಗದ ಜನರಿಗೆ, ಬೇಕಾದರೆ ಸರ್ಕಾರ ಉಚಿತ ಕೊಡುಗೆಗಳನ್ನು ನೀಡಬಹುದು. ಉಚಿತ ಕೊಡುಗೆಗಳನ್ನುನೀಡುವುದರ ಮೂಲಕ ಮತದಾರರ ವಿಶ್ವಾಸ ಗಳಿಸಿ, ಮತಗಳನ್ನು ಸೆಳೆಯುವ ತಂತ್ರ ಈ ಉಚಿತ ಕೊಡುಗೆಗಳಲ್ಲಿ ಅಡಗಿದೆ ಎಂಬುದು ಬಲ್ಲವರ ಮಾತು. ಅದು ನಿಜ ಕೂಡ ಹೌದು. ನೆರೆಯ ತಮಿಳುನಾಡು, ಆಂಧ್ರಪ್ರದೇಶ ಮುಂತಾದ ರಾಜ್ಯಗಳಲ್ಲಿ ಚುನಾವಣಾ ಸಂದರ್ಭಗಳಲ್ಲಿ ಇಂತಹ ಉಚಿತ ಕೊಡುಗೆಗಳನ್ನು ನೀಡಿ ಮತದಾರರನ್ನು ಸೆಳೆಯಲಾಗುತ್ತದೆ. ಇದರ ಜೊತೆಗೆ, ಉಚಿತ ಟಿವಿ, ಕುಕ್ಕರ್, ಮಿಕ್ಸರ್, ಮುಂತಾದ ಗೃಹೋಪಯೋಗಿ ವಸ್ತುಗಳನ್ನು ಮನೆ ಮನೆಗೂ, ಕೇರಿ ಕೇರಿಗೂ ಹಂಚಲಾಗುತ್ತದೆ. ಆದರೆ ಇವೆಲ್ಲಾ ಗ್ಯಾರಂಟಿ ಯೋಜನೆಗಳ ಅಡಿಯಲ್ಲಿ ಬರುವುದಿಲ್ಲ ಎಂಬುದು ಬೇರೆ ಮಾತು. ಇವೆಲ್ಲಾ "ಒನ್ ವೇ ಟೈಮ್ ಪಾಸ್‌ವರ್ಡ್" ಇದ್ದ ಹಾಗೆ. ಅದೇನೇ ಇರಲಿ ಈ ಗ್ಯಾರಂಟಿಗಳನ್ನು ನಂಬಿಕೊಂಡು ಬದುಕುವ ಬದಲು, ಜನರು, ಕಷ್ಟಪಟ್ಟು ದುಡಿದು ಬದುಕುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಕಸುವಿನಹಳ್ಳಿಯಲ್ಲಿ ಬಸವ ಭವನ ನಿರ್ಮಿಸಿ

ಮಾನ್ಯರೆ,

ನಂಜನಗೂಡು ತಾಲೂಕಿನ ದೊಡ್ಡ ಗ್ರಾಮವಾದ ಕಸುವಿನಹಳ್ಳಿಯಲ್ಲಿ ಲಿಂಗಾಯತ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಈಗಾಗಲೇ ಬೇರೆ ಸಮುದಾಯದವರಿಗೆ ಅಂಬೇಡ್ಕರ್ ಭವನ, ಕನಕ ಭವನ ಇರುವುದರಿಂದ ಲಿಂಗಾಯತ ಸಮುದಾಯದವರಿಗೆ ಬೇಸರವಾಗಿದೆ. ತಾಲೂಕಿನ ಪ್ರಮುಖ ಗ್ರಾಮವಾಗಿರುವ ಕಸುವಿನಹಳ್ಳಿಯಲ್ಲಿ ಬಸವ ಭವನದ ಅಗತ್ಯವಿದೆ. ಆದ್ದರಿಂದ ಮಾನ್ಯ ಶಾಸಕರು ಗಮನಹರಿಸಿ ಕೂಡಲೇ ಬಸವ ಭವನವನ್ನು ನಿರ್ಮಿಸಬೇಕೆಂದು ಮನವಿ.

–ಮಹಾಂತೇಶ್ ಬಸಪ್ಪ, ಬಳ್ಳೂರುಹುಂಡಿ, ನಂಜನಗೂಡು ತಾ.

ಸಂಸ್ಕೃತ ಪಾಠಶಾಲೆ ಎದುರಿನ ರಸ್ತೆ ಸರಿಪಡಿಸಿ

ಮಾನ್ಯರೆ,

ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆ, ಸಂಸ್ಕೃತ ಪಾಠಶಾಲೆ ಎದುರಿಗಿರುವ ಸಿಗ್ನಲ್ ರಸ್ತೆ ಛಿದ್ರ–ಛಿದ್ರವಾಗಿ ಹಾಳಾಗಿ ಸುಮಾರು ತಿಂಗಳೇ ಆಗಿದೆ. ಈ ಜಾಗದಲ್ಲಿ ವಾಹನ ಸವಾರರು ಜೀವ ಹಿಡಿದುಕೊಂಡು ಸಂಚರಿಸುವಂತಾಗಿದೆ. ಹಾಗೂ ಎಚ್ಚರ ತಪ್ಪಿದರೆ ಅಪಘಾತ ಗ್ಯಾರಂಟಿ. ಈ ರಸ್ತೆಯಲ್ಲಿ ಪಾಲಿಕೆ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಇನ್ನಿತರೆ ಗಣ್ಯರು ಸಂಚರಿಸುತ್ತಿದ್ದರೂ ಇದು ಅವರ ಕಣ್ಣಿಗೆ ಕಾಣುತ್ತಿಲ್ಲವೆ. ಕೂಡಲೇ ಅನಾಹುತ ಸಂಭವಿಸುವ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ಈ ರಸ್ತೆಯನ್ನು ಸರಿಪಡಿಸುವಂತೆ ಮನವಿ.

–ಆದಿತ್ಯ ಲೋಕೇಶ್, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ರಾಳ್ಳಪಲ್ಲಿ ಅನಂತಕೃಷ್ಣ ಶರ್ಮರ ಗಾನಕಲೆ

ಆಂಧ್ರ–ಕನ್ನಡ–ಸಂಸ್ಕೃತ–ದ್ರಾವಿಡ ಭಾಷೆಗಳ ಪಂಡಿತರೂ, ಸಂಗೀತದ ದೊಡ್ಡ ವಿದ್ವಾಂಸರೂ ಆಗಿದ್ದ ರಾಳ್ಳಪಲ್ಲಿ ಅನಂತಕೃಷ್ಣ ಶರ್ಮರು (23.1.1893–11.3.1979) ಇಪ್ಪತ್ತನೆಯ ಶತಮಾನದಲ್ಲಿದ್ದ ಮಹಾವ್ಯಕ್ತಿಗಳಲ್ಲೊಬ್ಬರು. ಸಂಗೀತ ತಿಳಿದಿದ್ದವರಿಗೆ ಸಾಹಿತ್ಯ ತಿಳಿಯದು, ಸಾಹಿತ್ಯ ತಿಳಿದವರಿಗೆ ಸಂಗೀತದ ಗಂಧವೇ ಇಲ್ಲ ಎನ್ನುವ ಪರಿಸ್ಥಿತಿಯಲ್ಲಿ ಎರಡರಲ್ಲೂ ಸಮಾನ ವೈದುಷ್ಯವನ್ನು ಪಡೆದಿದ್ದ ರಾಳ್ಳಪಲ್ಲಿ ಅನಂತಕೃಷ್ಣ ಶರ್ಮರಂತಹ ವ್ಯಕ್ತಿಗಳು ನಮ್ಮಲ್ಲಿದ್ದರು ಎನ್ನುವುದೇ ನಮಗೆ ಸಂತಸದ ವಿಷಯ. ಅವರು ಹುಟ್ಟಿದ್ದು ಆಂಧ್ರದ ಕಂಬದೂರು ಮಂಡಲದ ರಾಳ್ಳಪಲ್ಲಿ ಎಂಬ ಗ್ರಾಮದಲ್ಲಿ. ಆದರೆ ಸಂಸ್ಕೃತದಲ್ಲೂ ಸಂಗೀತದಲ್ಲೂ ಅವರು ಉನ್ನತ ವ್ಯಾಸಂಗವನ್ನು ಮಾಡಿದ್ದು ಮೈಸೂರಿನಲ್ಲಿ. ಸಂಗೀತದಲ್ಲಿ ಅವರ ಗುರು ಬಿಡಾರಂ ಕೃಷ್ಣಪ್ಪನವರು. ಮೂವತ್ತೆಂಟು ವರ್ಷ ಅವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ತೆಲುಗು ಪಂಡಿತರಾಗಿ ಅಧ್ಯಾಪನವನ್ನು ಮಾಡಿದರು. ಸಂಸ್ಕೃತ, ಕನ್ನಡ, ತೆಲುಗು ಭಾಷೆಗಳಲ್ಲಿ ಅವರು ಗ್ರಂಥಗಳನ್ನು ರಚಿಸಿದ್ದಾರೆ. ಸಾರಸ್ವತ ಲೋಕಕ್ಕೆ ಅವರ ಅತ್ಯಂತ ಪ್ರಮುಖ ಕೊಡುಗೆ ಎಂದರೆ ಅನ್ನಮಾಚಾರ್ಯರ ಕೃತಿಗಳ ಸಂಪಾದನೆ. ಅವರಿಗೆ ಸಂಗೀತ ಕಲಾನಿಧಿ, ಸಂಗೀತ ಕಲಾರತ್ನ ಮುಂತಾದ ಹಲವು ಪ್ರಶಸ್ತಿಗಳು ಬಂದಿದ್ದವು.

ರಾಳ್ಳಪಲ್ಲಿಯವರ ಹಲವು ಲೇಖನಗಳ ಮತ್ತು ಭಾಷಣಗಳ ಸಂಗ್ರಹರೂಪವಾದ ಗ್ರಂಥ 'ಗಾನಕಲೆ'. ಇದು ಮೊದಲು ಮುದ್ರಿತವಾದದ್ದು 1952 ರಲ್ಲಿ. ಇದರ ಮರು ಮುದ್ರಣ 1973ರಲ್ಲಿ. ಮತ್ತೆ ಈಚೆಗೆ ರಾಷ್ಟ್ರೋತ್ಥಾನ ಸಾಹಿತ್ಯದಿಂದ 2022ರಲ್ಲಿ ವಿಸ್ತೃತವಾಗಿ ಮುದ್ರಿತವಾಗಿದೆ. ಗಾನಕಲೆಯಲ್ಲಿ ಶರ್ಮರ ಇಪ್ಪತ್ತಮೂರು ಲೇಖನಗಳು ಪ್ರಕಟಿತವಾಗಿವೆ. ಇವುಗಳ ಜೊತೆಗೆ ಡಿವಿಜಿ ಅವರು ಈ ಗ್ರಂಥದ ಬಗೆಗೆ ಜನಪ್ರಗತಿ ಎಂಬ ಪತ್ರಿಕೆಯಲ್ಲಿ ಬರೆದಿದ್ದ ವಿಮರ್ಶೆ, ರಾಳ್ಳಪಲ್ಲಿಯವರು ಡಿವಿಜಿ ಅವರಿಗೆ ಬರೆದ ಪತ್ರ, ಪ್ರಜಾವಾಣಿಯಲ್ಲಿ ಎಸ್.ಆರ್. ರಾಮಸ್ವಾಮಿ ಅವರು ಮಾಡಿದ್ದ ವಿಮರ್ಶೆಗಳೂ ಈಗ ಗ್ರಂಥದಲ್ಲಿ ಸೇರಿ ಅದರ ಮೌಲ್ಯವನ್ನು ಹೆಚ್ಚಿಸಿವೆ.

ಅನಂತಕೃಷ್ಣ ಶರ್ಮರು ತಾವು ಕಣ್ಣಾರೆ ಕಂಡಿದ್ದ, ಮನಸಾರೆ ಸೇವೆ ಮಾಡಿದ್ದ ವೀಣೆ ಶೇಷಣ್ಣನವರ ಮತ್ತು ಬಿಡಾರಂ ಕೃಷ್ಣಪ್ಪನವರ ಆತ್ಮೀಯ ಪರಿಚಯವನ್ನು ಗೌರವಪೂರ್ವಕವಾಗಿ ಮಾಡಿಕೊಟ್ಟಿದ್ದಾರೆ. ಶೇಷಣ್ಣನವರು **ವೈಣಿಕ ಶಿಖಾಮಣಿ** ಮತ್ತು ಬಿಡಾರಂ ಕೃಷ್ಣಪ್ಪನವರು **ಗಾನವಿಶಾರದ** ಎಂಬ ಬಿರುದನ್ನು ಮೈಸೂರು ಅರಮನೆಯಿಂದ ಪಡೆದಿದ್ದವರು. ಅವರಿಬ್ಬರ ವಿಷಯದಲ್ಲೂ ಅನಂತಕೃಷ್ಣ ಶರ್ಮರದು ಅನಂತ ಭಕ್ತಿ. ಲಕ್ಷಣ ಗ್ರಂಥಗಳ ಬಗೆಗೆ ಇಬ್ಬರೂ ಅಷ್ಟು ತಲೆಕೆಡಿಸಿಕೊಂಡಿರಲಿಲ್ಲವಂತೆ. ಅವರ ಬಗೆಗೆ ಅನಂತಕೃಷ್ಣ ಶರ್ಮರು ಹೀಗೆಂದಿದ್ದಾರೆ–

"ಇಬ್ಬರಲ್ಲಿ ಯಾರೂ ಲಾಕ್ಷಣಿಕರಲ್ಲ ಎಂದರೆ ಸಂಗೀತ ಲಕ್ಷಣ ಗ್ರಂಥಗಳನ್ನು ಬಾಯಿಪಾಠ ಮಾಡಿ ಪ್ರತಿ ವಿಷಯಕ್ಕೂ ಒಂದು ಶ್ಲೋಕವನ್ನು ಉದಾಹರಿಸಬಲ್ಲವರಲ್ಲ. ಅವರು ಕಲಿತದ್ದು ಸಾಧಿಸಿದ್ದು ಶಬ್ದಾರ್ಥ ವಿದ್ಯೆಯಲ್ಲ, ನಾದಲಯ ವಿದ್ಯೆ. ಇಬ್ಬರಿಗೂ ಸರ್ವಸಾಮಾನ್ಯವಾದ ಕನ್ನಡದ ಓದು ಬರಹಗಳ ಮಟ್ಟವೂ ಬಹಳ ಸಾಮಾನ್ಯವಾಗಿತ್ತು. ಪ್ರಾಯಿಕವಾಗಿ ಸಂಸ್ಕೃತ ಭಾಷೆಯಲ್ಲೇ ಬರೆದ ಲಕ್ಷಣ ಗ್ರಂಥಗಳೆಲ್ಲಾ ಅವರ ಪಾಲಿಗೆ ಇಲ್ಲದ ಹಾಗೆಯೇ ಆಗಿದ್ದವು. ಆದ್ದರಿಂದಲೇ ಚಾರಿತ್ರಿಕವಾಗಿ ಸಂಗೀತ ವಿದ್ಯೆಯಲ್ಲಿ ಉಂಟಾದ ಏರಿಳಿತಗಳೂ ಮಾರ್ಪಾಡುಗಳೂ ಅವರಿಗೆ ತಿಳಿದಿರಲಿಲ್ಲ. ಅವರು ಅರಿತಿದ್ದೆಲ್ಲ ಸಮಕಾಲಿಕವಾದ ಸಂಗೀತ ಲಕ್ಷಣವೇ. ಅದಕ್ಕನುಸಾರವಾಗಿ ಬಾರಿಸುವುದಕ್ಕೆ ಹಾಡುವುದಕ್ಕೆ ಅವರು ತಮ್ಮ ಜೀವಮಾನದ ಪ್ರತಿನಿಮಿಷವನ್ನೂ ವೆಚ್ಚ ಮಾಡಿದವರು. ಸಮಕಾಲಿಕರಲ್ಲಿ ಈ ಮಟ್ಟದವರು ಮತ್ತೊಬ್ಬರಿಲ್ಲ ಎಂಬ ಪ್ರಖ್ಯಾತಿಯನ್ನೂ, ಗೌರವವನ್ನೂ ಗಳಿಸಿದ್ದ ಧನ್ಯಜೀವಿಗಳು" (ಪು.47)

ಅನಂತಕೃಷ್ಣ ಶರ್ಮರು ಹಿಂದಿನ ಶ್ರೇಷ್ಠ ಗಾಯಕರೂ, ವಾಗ್ಗೇಯಕಾರರೂ ಆಗಿದ್ದ ತ್ಯಾಗರಾಜರ, ಅನ್ನಮಾಚಾರ್ಯರ, ಮುತ್ತುಸ್ವಾಮಿ ದೀಕ್ಷಿತರ ಮತ್ತು ಕ್ಷೇತ್ರಯ್ಯನವರ ಬಗೆಗೆ ಅತ್ಯಮೂಲ್ಯ ಲೇಖನಗಳನ್ನು ಬರೆದಿದ್ದಾರೆ. ಇವರೆಲ್ಲರೂ ನಾದತಪಸ್ವಿಗಳು ಎಂಬ ವಿಷಯದಲ್ಲಿ ಯಾರ ವಿಪ್ರತಿ ಪತ್ತಿಯೂ ಇಲ್ಲ. ತ್ಯಾಗರಾಜರಿಗೆ ಶ್ರೀರಾಮನೇ ಪರದೇವತೆ ಹೇಗಾದನೆಂಬ ಬಗೆಗೆ ಶರ್ಮರು ಅಮೂಲ್ಯ ಮಾಹಿತಿಯನ್ನು ಕೊಟ್ಟಿದ್ದಾರೆ.

"ಗೋಲಿ ಗುಂಡು ಆಡುವ ಪ್ರಾಯದಲ್ಲೇ ತಂದೆ ರಾಮಬ್ರಹ್ಮನು ಮಗನಿಗೆ ರಾಮನಾಪೋದೇಶ ಮಾಡಿದ್ದಾನೆ. ತರುವಾಯ ಐದಾರು ದಿವಸಗಳೊಳಗೇ ರಾಮಕೃಷ್ಣಾನಂದಸ್ವಾಮಿ ಎಂಬ ಯತೀಶ್ವರರು ಶ್ರೀ ರಾಮಷಡಕ್ಷರೀ ಮಂತ್ರವನ್ನು ಅಂಗನ್ಯಾಸಕರ ನ್ಯಾಸಗಳ ಸಹಿತ ಉಪದೇಶ ಮಾಡಿದನು. ಅದು ಮೊದಲು ಆ ಮಂತ್ರವನ್ನು ದಿನವೊಂದಕ್ಕೆ ಒಂದು ಲಕ್ಷ ಇಪ್ಪತ್ತೈದು ಸಾವಿರ ನಾಮಗಳಂತೆ ಜಪಿಸುತ್ತ ತ್ಯಾಗರಾಜನು ತನ್ನ ಮೂವತ್ತೆಂಟನೆಯ ಪ್ರಾಯದಲ್ಲಿ ತೊಂಬತ್ತಾರು ಕೋಟಿನಾಮಗಳನ್ನು ಜಪಿಸಿ ಮುಗಿಸಿದನು. ಇದೊಂದು ಕಥೆ. ವೆಂಕಟರಮಣ ಭಾಗವತರ ಬರವಣಿಗೆಯಿಂದ ಮೂರು ಸಲವಾದರೂ ಕೋಟಿ ಜಪವನ್ನು ಮುಗಿಸಿದ್ದಾನೆ ಎಂದು ತಿಳಿದುಬರುವುದು" (ಪು.75).

ಇದು ಭುವನದ ಭಾಗ್ಯ. ಇದರಿಂದಲೇ ಇಂದು ಕರ್ನಾಟಕ ಸಂಗೀತಕ್ಕೆ ಜೀವನಾಡಿಯಾಗಿರುವ ಅದ್ಭುತ ಕೀರ್ತನೆಗಳು ಜಗತ್ತಿಗೆ ಲಭ್ಯವಾಗಿವೆ. ತ್ಯಾಗರಾಜರಿಲ್ಲದ ಕರ್ನಾಟಕ ಸಂಗೀತ ಕಲ್ಪಿಸಿಯು ಹೇಗೆ ಸಾಧ್ಯ ಎನ್ನುವಂತಾಗಿದೆ.

ಅನ್ನಮಾಚಾರ್ಯರ ಬಗೆಗೆ ಹೆಚ್ಚು ಜನರಿಗೆ ತಿಳಿದಿಲ್ಲ. ಆದರೆ ತೆಲುಗು ಭಕ್ತಿ ಸಾಹಿತ್ಯಕ್ಕೆ ಅವರ ಕೊಡುಗೆ ಅಪಾರ, ಅನರ್ಘ್ಯ ಎಂದು ಅನಂತಕೃಷ್ಣ ಶರ್ಮರ ಲೇಖನಗಳಿಂದ ತಿಳಿದುಬರುತ್ತದೆ. ಅವರ ಮಾತಿನಲ್ಲೇ ಅದನ್ನು ಕೇಳೋಣ–

"ಸಾಹಿತ್ಯದ ನೋಟದಿಂದ ನೋಡಿದರೆ ನಮ್ಮ ಸೌಭಾಗ್ಯಕ್ಕೆ ನಾವೇ ಆಶ್ಚರ್ಯ ಪಡಬೇಕಾದ ರಾಶಿ, ಕಾವ್ಯಗುಣ ಉಳ್ಳದ್ದು ಆತನ ಸಂಕೀರ್ತನ ಸಾರಸ್ವತ.

ತೆಲುಗಿನಲ್ಲೇ ಅಲ್ಲ, ಯಾವ ಸಾಹಿತ್ಯದಲ್ಲೂ ಇಂಥ ಉದಾತ್ತವಾದ ರಚನೆ, ಇಷ್ಟು ಒಬ್ಬ ಕವಿ ಕೊಟ್ಟದ್ದು ಕಾಣುವುದು ಕಷ್ಟ. ಆತ ರಚಿಸಿದ ಕೃತಿಗಳು ಮೂವತ್ತೆರಡು ಸಾವಿರ ಎಂದು ಆತನ ಮೊಮ್ಮಗ, ದ್ವಿಪದ ಕವಿ ಶಿಖಾಮಣಿ 'ಚಿನ್ನನ್ನ' ಎಂಬ ತಿರುವೇಂಗಡನಾಥ ಹೇಳಿದ್ದಾನೆ. ನಾವು ಅದನ್ನು ನಂಬಿದರೂ ನಂಬದಿದ್ದರೂ ಈಗ ನಮಗೆ ಸಿಕ್ಕಿ ಸಿದ್ಧವಾಗಿರುವ ಸುಮಾರು ಹದಿನಾಲ್ಕು ಸಾವಿರ ಕೃತಿಗಳನ್ನು ನೋಡಿ ನಮ್ಮ ಕಣ್ಣನ್ನು ನಂಬದಿರಲು ಸಾಧ್ಯವಿಲ್ಲ." (ಪು.206).

ಮುತ್ತುಸ್ವಾಮಿ ದೀಕ್ಷಿತರ ಬಗೆಗೆ ಬರೆದಿರುವ ಲೇಖನದಲ್ಲೂ ಅಪೂರ್ವ ಮಾಹಿತಿಗಳಿವೆ. ಶ್ರೀ ಚಕ್ರೋಪಾಸನೆಯ ಒಳನೋಟಗಳೂ ಇವೆ. ಬೇರೆ ವಾಗ್ಗೇಯಕಾರರ ಕೀರ್ತನೆಗಳನ್ನು ಯಾರು ಬೇಕಾದರೂ ಹಾಡಬಹುದು. ದೀಕ್ಷಿತರ ಕೃತಿಗಳನ್ನು ಹಾಡಲು ತಪಸ್ಸು ಮಾಡಿರಬೇಕು. ಶರ್ಮರು ಆತ್ಮಸಾಕ್ಷಿಯಾಗಿ ಬರೆದಿರುವ ಮಾತುಗಳು ಇಂತಿವೆ–

"ಭಾಷೆಗಿಂತಲೂ ನಾದವೇ ಪ್ರಧಾನವಾಗಿರುವುದನ್ನು ಇವರ ರಚನೆಯಲ್ಲಿ ನಾವು ಕಾಣುತ್ತೇವೆ. ತ್ಯಾಗಯ್ಯನವರು ಮುಂತಾದವರ ಕೀರ್ತನೆಗಳಲ್ಲಿ ಮಧ್ಯಲಯವೂ ದ್ರುತಲಯವೂ ಪ್ರಧಾನವಾಗಿರುತ್ತವೆ. ಇವರ (ಮುತ್ತುಸ್ವಾಮಿ ದೀಕ್ಷಿತರ) ರಚನೆಗಳಲ್ಲಿ ವಿಲಂಬಿತಲಯವು ಮುಖ್ಯವಾಗಿರುವುದುಂಟು. ಆದ್ದರಿಂದಲೇ, ಶುದ್ಧವಾದ ಶರೀರ ಮತ್ತು ಶ್ವಾಸಸಿದ್ಧಿ, ಏಕಾಗ್ರವಾದ ಕಾಲಪ್ರಮಾಣ ಜ್ಞಾನ ಇಲ್ಲದವರು ದೀಕ್ಷಿತರ ಯಾವ ಕೀರ್ತನೆಯನ್ನೂ ತೃಪ್ತಿಕರವಾಗಿ ಹಾಡಲಾರರು. ನಾದಯೋಗ ಸಾಧನೆಗೆ ದೀಕ್ಷಿತರ ಕೃತಿಗಳು ಬಹಳ ಸಹಾಯಕವಾಗುವುವು" (ಪು.107).

'ಗೀತಗೋವಿಂದದ ಕೆಲವು ಪಾಠಗಳ ಪರಿಶೀಲನೆ' ಎಂಬ ಲೇಖನದಲ್ಲಿ ಅನಂತಕೃಷ್ಣ ಶರ್ಮರ ಸೂಕ್ಷ್ಮೇಕ್ಷಿಕೆ ವ್ಯಕ್ತವಾಗಿದೆ. ಸಂಸ್ಕೃತ ಸಾಹಿತ್ಯದ ಚಿಂತನೆಯಲ್ಲೇ ಮುಳುಗಿರುವವರಿಗೂ ಅರಿವಿಗೆ ಬರದ ಸೂಕ್ಷ್ಮ ವ್ಯತ್ಯಾಸಗಳು ಶರ್ಮರಿಗೆ, ಅವರು ಸಂಗೀತಜ್ಞರೂ ಆಗಿರುವುದರಿಂದ ಗೋಚರವಾಗಿವೆ. ಅವರು ಗೀತ ಗೋವಿಂದದ ವ್ಯಾಖ್ಯಾಕಾರನಾದ ಕುಂಭಕರ್ಣನ ವಿಚಾರಚಾತುರಿಯನ್ನೂ ಗಮನಿಸಿದ್ದಾರೆ. ಈ ಲೇಖನ ಸಾಮಾನ್ಯ ವಾಚಕರಿಗೆ ಕಬ್ಬಿಣದ ಕಡಲೆಯೇ ಸರಿ. ಸಂಸ್ಕೃತದ ಮತ್ತು ಸಂಗೀತ ಜ್ಞಾನ, ಸಂಪಾದನಶಾಸ್ತ್ರದ ಪರಿಚಯ ಇದ್ದವರಿಗೆ ಈ ಲೇಖನ ಉತ್ತಮ ಪಾಠದಂತಿದೆ.


'ವಾಲ್ಮೀಕಿಯ ಗೇಯ ಪರಿಸ್ಪಂದ' ಎಂಬ ಲೇಖನವು ಆದಿಕವಿಯ ಸಂಗೀತದ ಒಲವನ್ನು ಬಿಂಬಿಸುವುದಲ್ಲದೆ ಲೇಖಕರ ವಿಶಾಲದೃಷ್ಟಿಯ ದ್ಯೋತಕವಾಗಿದೆ. ಎಷ್ಟೊಂದು ಗ್ರಂಥಗಳನ್ನು ಅವರು ಪರೀಕ್ಷಿಸಿದ್ದಾರೆ. ಅಯೋಧ್ಯೆಯಾಗಲಿ ಕಿಷ್ಕಿಂದೆಯಾಗಲಿ ಲಂಕೆಯಾಗಲಿ, ಅಲ್ಲಿ ಗಾಯಕರು, ನರ್ತಕರು ಇದ್ದರೆಂದು ವಾಲ್ಮೀಕಿಯ ವರ್ಣನೆ. ಈ ಕಲೆಗಳು ಜೀವನದ ಅವಿಭಾಜ್ಯ ಅಂಗಗಳೆಂಬುದು ಅವನ ನಂಬಿಕೆ. ಆದಿಕವಿಯ ಮಾತುಗಳಲ್ಲಿ ಸಂಗೀತಶಾಸ್ತ್ರದ ಹೊಳಹುಗಳಿವೆ ಎಂಬುದನ್ನು ಅನಂತಕೃಷ್ಣ ಶರ್ಮರು ವಿವರಿಸಿದ್ದಾರೆ. ಸಾಹಿತ್ಯ–ಸಂಗೀತಗಳು ಸ್ವತಂತ್ರ ಶಾಸ್ತ್ರಗಳು. ಒಂದಿಲ್ಲದೆ ಮತ್ತೊಂದು ಇರುವುದು ಸಾಧ್ಯ. ಎರಡೂ ಸೇರಿದರೆ ಬಂಗಾರದ ಹೂವಿಗೆ ಪರಿಮಳದ ಯೋಗ ಎಂಬುದು ಶರ್ಮರ ಅಭಿಪ್ರಾಯ.

ಈ ಪುಸ್ತಕದಲ್ಲಿರುವ ಎಲ್ಲಾ ಲೇಖನಗಳ ಬಗೆಗೆ ಬರೆಯುವುದು ಪ್ರಸ್ತುತ ಅಂಕಣದ ಮಿತಿಗೆ ಹೆಚ್ಚಾಗುವುದರಿಂದ ನಾನು ಬರೆದಿಲ್ಲ. ಬಹುಶ್ರುತರೂ ಸರ್ವಜ್ಞಕಲ್ಪರೂ ಆಗಿದ್ದ ಡಿವಿಜಿ ಅವರೇ ಉತ್ತಮ ಮಾತುಗಳನ್ನಾಡಿದ್ದಾರೆ. "ಗಾನಕಲೆಯನ್ನು ಕುರಿತು ಗ್ರಂಥ ಬರೆಯಲು ಇರಬೇಕಾದ ಅಧಿಕಾರ ಸಂಪತ್ತಿನಲ್ಲಿ ಶ್ರೀಮಾನ್ ರಾಳ್ಳಪಲ್ಲಿ ಅನಂತಕೃಷ್ಣ ಶರ್ಮರವರಿಗೆ ಸಮಾನರಾದವರು ನಮ್ಮ ದೇಶದಲ್ಲಿ ಈಗ ಇನ್ನಿಬ್ಬರು ಮೂವರಾದರೂ ಇದ್ದಾರೆಂದರೆ ಅತಿಶಯದ ಮಾತಾದೀತು" ಎಂಬ ಅವರ ಮಾತು ವೇದ ವಚನದಂತಿದೆ. ಗುಂಡಪ್ಪನವರ ವಿಮರ್ಶೆ ಸ್ವತಂತ್ರ ಲೇಖನದ ಸತ್ತ್ವವನ್ನು ಹೊಂದಿದೆ. ಅವರಿಗೆ ದೀಕ್ಷಿತರಲ್ಲಿ ಹೆಚ್ಚು ಗೌರವ. "ರಾಗದ ಪರಮೋತ್ಕೃಷ್ಟ ಸ್ವರೂಪವನ್ನು ಗೇಯಕೃತಿಯಲ್ಲಿ ಪರಿಪೂರ್ಣವಾಗಿ ಫಲಿತವಾಗಿಸಿರುವ ವಾಗ್ಗೇಯಕಾರರೆಂದರೆ ಮುತ್ತುಸ್ವಾಮಿ ದೀಕ್ಷಿತರು" ಎಂದಿದ್ದಾರೆ. ಈ ವಿಮರ್ಶೆಯಲ್ಲಿ ಡಿವಿಜಿ ಪ್ರಸ್ತಾವಿಸಿರುವ ಒಂದೊಂದು ವಿಚಾರವನ್ನು ಸಂಗೀತಜ್ಞರು ಮತ್ತು ಸಂಗೀತಾಸಕ್ತರು ಮನನ ಮಾಡಬೇಕು.

ಶ್ರೀ ಎಸ್.ಆರ್. ರಾಮಸ್ವಾಮಿಯವರು ಪ್ರಜಾವಾಣಿಯಲ್ಲಿ (23.12.1973)ಬರೆದಿದ್ದ ವಿಮರ್ಶೆಯ ಶೀರ್ಷಿಕೆ "ಶ್ರೋತೃ–ಗಾಯಕ ಪುನರ್ವಿವಾಹ". ಗಾಯಕನೂ ಶ್ರೋತೃವೂ ಸಮಾನಹೃದಯರಾಗಿದ್ದ ಕಾಲವೊಂದಿತ್ತು. ಈಗ ಅದು ಮತ್ತೆ ಒದಗಿ ಬರಬೇಕೆಂಬುದು ಪೂಜ್ಯರ ಅಭಿಪ್ರಾಯ. ಅನಂತಕೃಷ್ಣ ಶರ್ಮರ ಲೇಖನಗಳನ್ನು ಕೂಲಂಕಷವಾಗಿ ಓದಿ ಅವುಗಳ ಸಾರವನ್ನು ತಮ್ಮ ವಿಮರ್ಶೆಯಲ್ಲಿ ಕೊಟ್ಟಿದ್ದಾರೆ. ಛಂದಸ್ಸೂ ವ್ಯಾಕರಣವೂ ಎಲ್ಲಿ ಸಮಾಪ್ತಿಯಾಗುತ್ತದೋ ಅಲ್ಲಿ ಸಂಗೀತ ಪ್ರಾರಂಭವಾಗುತ್ತದೆ ಎಂಬ ರವೀಂದ್ರನಾಥ ಠಾಕೂರರ ಮಾತನ್ನು ಉದಾಹರಿಸಿದ್ದಾರೆ. "ಸಾಹಿತ್ಯ, ಸಂಗೀತ ಎರಡೂ ಕ್ಷೇತ್ರಗಳಲ್ಲಿ ಲಬ್ಧ ಪ್ರತಿಷ್ಠರೂ ಕನ್ನಡ, ತೆಲುಗು, ಸಂಸ್ಕೃತ, ಪ್ರಾಕೃತಾದಿ ವಿವಿಧ ಭಾಷೆಗಳಲ್ಲಿ ಕೃತಪರಿಶ್ರಮರೂ ವಿಸ್ತಾರವಾದ ಕಲಾನುಭವ ಜೀವನಾನುಭವಗಳನ್ನು ಪಡೆದವರೂ ಆದ ರಾಳ್ಳಪಲ್ಲಿಯವರು ಈ ಗ್ರಂಥದ ಮೂಲಕ ನಾಡಿಗೆ ಮಾಡಿರುವ ಉಪಕಾರ ಅನನ್ಯಸಾಧಾರಣ" ಎಂದು ಅವರು ಹೇಳಿರುವುದು ಅತಿಶಯೋಕ್ತಿಯಲ್ಲ.

ರಾಳ್ಳಪಲ್ಲಿ ಅನಂತಕೃಷ್ಣ ಶರ್ಮ ಅವರ ಬಗೆಗೆ ಬಂದಿರುವ ಪುಸ್ತಕಗಳ ಮತ್ತು ಲೇಖನಗಳ ಪಟ್ಟಿಯನ್ನೂ ಅನುಬಂಧದಲ್ಲಿ ಕೊಟ್ಟಿದ್ದಾರೆ. ಇದಕ್ಕಾಗಿ ಕನ್ನಡಿಗರು ರಾಷ್ಟ್ರೋತ್ಥಾನ ಸಂಸ್ಥೆಗೆ ಕೃತಜ್ಞರಾಗಿರಬೇಕು. ಈ ಪುಸ್ತಕವನ್ನು ಸಕಲ ಸಂಗೀತ ವಿದ್ಯಾರ್ಥಿಗಳೂ ಓದಬೇಕೆಂದು ನನ್ನ ನಮ್ರ ಸಲಹೆ.

ಲೂಪಸ್ ವಿರುದ್ಧ ಮಣಿಪಾಲ್ ಆಸ್ಪತ್ರೆಯಲ್ಲಿ ಜಾಗೃತಿ ಕಾರ್ಯಕ್ರಮ



ಮೈಸೂರು, ಮೇ 22– ವಿಶ್ವ ಲೂಪಸ್ ದಿನದ ಅಂಗವಾಗಿ ಮಣಿಪಾಲ್ ಆಸ್ಪತ್ರೆಯು ಭಾನುವಾರ ಲೂಪಸ್ ವಿರುದ್ಧ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಮೈಸೂರಿನ ಮಣಿಪಾಲ್ ಆಸ್ಪತ್ರೆಯ ವೈದ್ಯಕೀಯ ಸೇವಾ ವಿಭಾಗದ ಮುಖ್ಯಸ್ಥ ಡಾ. ಉಪೇಂದ್ರ ಶೆಣೈ, ಮೈಸೂರಿನ ಮಣಿಪಾಲ್ ಆಸ್ಪತ್ರೆಯ ಸಂಧಿವಾತಶಾಸ್ತ್ರಜ್ಞ ವಿಭಾಗದ ತಪಾಸಕರಾದ ಡಾ. ಕೆ.ಎನ್. ಸಂಗೀತಾ ಮತ್ತು ಮೈಸೂರಿನ ಮಣಿಪಾಲ್ ಆಸ್ಪತ್ರೆಯ ಇಂಟರ್‌ವೆನ್ಷನಲ್ ಕಾರ್ಡಿಯೋಲಾಜಿ ವಿಭಾಗದ ಡಾ.ಡಿ. ಶಶಿರೇಖಾ ಮತ್ತು ಮೈಸೂರಿನ ಮಣಿಪಾಲ್ ಆಸ್ಪತ್ರೆಯ ರೋಗ ಶಾಸ್ತ್ರ ವಿಭಾಗದ ತಪಾಸಕರಾದ ಡಾ.ಅನಿತಾ ಬಿ.ಚಲಗೇರಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಈ ಲೂಪಸ್ ರೋಗ ಮತ್ತು ಈ ರೋಗನಿರ್ವಹಣೆಯನ್ನು ಜನರು ಹೇಗೆ ನಿರ್ವಹಿಸಬಹುದು ಮತ್ತು ಸಾಮಾನ್ಯ ಜೀವನವನ್ನು ನಡೆಸಬಹುದು ಎಂಬ ಬಗ್ಗೆ ತಮ್ಮ ಅಮೂಲ್ಯವಾದ ಸಲಹೆಗಳನ್ನು ನೀಡಿದರು.


ಮೈಸೂರಿನ ಮಣಿಪಾಲ್ ಆಸ್ಪತ್ರೆಯ ಸಂಧಿವಾತಶಾಸ್ತ್ರಜ್ಞ ವಿಭಾಗದ ತಪಾಸಕರಾದ ಡಾ. ಕೆಎನ್. ಸಂಗೀತಾ ಮಾತನಾಡಿ, ಈ ಲೂಪಸ್ ರೋಗದಿಂದ ಬಳಲುತ್ತಿರುವವರಿಗೆ ಅಥವಾ ಈ ರೀತಿಯ ರೋಗ ಚಿಹ್ನೆ ಇರುವವರಿಗೆ ಜಾಗೃತಿ ಹೆಚ್ಚಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು.

ಲೂಪಸ್ ಒಂದು ದೀರ್ಘಕಾಲದ ಸ್ವಯಂನಿರೋಧಕ ರೋಗವಾಗಿದ್ದು, ಇದು ಚರ್ಮ, ಮೂತ್ರಪಿಂಡಗಳು, ಹೃದಯ, ರಕ್ತಕಣ ಮತ್ತು ಶ್ವಾಸಕೋಶಗಳ ಮೇಲೆ ಪರಿಣಾಮ ಬೀರಬಹುದು. ದೇಹದ ಪ್ರತಿರೋಧಕ ವ್ಯವಸ್ಥೆಯು ಆರೋಗ್ಯಕರ ಅಂಗಾಂಶದ ಮೇಲೆ ಪರಿಣಾಮ ಬೀರಿ ಅದು ಉರಿಯೂತ ಮತ್ತು ಹಾನಿಗೊಳಿಸುತ್ತದೆ. ಲೂಪಸ್ ರೋಗವು ಸಂಪೂರ್ಣವಾಗಿ ವಾಸಿಯಾಗುವುದಿಲ್ಲ ಆದರೆ, ಅದನ್ನು ಔಷಧಿಯಿಂದ ನಿರ್ವಹಣೆ ಮಾಡಬಹುದು ಎಂದು ವಿವರಿಸಿದರು.

ಮೈಸೂರಿನ ಮಣಿಪಾಲ್ ಆಸ್ಪತ್ರೆಯ ವೈದ್ಯಕೀಯ ಸೇವಾ ವಿಭಾಗದ ಮುಖ್ಯಸ್ಥರಾದ ಡಾ. ಉಪೇಂದ್ರ ಶೆಣೈ ಮಾತನಾಡಿ, ಈ ರೀತಿಯ ಜಾಗೃತಿ ಸಭೆಗಳಿಂದ ರೋಗಿಗಳು ಗುರುತಿಸಲ್ಪಡುತ್ತಾರೆ ಅಲ್ಲದೇ, ತಮ್ಮ ರೋಗದ ಬಗ್ಗೆ ಮುಕ್ತವಾಗಿ ಹೇಳಿಕೊಳ್ಳುತ್ತಾರೆ. ಹಾಗೆಯೇ ಅದಕ್ಕೆ ಸೂಕ್ತ ಚಿಕಿತ್ಸೆ ಪಡೆಯುವ ಮೂಲಕ ಜಾಗೃತ ಸಮಾಜವನ್ನು ರೂಪಿಸಬಹುದು ಎಂದರು.

ಡಾ ಶಶಿರೇಖಾ ಅವರು ಲೂಪಸ್‌ನ ಕಾರ್ಡಿಯೋವಾಸ್ಕ್ಯುಲರ್ ಮೆನಿಫೆಸ್ಟೇಷನ್ (ಹೃದಯ ರಕ್ತನಾಳದ ಅಭಿವ್ಯಕ್ತಿ) ಬಗ್ಗೆ ಮಾತನಾಡಿದರು. ಹಾಗೆಯೇ ಡಾ. ಅನಿತಾ ಬಿ ಚಲಗೇರಿ ಅವರು, ಲೂಪಸ್ ರೋಗದ ಚಟುವಟಿಕೆ ಪತ್ತೆಹಚ್ಚಲು ಮತ್ತು ಮೇಲ್ವಿಚಾರಣೆ ಮಾಡಲು ಅದಕ್ಕೆ ಪೂರಕವಾದ ಚಿಕಿತ್ಸೆ ಮಾರ್ಪಡಿಸಲು ಪ್ರಯೋಗಾಲಯ ಪರೀಕ್ಷೆಗಳ ಮಹತ್ವದ ಬಗ್ಗೆ ತಿಳುವಳಿಕೆ ನೀಡಿದರು. ಈ ಸಂದರ್ಭವು ಜನರಿಗೆ ಲೂಪಸ್‌ನ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಮತ್ತು ಅದನ್ನು ಆರಂಭಿಕ ಹಂತದಲ್ಲಿ ಪತ್ತೆಹಚ್ಚಲು ಮತ್ತು ಈ ರೋಗ ನಿರ್ವಹಣೆ ಮಾಡಲು ಚಿಕಿತ್ಸೆ ಹೇಗೆ ಸಹಾಯಕವಾಗುತ್ತದೆ ಎಂಬ ಬಗ್ಗೆ ಮಾಹಿತಿ ನೀಡಿದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು, ಮೇ 22 – ಮೇ 24ರ ಬೆಳಗ್ಗೆ 10 ರಿಂದ ಸಂಜೆ 5:30 ಗಂಟೆಯವರೆಗೆ ನಿರ್ವಹಣಾ ಕಾಮಗಾರಿ ನಿಮಿತ್ತ ರಮ್ಮನಹಳ್ಳಿ, ಕಾಳಿ ಸಿದ್ದನಹುಂಡಿ, ಹಂಚ್ಯ, ಸಾತಗಳ್ಳಿ, ಗಳಿಗರ ಹುಂಡಿ, ನೆಹರು ನಗರ, ಸಾತಗಳ್ಳಿ ಗ್ರಾಮ, ಡಿ.ಟಿ.ಎಸ್.ರಾವ್ ನಗರ, ವಿಟಿಯೂ ಕಾಲೇಜು ಎದುರು, ಸನ್‌ಫ್ಯೂರ್ ಬಡಾವಣೆ, ಸಾತಗಳ್ಳಿ ಬಿ ಜೋನ್, ವಿಟಿಯೂ ಕಾಲೇಜು, ಭಾರತ್ ನಗರ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಉಚಿತ ಮಾನಸಿಕ ಕಾಯಿಲೆ ತಪಾಸಣೆ

ಮೈಸೂರು, ಮೇ 22– ವಿಶ್ವ ಸ್ಕಿಜೋಫ್ರೇನಿಯಾ ದಿನದ ಪ್ರಯುಕ್ತ ವಿವೇಕ ಫೌಂಡೇಶನ್ ವತಿಯಿಂದ ವಿವೇಕ ಕ್ಲಿನಿಕ್, ನ್ಯೂ ಕಾಳಿದಾಸ ರಸ್ತೆ, ವಿಜಯ ನಗರ 1ನೇ ಹಂತ ಇಲ್ಲಿ ಉಚಿತ ಮಾನಸಿಕ ಕಾಯಿಲೆ ತಪಾಸಣೆ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 63641–11004 ಸಂಪರ್ಕಿಸಲು ಕೋರಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಜೈಲಿನಿಂದ 24 ಜೀವಾವಧಿ ಶಿಕ್ಷೆ ಕೈದಿಗಳ ಬಿಡುಗಡೆ

ಮೈಸೂರು, ಮೇ 22(ಎಂಕೆ)– ಮೈಸೂರು ಕೇಂದ್ರ ಕಾರಾಗೃಹದಲ್ಲಿ ಸನ್ನಡತೆ ಆಧಾರದ ಮೇಲೆ ಅರ್ಹ 24 ಮಂದಿ ಜೀವಾವಧಿ ಶಿಕ್ಷಾ ಬಂಧಿಗಳನ್ನು ಅವಧಿಪೂರ್ವವಾಗಿ ಸೋಮವಾರ ಬಿಡುಗಡೆಗೊಳಿಸಲಾಯಿತು.

ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಬಿ.ಜಿ.ದಿನೇಶ್ ಅವರ ಸಮ್ಮುಖದಲ್ಲಿ ವಿವಿಧ ಪ್ರಕರಣಗಳಡಿ ಜೀವಾವಧಿ ಶಿಕ್ಷಾ ಬಂಧಿಗಳಾಗಿದ್ದ 23 ಮಂದಿ ಪುರುಷರು(ಒಬ್ಬರು ಬೆಂಗಳೂರಿನಲ್ಲಿ ಬಿಡುಗಡೆ) ಹಾಗೂ ಓರ್ವ ಮಹಿಳೆಯನ್ನು ಬಿಡುಗಡೆ ಮಾಡಲಾಯಿತು.

ಈ ವೇಳೆ ಬಿಡುಗಡೆ ಪ್ರಮಾಣ ಪತ್ರವನ್ನು ನೀಡಿ, ಅಪರಾಧ ಮುಕ್ತ ಸಮಾಜದ ರಾಯಭಾರಿಗಳಾಗಲಿ ಎಂದು ಶುಭ ಹಾರೈಸಲಾಯಿತು. ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಬಿ.ಜಿ.ದಿನೇಶ್, ವಿವಿಧ ಪ್ರಕರಣಗಳಡಿ ಜೀವಾವಧಿ ಶಿಕ್ಷಾ ಬಂಧಿಯಾಗಿದ್ದ 24 ಜನರನ್ನು ಸನ್ನಡತೆ ಆಧಾರದ ಮೇಲೆ ಬಿಡುಗಡೆ ಮಾಡಲಾಗಿದೆ. ಅವರೆಲ್ಲರೂ ಜೈಲಿನಲ್ಲಿ ಪಡೆದಂತಹ ವೃತ್ತಿ ಅನುಭವವನ್ನು ತಮ್ಮ ಮುಂದಿನ ಜೀವನ ರೂಪಿಸಿಕೊಳ್ಳಲು ಬಳಸಿಕೊಳ್ಳಲಿ. ಸ್ನೇಹಿತರು, ಸಂಬಂಧಿಕರೊಂದಿಗೆ ಸೇರಿ ಸಮಾಜದ ಮುಖ್ಯವಾಹಿನಿಗೆ ಬಂದು ಉತ್ತಮ ಜೀವನ ನಡೆಸಲು ಈ ಮೂಲಕ ಅವಕಾಶ ಮಾಡಿಕೊಟ್ಟಂತಾಗಿದೆ ಎಂದರು.

ಮೈಸೂರು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಕೆ.ಸಿ.ದಿವ್ಯಶ್ರೀ ಮಾತನಾಡಿ, ಸುಪ್ರೀಂಕೋರ್ಟ್ ನಿರ್ದೇಶನದಂತೆ ಮೈಸೂರು ಕೇಂದ್ರ ಕಾರಾಗೃಹದಲ್ಲಿ ಸನ್ನಡತೆ ಆಧಾರದ ಮೇಲೆ ಬಿಡುಗಡೆಗೆ ಅರ್ಹರಾಗಿದ್ದ ಸುಮಾರು 31 ಮಂದಿ ಬಂಧಿತರ ಕಡತವನ್ನು ಸ್ಥಾಯಿ ಸಲಹಾ ಮಂಡಳಿ ಮುಂದೆ ಮಂಡಿಸಿ, ನಂತರ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಕಳುಹಿಸಲಾಗಿತ್ತು. ಅವರಲ್ಲಿ ಓರ್ವ ಬಂಧಿಯ ಕಡತವನ್ನು ಮರು ಪರಿಶೀಲನೆಗೆ ವಾಪಸ್ ಕಳುಹಿಸಲಾಗಿದೆ. ನಾಲ್ಕು ಜನ ಬಂಧಿಗಳ ಕಡತವನ್ನು ಕೇಂದ್ರ ಸರ್ಕಾರದ ಅನುಮೋದನೆಗೆ ಕಳುಹಿಸಿಕೊಡಲಾಗಿದೆ ಹಾಗೂ ಒಬ್ಬ ಬಂಧಿತನ ಬಿಡುಗಡೆ ರಾಜ್ಯಪಾಲರ ಹಂತದಲ್ಲಿ ತಿರಸ್ಕೃತಗೊಂಡಿದ್ದು, ಉಳಿದ 24 ಮಂದಿ ಬಂಧಿತರನ್ನು ಅವಧಿಪೂರ್ವಕವಾಗಿ ಸನ್ನಡತೆ ಆಧಾರದ ಮೇಲೆ ಬಿಡುಗಡೆ ಮಾಡಲಾಗಿದೆ ಎಂದರು.

ಅದರಲ್ಲಿ ಸರ್ಕಾರದ ನಿಯಮಗಳಂತೆ ಮಾಫಿಯನ್ನು ಒಳಗೊಂಡು 14 ವರ್ಷ ಶಿಕ್ಷೆಯನ್ನು ಅನುಭವಿಸಿದ ಜೀವಾವಧಿ ಶಿಕ್ಷಾ ಬಂಧಿಗಳು ಹಾಗೂ ಮಾಫಿಯನ್ನು ಹೊರತುಪಡಿಸಿ 14 ವರ್ಷ ಮತ್ತು ಅದಕ್ಕಿಂತ ಹೆಚ್ಚು ವರ್ಷ ಜೀವಾವಧಿ ಶಿಕ್ಷೆಯನ್ನು ಅನುಭವಿಸಿದ ಶಿಕ್ಷಾ ಬಂಧಿಗಳನ್ನು ಬಿಡುಗಡೆ ಮಾಡಿದ್ದೇವೆ. ಇದೆಲ್ಲವೂ ಸರ್ಕಾರ ನೀಡಿದ ನಿರ್ದೇಶನಾನುಸಾರ ಅರ್ಹ ಜೀವಾವಧಿ ಶಿಕ್ಷಾ ಬಂಧಿಗಳನ್ನು ಶಿಫಾರಸ್ಸುಗೊಂಡ ಪ್ರಕರಣಗಳ ಅನುಸಾರವಾಗಿ ರಾಜ್ಯಪಾಲರ ಆದೇಶದ ಮೇರೆಗೆ ಬಿಡುಗಡೆ ಮಾಡಿದ್ದೇವೆ ಎಂದು ತಿಳಿಸಿದರು.



> “ಕಾರಾಗೃಹ ಜನರನ್ನು ಇರಿಸಿಕೊಳ್ಳುವ ಸ್ಥಳವಲ್ಲ. ಕಾನೂನುಬಾಹಿರ ಚಟುವಟಿಕೆಯಲ್ಲಿ ಭಾಗಿಯಾದವರಿಗೆ, ನ್ಯಾಯದಾನ ಪದ್ಧತಿಯನ್ವಯ ಶಿಕ್ಷೆ ಜಾರಿಗೊಳಿಸುವ ಜೊತೆಗೆ ಶಿಕ್ಷಣದ ಮೂಲಕ ಅವರ ಮನಃಪರಿವರ್ತನೆ ಮಾಡುವ ಗುರುತರವಾದ ಜವಾಬ್ದಾರಿ ಕಾರಾಗೃಹದ ಮೇಲಿರುತ್ತದೆ. ಇಲ್ಲಿಗೆ ಬಂದಾಗ ಕೈದಿ ಎಂದು ನೋಡದೆ ವ್ಯಕ್ತಿಯಾಗಿ ನೋಡುತ್ತೇವೆ. ಆತನಲ್ಲಿರುವ ತಪ್ಪುಗಳನ್ನು ತಿದ್ದುವ ಕೆಲಸ ಮಾಡುತ್ತೇವೆ. ಸನ್ನಡತೆ ಆಧಾರದ ಮೇಲೆ ಬಿಡುಗಡೆ ಮಾಡುವುದು ಜೀವನ ನಡೆಸಲು ನೀಡುವ 2ನೇ ಅವಕಾಶದಂತೆ. ಅದಕ್ಕೆ ಸಮಾಜವೂ ಅನುವು ಮಾಡಿಕೊಡಬೇಕು. ಹೊಸ ಮನುಷ್ಯರಾಗಿ ಸ್ವೀಕರಿಸಬೇಕು.
>
> – **ಕೆ.ಸಿ.ದಿವ್ಯಶ್ರೀ**, ಮುಖ್ಯ ಅಧೀಕ್ಷಕಿ, ಕೇಂದ್ರ ಕಾರಾಗೃಹ ಮೈಸೂರು

ಕೌಶಲ್ಯ ತರಬೇತಿ: ಕಾರಾಗೃಹದಲ್ಲಿ ಸರ್ಕಾರಿ ಅನುಮೋದಿತ ಕೈಗಾರಿಕಾ ಸಂಸ್ಥೆಗಳ ಸಹಕಾರದೊಂದಿಗೆ ವಿವಿಧ ಕೌಶಲ್ಯ ತರಬೇತಿಗಳನ್ನು ನೀಡಲಾಗುತ್ತದೆ. ಎಲೆಕ್ಟ್ರಿಷಿಯನ್, ಬ್ಯೂಟಿಷಿಯನ್, ಗಾರ್ಡನಿಂಗ್ ಸೇರಿದಂತೆ ವಿವಿಧ ವೃತ್ತಿ ತರಬೇತಿ ನೀಡಲಾಗಿದೆ. ಹಾಗೆಯೇ ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಎದುರಿಸುವುದು ಹೇಗೆ ಎಂಬುದನ್ನು ಕೌನ್ಸಿಲಿಂಗ್ ತರಬೇತಿ ಮೂಲಕ ತಿಳಿಸಿಕೊಡಲಾಗಿದೆ. ಹಲವು ಆಯಾಮಗಳ ಮೂಲಕ ಬಂಧಿಯನ್ನು ಬಿಡುಗಡೆಗೆ ಸಜ್ಜುಗೊಳಿಸಲಾಗುತ್ತದೆ. ಕಾರಾಗೃಹದಲ್ಲಿ ಕೌಶಲ್ಯ ತರಬೇತಿ ಪಡೆದವರು ಸ್ವಂತ ಉದ್ದಿಮೆ ಪ್ರಾರಂಭಿಸಬಹುದು ಅಥವಾ ಉದ್ದಿಮೆಗಳಲ್ಲಿ ಸೇರಿ ತಮ್ಮ ಜೀವನ ರೂಪಿಸಿಕೊಳ್ಳಬಹುದು. ಹತ್ತಾರು ವರ್ಷ ಕಾರಾಗೃಹದಲ್ಲಿ ಇದ್ದವರು, ಬಿಡುಗಡೆ ನಂತರ ಸಮಾಜಕ್ಕೆ ಹೊಂದಿಕೊಳ್ಳುವುದು, ಆದಾಯ ಗಳಿಸುವುದು ಕಷ್ಟವೆಂಬುದನ್ನು ಅರಿತು ಕೌಶಲ್ಯ ತರಬೇತಿ ನೀಡಲಾಗುತ್ತದೆ ಎಂದರು. ಜೈಲರ್‌ಗಳಾದ ಧರಣೀಶ್, ಅಮರ್, ಗೀತಾ ಮತ್ತಿತರರು ಉಪಸ್ಥಿತರಿದ್ದರು.

ಹೊಸ ಬದುಕಿನ ಆಶಾಭಾವನೆಗಳ ಅಭಿವ್ಯಕ್ತ...

ಜೈಲಿನಲ್ಲೇ ಟೈಲರಿಂಗ್ ಕಲಿತಿದ್ದೇನೆ, ನನಗೆ ಮೇಸ್ತ್ರೀ ಕೆಲಸ ಗೊತ್ತಿದೆ, ಏನಾದರೂ ಕೆಲಸ ಮಾಡಿ ಹೊಸ ಜೀವನ ಕಟ್ಟಿಕೊಳ್ಳುತ್ತೇನೆ...! ಎಂಬುದು ಮೈಸೂರು ಕೇಂದ್ರ ಕಾರಾಗೃಹದಿಂದ ಸನ್ನಡತೆ ಆಧಾರದ ಮೇಲೆ ಬಿಡುಗಡೆಯಾದವರ ಹೊಸ ಬದುಕಿನ ಆಶಾಭಾವನೆಗಳಿವು...

ಮಳವಳ್ಳಿಯಲ್ಲಿ ನಡೆದ ಕೊಲೆ ಪ್ರಕರಣವೊಂದರಲ್ಲಿ 14 ವರ್ಷ ಜೀವಿತಾವಧಿ ಶಿಕ್ಷೆ ಅನುಭವಿಸಿ ಜೈಲಿನಿಂದ ಹೊರಬಂದ ಮಂಡ್ಯ ಜಿಲ್ಲೆಯ ನೆಲಮಾಕನಹಳ್ಳಿಯ ಸಿದ್ದೇಗೌಡ, ಕಡೆಗೂ ಬಿಡುಗಡೆ ಮಾಡ್ಬಿಟ್ರು ಕಣಣ್ಣಾ.. ಮನೆಗೋಗಿ ಮಕ್ಳನ್ನ ಮಾತಾಡುಸ್ಬೇಕು... ಜಿಲೇಬಿ ತೆಗೆದುಕೊಂಡು ಹೋಗುತ್ತೇನೆ. ಸರ್ಕಾರದ ಬಿಡುಗಡೆಯ ಆದೇಶದ ಬಗ್ಗೆ ಅಧಿಕಾರಿಗಳು ತಿಳಿಸಿದಾಗ ತಾನು ಕೆಲಸ ಮಾಡುತ್ತಿದ್ದ ಸ್ಥಳದಿಂದ ಆತುರಾತುರವಾಗಿ ಬಂದು ಖುಷಿಪಟ್ಟನು. ಇತ್ತೀಚೆಗೆ ಹೆಂಡತಿ ಸತ್ತಾಗ ಮನೆ ಕಡೆ ಹೋಗಿದ್ದೆ. ಮುಂದೆ ಏನಾದ್ರು ಕೆಲಸ ಮಾಡಿಕೊಂಡು ಬದುಕುತ್ತೇನೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಟೈಲರಿಂಗ್ ಕಲಿತ್ತಿದ್ದೇನೆ: ಪುತ್ತೂರು ತಾಲೂಕಿನ ಕಡೇಶಿವಾಲಯದಲ್ಲಿ ಮೂರು ಜನರ ಕೊಲೆ ಪ್ರಕರಣದಲ್ಲಿ ಜೈಲು ಸೇರಿ 18 ವರ್ಷಗಳ ಬಳಿಕ ಬಿಡುಗಡೆಯಾದ ರಮೇಶ್, ಕೊಲೆಯಾದಾಗ ನಾನು ತೋಟದಲ್ಲಿ ಕೆಲಸ ಮಾಡುತ್ತಿದ್ದೆ. ನಾನೂ ಭಾಗಿಯಾಗಿದ್ದೇನೆಂದು ಬಂಧಿಸಿದ್ದರು. ಊರಿಗೆ ಹೋಗುವ ಖುಷಿಯಲ್ಲಿದ್ದೇನೆ. ಟೈಲರಿಂಗ್ ಕಲಿತಿದ್ದೇನೆ, ಮೇಸ್ತ್ರೀ ಕೆಲಸ ಗೊತ್ತಿದೆ ಅವನ್ನು ಮಾಡಿಕೊಂಡು ಜೀವನ ಸಾಗಿಸುತ್ತೇನೆ ಎಂದರು.

ತಪ್ಪಿನ ಬಗ್ಗೆ ಪಶ್ಚಾತ್ತಾಪವಿದೆ: ಜೈಲಿನಲ್ಲಿದ್ದಾಗಲೇ ಕ್ಯಾನ್ಸರ್ ಬಂತು, ಶಸ್ತ್ರಚಿಕಿತ್ಸೆ ಆಗಿದೆ ಹಣದ ವಿಚಾರವಾಗಿ ಮಹಿಳೆಯೊಬ್ಬರನ್ನು ಕೊಲೆ ಮಾಡಿದ್ದೆ. ತಪ್ಪಿನ ಬಗ್ಗೆ ಪಶ್ಚಾತ್ತಾಪವಿದೆ. ಬದುಕಿರುವಷ್ಟು ದಿನ ಎಲ್ಲರೊಂದಿಗೆ ಇರುತ್ತೇನೆ ಎಂದು ಉಡುಪಿಯ ಸುರೇಶ್ ಭಾವುಕರಾದರು.

ಸ್ವಯಂ ಉದ್ಯಮಿಯಾಗುತ್ತೇನೆ: 14 ವರ್ಷ ಕಾರಾಗೃಹದಲ್ಲಿದ್ದರೂ ಜೀವನೋತ್ಸಾಹ ಕಳೆದುಕೊಳ್ಳದೇ ವೃತ್ತಿ ಕೌಶಲ್ಯ ಕಲಿತು ಸ್ವಯಂ ಉದ್ಯಮಿಯಾಗಲು ಹೊರಟಿದ್ದೇನೆ ಎಂದು ಮೈಸೂರು ಜಿಲ್ಲೆ ನಂಜನಗೂಡಿನ ಕಳಲೆ ಸಿಂದುವಳ್ಳಿಯ ನಟರಾಜ್ ತಿಳಿಸಿದರು.

ಕಾರಾಗೃಹದಲ್ಲಿ ಕಲಿತ ಬೇಕರಿ ಉತ್ಪನ್ನಗಳ ತಯಾರಿಕೆ ತರಬೇತಿಯಿಂದಾಗಿ ಅದನ್ನೇ ವೃತ್ತಿಯಾಗಿಸಿಕೊಳ್ಳುತ್ತೇನೆ. ಇದಕ್ಕೆ ಕುಟುಂಬದವರು ಸಾಥ್ ನೀಡಲಿದ್ದು, ಸ್ವಂತ ಬೇಕರಿ ತೆರೆಯುತ್ತೇನೆ. ಕಾರಾಗೃಹದ ಬಳಿ ಇರುವ ಪರಿವರ್ತನಾ ಬೇಕರಿಯಲ್ಲಿ ಬೇಕರಿ ಉತ್ಪನ್ನಗಳ ಮಾರಾಟದೊಂದಿಗೆ ಟೀ ವ್ಯಾಪಾರವನ್ನು ನಡೆಸುತ್ತಿದ್ದೆ. ಬೇಕರಿಗೆ ಅಗತ್ಯವಾದ ಬ್ರೆಡ್, ಬನ್, ಪಫ್ಸ್ ಸೇರಿದಂತೆ ಹಲವು ಸಿಹಿ ಉತ್ಪನ್ನಗಳ ತಯಾರಿಕೆಯನ್ನು ಕಲಿತಿದ್ದೇನೆ. ಕಾರಾಗೃಹದಲ್ಲಿ ಇದ್ದಷ್ಟು ದಿನವೂ ಸಿಕ್ಕ ಕೆಲಸದ ಮೂಲಕ ಹಣ ಸಂಪಾದನೆ ಮಾಡಿದ್ದು, ಅದೇ ಹಣವನ್ನು ಬೇಕರಿ ಸ್ಥಾಪನೆಗೆ ಬಂಡವಾಳ ಮಾಡಿಕೊಳ್ಳುತ್ತೇನೆ ಎಂದರು.

ಜೈಲಿನಲ್ಲೇ ಲಕ್ಷ ಸಂಪಾದನೆ: ಮನೆಯನ್ನೇ ಪ್ರಪಂಚವಾಗಿಸಿಕೊಂಡು ಮಕ್ಕಳೊಂದಿಗೆ ಜೀವನ ನಡೆಸುತ್ತಿದ್ದ ಬೆಂಗಳೂರಿನ ನಾಗಮ್ಮ ಅವರು, ದಶಕದ ಬಳಿಕ ಮತ್ತೇ ಹೆತ್ತ ಮಕ್ಕಳನ್ನು ಭೇಟಿ ಮಾಡುತ್ತಿದ್ದು, ಜೀವನೋಪಾಯಕ್ಕಾಗಿ ಟೈಲರಿಂಗ್ ಅಂಗಡಿ ನಡೆಸಲು ಮುಂದಾಗಿದ್ದಾರೆ. ಜೈಲಿನಲ್ಲಿ ಟೈಲರಿಂಗ್ ತರಬೇತಿ ಪಡೆದು 1 ಲಕ್ಷ ರೂ.ವರೆಗೆ ಹಣ ಸಂಪಾದಿಸಿದ್ದೇನೆ ಎನ್ನುವ ನಾಗಮ್ಮ, ಮಕ್ಕಳೊಂದಿಗೆ ಹೊಸ ಮನೆ ಮಾಡಿಕೊಂಡು ಟೈಲರಿಂಗ್ ಅಂಗಡಿ ತೆರೆಯಲಿದ್ದೇನೆ ಎಂದರು.

ಸನ್ನಡತೆ ಆಧಾರದ ಮೇಲೆ ಬಿಡುಗಡೆಯಾದವರು...

ರಾಜಸ್ಥಾನದ ಶಿವನ್ ಜಿಲ್ಲೆ, ಮೆಲೆ ಗ್ರಾಮದ ಸಾವಲ್‌ಸಿಂಗ್(ಬೆಂಗಳೂರಿನಲ್ಲಿ ಬಿಡುಗಡೆ), ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲೂಕಿನ ವೊಲತಡ್ಕದ ರಮೇಶ್, ಉಡುಪಿ ಜಿಲ್ಲೆ ಕಾರ್ಕಳ ತಾಲೂಕಿನ ಮಹಾಲಕ್ಷ್ಮಿ ನಗರ ರೇಂಜಾಳ ಗ್ರಾಮದ ಸುರೇಶ ಹರಿಜನ, ಹಾಸನ ಜಿಲ್ಲೆ ಚನ್ನರಾಯಪಟ್ಟಣದ ಗಾಯತ್ರಿ ಬಡಾವಣೆಯ ಪ್ರಶಾಂತ, ಮೈಸೂರು ಎನ್.ಆರ್ ಮೊಹಲ್ಲಾ ಕೆಸರೆಯ ನಾಗರಾಜು, ಕೆಸರೆ ಕುರಿಮಂಡಿ ಬ್ಲಾಕ್‌ನ ಹೆಚ್.ಕೆ.ಪುಟ್ಟ, ಚಾಮರಾಜನಗರ ಜಿಲ್ಲೆ ಯಳಂದೂರು ತಾಲೂಕಿನ ಅಗರಾ ಗ್ರಾಮದ ರಾಮದಾಸ ನಾಯ್ಕ, ಮೈಸೂರು ಜಿಲ್ಲೆ ನಂಜನಗೂಡು ತಾಲೂಕಿನ ಕಳಲೆ ಸಿಂದುವಳ್ಳಿಯ ಎಸ್.ಎಂ.ಸತೀಶ್‌ಗೌಡ, ಜನಾರ್ದನ ಅಲಿಯಾಸ್ ಜಾನು, ಎಸ್.ನಟರಾಜ ಹಾಗೂ ಶ್ರೀನಿವಾಸ, ಬೆಂಗಳೂರು ನಾರಾಯಣ ಲೇಔಟ್‌ನ ಮಂಜುನಾಥ ಅಲಿಯಾಸ್ ಸುರೇಶ ಚಂದ್ರ ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕಿನ ತೆಂಕಲಹುಂಡಿ ಗ್ರಾಮದ ಕುಳ್ಳೆಗೌಡ, ಕೊಡಗು ಜಿಲ್ಲೆ ಕುಶಾಲನಗರ ಹೋಬಳಿಯ ಶಿರಂಗಾಲ ಗ್ರಾಮದ ತೆಲುಗು ಬಣಜಿಗರ ತಮ್ಮಯ್ಯ ಹಾಗೂ ತೆಲುಗು ಬಣಜಿಗರ ಗುರುಮೂರ್ತಿ, ಬಾಗಲಕೋಟೆ ಜಿಲ್ಲೆ ಕೆಂಗೇರಿಮಡ್ಡಿಯ ರಿಯಾಜ್ ಅಹಮದ್, ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ನೆಲಮಾಕನಹಳ್ಳಿ ಸಿದ್ದೇಗೌಡ, ಹಾಸನ ಜಿಲ್ಲೆ ಆಲೂರು ತಾಲೂಕಿನ ಮುತ್ತಿಗೆ ಗ್ರಾಮದ ಎಂ.ಆರ್.ಸೋಮಶೇಖರ, ಮಂಡ್ಯ ಜಿಲ್ಲೆ ಕೆಆರ್ ಪೇಟೆ ತಾಲೂಕಿನ ಹರಿರಾಯನಹಳ್ಳಿಯ ಎ.ಬಿ.ವಾಸು, ಚಾಮರಾಜನಗರ ತಾಲೂಕಿನ ಜ್ಯೋತಿಗೌಡನಪುರ ಗ್ರಾಮದ ಸುಂದ್ರಪ್ಪ, ಕೊಳ್ಳೆಗಾಲ ತಾಲೂಕಿನ ಬಂಡಳ್ಳಿ ಗ್ರಾಮದ ತಿಮ್ಮ, ನಂಜನಗೂಡಿನ ಹಗಿನವಾಳು ಗ್ರಾಮದ ನಿಂಗಪ್ಪ, ಹಾಸನ ಜಿಲ್ಲೆ ಅರಕಲಗೂಡು ತಾಲೂಕಿನ ಬಸವನಹಳ್ಳಿಯ ರಾಮೇಗೌಡ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ ಬೆಂಗಳೂರು ಉತ್ತರ ತಾಲೂಕಿನ ಕಿತ್ತನಹಳ್ಳಿ ಗ್ರಾಮದ ನಾಗಮ್ಮ ಮೈಸೂರು ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾದವರು.



ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ರಾಜೇಂದ್ರ ಭವನದಲ್ಲಿ ಆಯೋಜಿಸಿದ್ದ ಗೆಲುವಿನ ರೂವಾರಿಗಳಿಗೆ ನನ್ನ ನಮನಗಳು ಕೃತಜ್ಞತಾ ಸಮಾವೇಶದಲ್ಲಿ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿಟಿ. ಪ್ರಕಾಶ್ ನೇತೃತ್ವದಲ್ಲಿ ಕೃಷ್ಣರಾಜ ಕ್ಷೇತ್ರದ ನೂತನ ಶಾಸಕ ಟಿಎಸ್. ಶ್ರೀವತ್ಸ ಅವರನ್ನು ಅಭಿನಂದಿಸಲಾಯಿತು. ಇದೇ ವೇಳೆ ವೆಂಗೀಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಬ್ರಾಹ್ಮಣ ಮಂಡಳಿ ಸದಸ್ಯ ಎಂ.ಆರ್ ಬಾಲಕೃಷ್ಣ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷ ನಂ.ಶ್ರೀಕಂಠ ಕುಮಾರ್, ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಅಗಸ್ತ್ಯ ಕೋ– ಆಪರೇಟಿವ್ ಸೊಸೈಟಿ ಅಧ್ಯಕ್ಷರಾದ ಪಾರ್ಥಸಾರಥಿ, ಯುವ ಮುಖಂಡ ಅಜಯ್ ಶಾಸ್ತ್ರಿ, ಸಪ್ತರ್ಷಿ ಬ್ಯಾಂಕ್ ನಿರ್ದೇಶಕ ರಾಜಕುಮಾರ್, ಗ್ರಾಹಕ ಪಂಚಾಯತ್ ಅಧ್ಯಕ್ಷರಾದ ಡಾ.ಜಿವಿ ರವಿಶಂಕರ್, ರಾಜಗೋಪಾಲ್, ಪುಟ್ಟಸ್ವಾಮಿ, ಚಕ್ರಪಾಣಿ, ಸುಚೀಂದ್ರ, ವಿಶ್ವೇಶ್ವರ ಭಟ್, ಸುದರ್ಶನ್ ಇದ್ದರು.

ರೈಲ್ವೆ ಸಿಬ್ಬಂದಿಯವರಿಗೆ ಮೊದಲ ಪ್ರತಿಸ್ಪಂದನೆ ತರಬೇತಿ ಕಾರ್ಯಕ್ರಮ



ಮೈಸೂರು, ಮೇ 22– ಪ್ರಾದೇಶಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಕೇಂದ್ರ, ಕಲ್ಯಾಣ ತರಬೇತಿ ಕೇಂದ್ರ, ಮೇಟಗಳ್ಳಿ ಮೈಸೂರು ವತಿಯಿಂದ ಒಂದು ದಿನದ ಉಚಿತ ಕೌಶಲ್ಯಾಧಾರಿತ ಅಲ್ಪಾವಧಿ ಮೊದಲ ಪ್ರತಿಸ್ಪಂದಕರ (FRT-First Responder) ತರಬೇತಿ ಕಾರ್ಯಕ್ರಮವನ್ನು ಮೈಸೂರಿನ ನೈಋತ್ಯ ರೈಲ್ವೆ ಕಾರ್ಯಾಗಾರದ ಸೂಪರ್‌ವೈಸರ್ ಹಾಗೂ ಸಿಬ್ಬಂದಿಯವರಿಗೆ ಹಮ್ಮಿಕೊಳ್ಳಲಾಗಿತ್ತು.


ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ರೈಲ್ವೆ ಕಾರ್ಯಾಗಾರದ ಮೂಲ ತರಬೇತಿ ಕೇಂದ್ರದ ಸಂಯೋಜಕ ಆರ್.ಬಸವಲಿಂಗಪ್ಪ ಅವರು ಸಸಿಗೆ ನೀರೆರೆಯುವುದರ ಮೂಲಕ ಉದ್ಘಾಟಿಸಿದರು. ಪ್ರಾದೇಶಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಡಾ.ಎಸ್.ಮಹೇಶ್ವರಿ ಅಧ್ಯಕ್ಷತೆ ವಹಿಸಿದ್ದರು. ತರಬೇತುದಾರರಾಗಿ ತಜ್ಞವೈದ್ಯರುಗಳಾದ ಡಾ.ಮಂಜುನಾಥ್, ಡಾ.ಸುರೇಶ್, ಕೌಶಲ್ಯ ಪ್ರಯೋಗಾಲಯ ತರಬೇತುದಾರರಾದ ಶಿವಶಂಕರ್.ಎನ್.ಆರ್, ಅರುಣ್ ಕುಮಾರ್.ಎಸ್.ಆರ್ ಹಾಗೂ ಶರತ್.ಎಸ್ ಭಾಗವಹಿಸಿದ್ದರು.

ಅಧ್ಯಕ್ಷತೆ ವಹಿಸಿದ್ದ ಡಾ.ಎಸ್.ಮಹೇಶ್ವರಿ ಮಾತನಾಡಿ, ತುರ್ತು ಸಂದರ್ಭಗಳಲ್ಲಿ ಗಾಯಾಳುಗಳ ಜೀವ ಉಳಿಸುವುದು ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿ, ಅವಘಡಗಳ ಸಂದರ್ಭದಲ್ಲಿ ವ್ಯಕ್ತಿಗಳಿಗೆ ಸೂಕ್ತವಾಗಿ ಸ್ಪಂದಿಸುವುದರ ಬಗೆಗಿನ ಈ ತರಬೇತಿ ಕಾರ್ಯಕ್ರಮ ಬಹಳ ಪ್ರಯೋಜನಕಾರಿ. ಅಪಘಾತಗಳಷ್ಟೇ ಅಲ್ಲದೇ ವೈದ್ಯಕೀಯ ತುರ್ತುಸ್ಥಿತಿಗಳಾದ ಅಪಸ್ಮಾರ, ಹೃದಯಾಘಾತ, ಲಕ್ವ, ಹಾವು ಕಡಿತ, ವಿಷ ಸೇವನೆ, ಸುಟ್ಟ ಗಾಯಗಳು ಇತರೇ ಸಂದರ್ಭಗಳಲ್ಲಿ ಸೂಕ್ತವಾಗಿ ಪ್ರತಿಸ್ಪಂದಿಸುವುದರ ಮೂಲಕ ಗಾಯಾಳುಗಳೇ ಪ್ರಥಮ ಚಿಕಿತ್ಸೆ ನೀಡಿ, ಆಸ್ಪತ್ರೆಗೆ ತಲುಪಿಸಿದರೆ ಅವರ ಜೀವ ಉಳಿಸುವುದಲ್ಲದೇ, ಆಗಬಹುದಾದ ಅಂಗವೈಕಲ್ಯತೆಯನ್ನು ತಡೆಗಟ್ಟಬಹುದು ಎಂದು ಕರೆ ನೀಡಿದರು.

ರೈಲ್ವೇ ಕಾರ್ಯಾಗಾರದ ತರಬೇತಿ ಸಂಯೋಜಕ ಬಸವಲಿಂಗಪ್ಪ ಮಾತನಾಡಿ, ಮೊದಲ ಪ್ರತಿಸ್ಪಂದನೆ ಎನ್ನುವ ಆಕರ್ಷಣೆಯ ಪದದ ಅರ್ಥವನ್ನು ವಿಶ್ಲೇಷಿಸಿದರು. ಆಧುನಿಕ ಸಮಾಜದಲ್ಲಿ ತಮ್ಮದೇ ಆದ ಆರಾಮದಾಯಕ ಹಾಗೂ ಅನುಕೂಲಕರ ವಾತಾವರಣ ಜೀವನಶೈಲಿಯಲ್ಲಿ ಮನುಷ್ಯ ಬದುಕುತ್ತಿದ್ದಾನೆ. ಅರಿವಿನ ಹಾಗೂ ಆಸಕ್ತಿಯ ಕೊರತೆಯಿಂದ, ವ್ಯಕ್ತಿಯು ಕಷ್ಟದಲ್ಲಿರುವ ಮತ್ತೊಬ್ಬ ವ್ಯಕ್ತಿಗೆ ಸಹಾಯ ಹಸ್ತ ಚಾಚುತ್ತಿಲ್ಲ. ಆದ್ದರಿಂದ ಈ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ರೈಲ್ವೆ ಸಿಬ್ಬಂದಿಯವರಿಗೆ ನೀಡುವುದರ ಮೂಲಕ ಸಿಬ್ಬಂದಿಗಳಲ್ಲಿ ಜ್ಞಾನ ಹಾಗೂ ಕೌಶಲ್ಯಗಳನ್ನು ನೀಡಿ ತುರ್ತು ಸಂದರ್ಭಗಳಲ್ಲಿ ಧೈರ್ಯದಿಂದ ಭಾಗವಹಿಸಿ, ಗಾಯಾಳುಗಳ ಜೀವ ರಕ್ಷಣೆ ಮಾಡುವ ಕೆಲಸ ಆಗಬೇಕಿದೆ ಎಂದರು. ತುರ್ತು ಸಂದರ್ಭಗಳಲ್ಲಿ ನಾವು ಪ್ರತಿಸ್ಪಂದನೆ ಮಾಡುವ ಸಾಮರ್ಥ್ಯವನ್ನು ಪಡೆದು, ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ಸಮಾಜ ಸೇವೆ ಮಾಡಬೇಕೆಂದು ಕರೆ ನೀಡಿದರು.

ಜೂನ್‌ನಲ್ಲಿ ಮುಕ್ತ ವಿವಿ 18ನೇ ವಾರ್ಷಿಕ ಘಟಿಕೋತ್ಸವ

- ಪದವಿ ಪ್ರಮಾಣ ಪತ್ರ ಪಡೆಯಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸೂಚನೆ
- ಅಂಕಪಟ್ಟಿ ತಿದ್ದುಪಡಿಗೆ ಜೂ.5ರವರೆಗೆ ಅವಕಾಶ



ಮೈಸೂರು, ಮೇ 22(ಪಿಎಂ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 18ನೇ ವಾರ್ಷಿಕ ಘಟಿಕೋತ್ಸವ ಜೂನ್ ತಿಂಗಳಲ್ಲಿ ನಡೆಯಲಿದ್ದು, ಈ ಸಂಬಂಧ ವಿಶ್ವವಿದ್ಯಾನಿಲಯದಿಂದ ಅಧಿಸೂಚನೆ ಹೊರಡಿಸಲಾಗಿದೆ. ಪದವಿ ಪ್ರಮಾಣ ಪತ್ರ ಪಡೆಯಲು ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳಿಗೆ ಸೂಚನೆ ಸಹ ನೀಡಲಾಗಿದೆ.

ಘಟಿಕೋತ್ಸವ ನಡೆಯುವ ದಿನಾಂಕ, ಸಮಯ ಮತ್ತು ಸ್ಥಳವನ್ನು ವಿವಿಯ ಅಧಿಕೃತ ಜಾಲತಾಣ ಮತ್ತು ಇತರೆ ಮಾಧ್ಯಮಗಳಲ್ಲಿ ಶೀಘ್ರದಲ್ಲಿ ಪ್ರಕಟಿಸಲಾಗುವುದು. ಪದಕ ಮತ್ತು ನಗದು ಬಹುಮಾನಕ್ಕೆ ಅರ್ಹರಾದ ಸ್ನಾತಕ, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು, ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಸ್ನಾತಕೋತ್ತರ ಮತ್ತು ಪಿಹೆಚ್.ಡಿ ಪದವೀಧರರು ಮಾತ್ರವೇ ಘಟಿಕೋತ್ಸವದಲ್ಲಿ ಭಾಗವಹಿಸಬಹುದು ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ನಿಗದಿತ ನಮೂನೆಯ ಅರ್ಜಿ ಭರ್ತಿ ಮಾಡಿ ಸಲ್ಲಿಸುವ ಮೂಲಕವೇ ಪದವಿ ಪ್ರಮಾಣ ಪತ್ರ (ಘಟಿಕೋತ್ಸವ ಪ್ರಮಾಣ ಪತ್ರ) ಪಡೆಯಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ವಿವಿಯ ಅಧಿಕೃತ ಜಾಲತಾಣಕ್ಕೆ (www.ksoumysuru.ac.in) ಭೇಟಿ ನೀಡಬಹುದು. ವಿಶ್ವವಿದ್ಯಾನಿಲಯವು ಸೆಪ್ಟೆಂಬರ್/ಅಕ್ಟೋಬರ್–2022ರವರೆಗೆ ನಡೆಸಿದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಪದವಿ ಪ್ರಮಾಣ ಪತ್ರ ಪಡೆಯಲು ಅರ್ಹರು. ಘಟಿಕೋತ್ಸವದ ನಂತರ ತ್ವರಿತ ಅಂಚೆ ಮೂಲಕ ಪದವಿ ಪ್ರಮಾಣ ಪತ್ರಗಳನ್ನು (ಘಟಿಕೋತ್ಸವದಲ್ಲಿ ಭಾಗವಹಿಸಲು ಅವಕಾಶವಿರುವ ಅಭ್ಯರ್ಥಿಗಳ ಹೊರತಾಗಿ ಹಾಗೂ ಅವಕಾಶವಿದ್ದೂ ಭಾಗವಹಿಸಲಾಗದ ಅಭ್ಯರ್ಥಿಗಳಿಗೆ) ಕಳುಹಿಸಿಕೊಡಲಾಗುವುದು.

ಪದವಿ ಪ್ರಮಾಣ ಪತ್ರ ಪಡೆಯಲು ಪದಕ, ನಗದು ಬಹುಮಾನ ಪುರಸ್ಕೃತರು, ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಪಿಹೆಚ್‌ಡಿ ವಿದ್ಯಾರ್ಥಿಗಳಿಗೆ 1,200 ರೂ., ಎಲ್ಲಾ ಸ್ನಾತಕ, ಸ್ನಾತಕೋತ್ತರ ಮತ್ತು ಪಿಹೆಚ್.ಡಿ ವಿದ್ಯಾರ್ಥಿಗಳು 1,500 ರೂ. ಶುಲ್ಕ ನಿಗದಿ ಮಾಡಲಾಗಿದೆ. ಜೊತೆಗೆ ಎಲ್ಲಾ ಅಭ್ಯರ್ಥಿಗಳೂ ಸದರಿ ಮೊತ್ತದೊಂದಿಗೆ ಹಿರಿಯ ವಿದ್ಯಾರ್ಥಿ ಸಂಘದ ಸದಸ್ಯತ್ವ ಶುಲ್ಕವಾಗಿ 500 ರೂ. ಕಡ್ಡಾಯವಾಗಿ ಪಾವತಿ ಮಾಡಬೇಕು. ದಂಡವಿಲ್ಲದೆ ಶುಲ್ಕ ಪಾವತಿಗೆ ಜೂ.9ರವರೆಗೆ ಹಾಗೂ ದಂಡದೊಂದಿಗೆ ಶುಲ್ಕ ಪಾವತಿಗೆ ಜೂ.15ರವರೆಗೆ ಅವಕಾಶವಿದ್ದು, ಘಟಿಕೋತ್ಸವದಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಮಾತ್ರವೇ ಈ ಕಡೆ ದಿನಾಂಕ ಅನ್ವಯಿಸಲಿದೆ.

ಯಾವುದೇ ವಿದ್ಯಾರ್ಥಿಯ ಅಂತಿಮ ವರ್ಷದ ಅಂಕಪಟ್ಟಿಯಲ್ಲಿ ದರ್ಜೆ ಘೋಷಣೆಯಾಗದಿದ್ದಲ್ಲಿ ಅಥವಾ ಇನ್ನಾವುದೇ ತಿದ್ದುಪಡಿಗಳಿದ್ದಲ್ಲಿ ಮೂಲ ಅಂಕಪಟ್ಟಿಗಳನ್ನು 'ಕುಲಸಚಿವರು, (ಪರೀಕ್ಷಾಂಗ) ಕರಾಮುವಿ, ಮೈಸೂರು' ಅವರ ವಿಳಾಸಕ್ಕೆ ಜೂ.5ರೊಳಗೆ ಸಲ್ಲಿಸಿ ಸರಿಪಡಿಸಿಕೊಳ್ಳಬೇಕು. ತಪ್ಪಿದ್ದಲ್ಲಿ ಪದವಿ ಪ್ರಮಾಣ ಪತ್ರ ಪಡೆಯಲು ಅರ್ಹರಾಗುವುದಿಲ್ಲ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಮೇಲ್ಕಾಣಿಸಿರುವ ವಿವಿ ಜಾಲತಾಣಕ್ಕೆ ಭೇಟಿ ನೀಡಬಹುದು.

ಮಹಾಮಳೆಗೆ ಬೆಂಗಳೂರಿನಲ್ಲಿ ಮತ್ತೊಂದು ಬಲಿ

ರಾಜಕಾಲುವೆಯಲ್ಲಿ ಕೊಚ್ಚಿ ಹೋಗಿ ವ್ಯಕ್ತಿ ಸಾವು

ಬೆಂಗಳೂರು, ಮೇ 22–ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಭಾನುವಾರ ಮಧ್ಯಾಹ್ನ ಸುರಿದ ಬಿರುಗಾಳಿ ಸಹಿತ ಧಾರಾಕಾರ ಮಳೆಗೆ ಎರಡು ಅಮಾಯಕ ಜೀವಗಳು ಬಲಿಯಾಗಿವೆ. ಕಾರಿನಲ್ಲಿ ಒಬ್ಬರು ಮೃತಪಟ್ಟರೆ ಮತ್ತೊಬ್ಬರು ರಾಜಕಾಲುವೆಯಲ್ಲಿ ಕೊಚ್ಚಿಹೋಗಿದ್ದು, ಶವವಾಗಿ ಪತ್ತೆಯಾದ ದಾರುಣ ಘಟನೆ ನಡೆದಿದೆ.

ಯುವಕನೋರ್ವ ರಾಜಕಾಲುವೆಯಲ್ಲಿ ಹುಚ್ಚಾಟ ಆಡಲು ಹೋಗಿ ಸಾವನ್ನಪ್ಪಿದ ಘಟನೆ ಬೆಳಕಿಗೆ ಬಂದಿದೆ. 31 ವರ್ಷದ ಲೋಕೇಶ್ ಎಂಬಾತ ನಿನ್ನೆ ಕೆಪಿ ಅಗ್ರಹಾರದ ರಾಜಕಾಲುವೆಯಲ್ಲಿ ಹುಚ್ಚಾಟ ಮೆರೆಯಲು ಹೋಗಿದ್ದ. ಕುಡಿದ ಅಮಲಿನಲ್ಲಿ ಈ ರೀತಿ ಮಾಡಲು ಹೋಗಿದ್ದ ಎನ್ನಲಾಗಿದೆ. ಜೋರು ಮಳೆ ಬರುತ್ತಿದ್ದ ವೇಳೆ ಲೋಕೇಶ್ ರಾಜಕಾಲುವೆಗೆ ಇಳಿದಿದ್ದಾನೆ. ಮಳೆ ಹಿನ್ನೆಲೆ ನೀರಿನ ಆಳ ಎಷ್ಟಿದೆ ಅಂತ ನೋಡಲು ಹೋಗಿದ್ದಾನೆ ಈ ವೇಳೆ ಸ್ಥಳೀಯರು ಇಳೀಬೇಡ ಎಂದರೂ ಅವರ ಮಾತಿಗೆ ಕ್ಯಾರೆ ಅನ್ನದೆ ನೀರಿಗೆ ಇಳಿಯಲು ಮುಂದಾಗಿದ್ದಾನೆ. ಈ ವೇಳೆ ನೀರಿನಲ್ಲಿ ಕೊಚ್ಚಿ ಹೋಗಿದ್ದಾನೆ. ಈ ವೇಳೆ ಆತ ಪಾನಮತ್ತನಾಗಿದ್ದ ಎಂದು ಪೊಲೀಸರು ಶಂಕಿಸಿದ್ದಾರೆ.

ಲೋಕೇಶ್‌ನ ಮೃತದೇಹ ಬ್ಯಾಟರಾಯನಪುರದ ರಾಜಕಾಲುವೆ ಬಳಿ ಪತ್ತೆಯಾಗಿದೆ. ಮರಣೋತ್ತರ ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಮೃತದೇಹ ರವಾನಿಸಲಾಗಿದೆ. ಕೆ.ಪಿ.ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅವೈಜ್ಞಾನಿಕ ರಾಜಕಾಲುವೆ ಕಾಮಗಾರಿಯಿಂದ ಈ ದುರ್ಘಟನೆ ಸಂಭವಿಸಿದೆ ಎನ್ನಲಾಗಿದೆ.

ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಲಾಗುವುದು ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಸಂಭವಿಸಿದ ಎರಡು ಸಾವುಗಳ ಬಗ್ಗೆ ವಿಷಾದ ವ್ಯಕ್ತಪಡಿಸಿದ ಗಿರಿನಾಥ್, ಗಾಳಿಯ ರಭಸಕ್ಕೆ ಮರದ ಕೊಂಬೆಗಳು ಮತ್ತು ಎಲೆಗಳು ಉರುಳಿಬಿದ್ದು ಚರಂಡಿ ಮುಚ್ಚಿಹೋಗಿದೆ. ಕೇವಲ ಒಂದು ಗಂಟೆಯ ಅವಧಿಯಲ್ಲಿ ಸುಮಾರು 30 ಮಿ.ಮೀ.ನಷ್ಟು ಭಾರೀ ಮಳೆಯಿಂದಾಗಿ ಪ್ರವಾಹ ಉಂಟಾಗಿದೆ ಎಂದು ಗಿರಿನಾಥ್ ಹೇಳಿದರು. 18ನೇ ಅಂಡರ್‌ಪಾಸ್ ಕುರಿತು ಆಡಿಟ್ ವರದಿ ಸಲ್ಲಿಸುವಂತೆ ಮುಖ್ಯ ಇಂಜಿನಿಯರ್‌ಗೆ ತಿಳಿಸಲಾಗಿದ್ದು, ಇಂತಹ ಘಟನೆಗಳು ಮರುಕಳಿಸದಂತೆ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಹವಾಮಾನ ಇಲಾಖೆಯ ಅಂಕಿ–ಅಂಶಗಳ ಪ್ರಕಾರ, ನಗರದಲ್ಲಿ ಭಾನುವಾರ ಸಂಜೆ 5.30ರವರೆಗೆ 30 ಮಿ.ಮೀ. ಮಳೆ ದಾಖಲಾಗಿದೆ.

ರಂಗಾಯಣ ವಿಚಾರದಲ್ಲಿ ಸರ್ಕಾರ ಮೂಗು ತೂರಿಸಬಾರದು

ಹಿರಿಯ ರಂಗಕರ್ಮಿ ವೆಂಕಟರಾಜು

ಮೈಸೂರು, ಮೇ 22(ಸಿಎನ್)– ಸುಮಾರು 3 ವರ್ಷಗಳಿಂದ ರಂಗಾಯಣ ಹಲವು ರೀತಿಯಲ್ಲಿ ವಿವಾದಕ್ಕೆ ಕಾರಣವಾಗಿ ರಂಪಾರಾಮವಾಗಿ ಮಾರ್ಪಟ್ಟಿತ್ತು. ಈಗ ಪರಿಸ್ಥಿತಿ ಬೇರೆಯೇ ಇದೆ. ಎಲ್ಲವೂ ಒಳ್ಳೆಯದಾಗುವ ಭರವಸೆ ಇದೆ. ಯಾವುದೇ ಸರ್ಕಾರ ಬರಲಿ ಹೋಗಲಿ, ರಂಗಾಯಣದ ವಿಷಯದಲ್ಲಿ ಯಾವುದೇ ಸರ್ಕಾರಗಳು ಮೂಗು ತೂರಿಸಬಾರದು. ಕನ್ನಡ ಸಂಸ್ಕೃತಿ ಇಲಾಖೆ ಮಂತ್ರಿ ಕೈಕೆಳಗೆ ರಂಗಾಯಣ ಸಿಲುಕಿ ನರಳಬಾರದು. ಆದ್ದರಿಂದ ರಂಗಾಯಣ ಸಂಪೂರ್ಣ ಅಧಿಕಾರವನ್ನು ರಂಗಾಯಣದಲ್ಲಿ ಸೇವೆ ಸಲ್ಲಿಸಿದಂತ ಹಿರಿಯ ಕಲಾವಿದರಿಗೆ ನೀಡಿದರೆ ಮುಂದಿನ ದಿನಗಳಲ್ಲಿ ರಂಗಾಯಣ ಮತ್ತಷ್ಟು ಉಚ್ಚ ಸ್ಥಾನದಲ್ಲಿ ನಿಲ್ಲಲಿದೆ. ಜೊತೆಗೆ ಕಲಾವಿದರ ಸಮಸ್ಯೆಗಳಿಗೆ ಸ್ಪಂದಿಸಿ, ಅವರ ಕಷ್ಟ–ಕಾರ್ಪಣ್ಯಗಳ ಬಗ್ಗೆ ಗಮನಹರಿಸುವಂತೆ ಸರ್ಕಾರಕ್ಕೆ ಮನ ಮುಟ್ಟುವಂತೆ ಹಕ್ಕೊತ್ತಾಯ ಮಂಡಿಸಬೇಕು ಎಂದು ಹಿರಿಯ ರಂಗಕರ್ಮಿ ವೆಂಕಟರಾಜು ಅಭಿಪ್ರಾಯಪಟ್ಟರು.

ಕಲಾಮಂದಿರದ ಕಿರು ರಂಗಮಂದಿರದಲ್ಲಿ ಭಾರತೀಯ ರಂಗಶಿಕ್ಷಣ ಸಂಸ್ಥೆಯಿಂದ ಸೋಮವಾರ ಆಯೋಜಿಸಲಾಗಿದ್ದ 'ರಂಗಾಯಣ ಏಕೆ, ಏನು, ಎತ್ತ? ಎಂಬ ವಿಚಾರ ಸಂಕಿರಣ ಸಂವಾದದಲ್ಲಿ ಅವರು ಮಾತನಾಡಿದರು.





30 ವರ್ಷಗಳಿಂದ ವಿಶೇಷ ಕಲಾವಿದರು ರಂಗಾಯಣಕ್ಕೆ ಬದ್ಧರಾಗಿ ರಂಗಾಯಣವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಈ ಹಿಂದೆ ವಾರಂತ್ಯದ ನಾಟಕಗಳ ಪ್ರದರ್ಶನವಿದ್ದಾಗ ರಂಗಾಯಣ ತುಂಬಾ ವಿಭಿನ್ನವಾಗಿತ್ತು. ಆದರೆ ಈಗ ಪರಿಸ್ಥಿತಿ ಬೇರೆಯೇ ಇದೆ. ನಮ್ಮ ನಮ್ಮಲ್ಲೇ ಒಡಕು, ವೈಮನಸ್ಸು, ಮತ್ಸರ ಹೆಚ್ಚಾಗಿ ಸಂಸ್ಥೆ ಮೇಲೆ ಹಾಗೂ ವೈಯಕ್ತಿಕವಾಗ ನಮ್ಮಗಳ ಮೇಲೆಯೂ ಪರಿಣಾಮ ಬೀರಿ ರಂಗಾಯಣದ ಘನತೆಗೆ ಚ್ಯುತಿ ತರುವಂತಹ ಕೆಲಸವಾಗುತ್ತಿರುವುದು ಶೋಚನೀಯ ಸ್ಥಿತಿ ಎಂದು ಕಳವಳ ವ್ಯಕ್ತಪಡಿಸಿದರು.

ರಂಗಾಯಣವನ್ನು ಈ ಹಿಂದೆ ನಡೆಸುತ್ತಿದ್ದಂತಹ ವ್ಯಕ್ತಿಯಿಂದ ಅನೇಕ ಹಿರಿಯ ರಂಗಭೂಮಿ ಕಲಾವಿದರು ಸಂಸ್ಥೆ ತೊರೆದಿದ್ದಾರೆ. ಯಾವುದೇ ವ್ಯಕ್ತಿಯಾಗಲೀ ಅವರ ವೈಯಕ್ತಿಕ ಅಜೆಂಡಾ ಇಟ್ಟುಕೊಂಡು ಕಲಾವಿದರಿಗೆ ತಾರತಮ್ಯ, ನೋವುಂಟು ಮಾಡುವುದು ಸರಿಯಲ್ಲ. ಈಗಾಗಲೇ ಸಮಾಜದ ಸ್ವಾಸ್ಥ್ಯ ಹಾಳು ಮಾಡುವ ವ್ಯಕ್ತಿಗಳಿಗೆ ಜನರು ಮುಟ್ಟಿ ನೋಡಿಕೊಳ್ಳುವಂತ ಪಾಠ ಕಲಿಸಿದ್ದಾರೆ. ಇನ್ನು ಮುಂದೆಯಾದರೂ ರಂಗಾಯಣ ಉತ್ತಮ ರೀತಿಯಲ್ಲಿ ಶ್ರೇಯೋಭಿವೃದ್ಧಿ ಹೊಂದುವ ವಿಶ್ವಾಸವಿದೆ ಎಂದರು.

ರಂಗಾಯಣದ ಹಿರಿಯ ನಾಯಕನ ಮುಖಾಂತರ ಸರ್ಕಾರಕ್ಕೆ ನಮ್ಮ ಬೇಡಿಕೆಯನ್ನು ಹಕ್ಕೊತ್ತಾಯ ರೀತಿಯಲ್ಲಿ ಸಲ್ಲಿಸಬೇಕು. ಈ ಹಿಂದೆ ಇದ್ದ ನಿರ್ದೇಶಕರಿಗೆ ಕಾನೂನು ಚೌಕಟ್ಟಿನ ಎಲ್ಲೆ ಇರಲಿಲ್ಲ ಹಾಗಾಗಿ ಮುಂದೆ ಬರುವಂತ ನಿರ್ದೇಶಕರು ಕಾನೂನು ಚೌಕಟ್ಟಿನಡಿ ಕೆಲಸ ಮಾಡಬೇಕು. ಈ ನಿಟ್ಟಿನಲ್ಲಿ ಈಗಿನ ಸರ್ಕಾರ ಅಂತಹ ಸಂಕುಚಿತ ಮನೋಭಾವ, ಕೋಮುವಾದಂತಹ ವ್ಯಕ್ತಿಗಳಿಗೆ ಕಡಿವಾಣ ಹಾಕುವ ಭರವಸೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಳಿಕ ರಂಗಕರ್ಮಿ ಕಾಳೇಗೌಡರು ಮಾತನಾಡಿ, ಸರ್ಕಾರಗಳು ಬರುತ್ತವೆ ಹೋಗುತ್ತವೆ ಆದರೆ ರಂಗಾಯಣ ಕೊನೆವರೆಗೂ ಉಳಿಯುವಂತ ಸಂಸ್ಥೆ. ಈ ಹಿಂದೆ ಇಂದಿರಾಗಾಂಧಿ ಅವರು ಎಮರ್ಜನ್ಸಿ ಹೇರಿದ್ದಾಗ, ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ ಆಗುತ್ತಿದೆ ಎಂದು ಆ ಸಂದರ್ಭದಲ್ಲೇ ಹೋರಾಟ ಮಾಡಿದ್ದೇವೆ. ಈಗ ರಂಗಾಯಣದಲ್ಲಿ ಜ್ವಲಂತ ಸಮಸ್ಯೆ ತಲೆದೋರಿದಾಗ ಧ್ವನಿ ಎತ್ತದೇ ಇದ್ದರೆ ತಪ್ಪಾಗುತ್ತದೆ. ಹಾಗಾಗಿ ಈ ರೀತಿಯ ಚರ್ಚೆಗಳು ಆಗಬೇಕು. ಎಂದಿಗೂ ನಾವು ಹೊಣೆಗೇಡಿ, ಸೋಮಾರಿಗಳಂತೆ ಬದುಕಬಾರದು ನಮ್ಮ ಹಕ್ಕುಗಳಿಗೆ ಹೋರಾಡಬೇಕು ಎಂದು ಸಲಹೆ ನೀಡಿದರು.

ನಂತರ ರಂಗಕರ್ಮಿ ಪ್ರಸನ್ನ ಮಾತನಾಡಿ, ರಂಗಾಯಣ ಎಂದರೆ ಅದೊಂದು ವೃತ್ತಿಪರ ನಾಟಕ ಮಂಡಳಿ ಅಷ್ಟೆ, ಆದರೆ ಸಂಸ್ಥೆಯ ವಿಷಯಗಳನ್ನು ಬಿಟ್ಟು ಅನಗತ್ಯ ವಿಚಾರಗಳಿಂದ ಸದ್ದು ಮಾಡುತ್ತಿರುವುದು ರಂಗಾಯಣಕ್ಕೆ ಶೋಭೆ ತರುವಂತದ್ದಲ್ಲ. ಹಿಂದೆ ಇದ್ದಂತಹ ಗುಬ್ಬಿವೀರಣ್ಣ ಸೇರಿದಂತೆ ಅನೇಕ ನಾಟಕ ಕಂಪನಿ ಮಾಲೀಕರು, ಅವರ ಕಂಪನಿಯನ್ನು ಯಾರ ಸುಪರ್ದಿಗೂ ನೀಡದೇ ಅವರೇ ನಡೆಸುತ್ತಿದ್ದರಿಂದ ಅವರ ವರ್ಚಸ್ಸು ಹಾಗೆಯೇ ಉಳಿಯಿತು. ಆದರೆ ಕಾರಂತರು ರಂಗಾಯಣವನ್ನು ಸರ್ಕಾರದ ಅಧೀನಕ್ಕೆ ನೀಡಿದ್ದರಿಂದ ಈ ಸ್ಥಿತಿಗೆ ಬಂದು ನಿಂತಿದೆ. ಅವರು ಅಂದು ದೃಢ ನಿರ್ಧಾರ ಕೈಗೊಂಡು ಅವರೇ ನಡೆಸಿಕೊಂಡು ಬಂದಿದ್ದರೆ ಈಗ ಸರ್ಕಾರ ಮತ್ತು ಅಧಿಕಾರಿಗಳ ಮುಂದೆ ಕೈಕಟ್ಟಿ ನಿಲ್ಲುವ ಪ್ರಮೇಯ ಬರುತ್ತಿರಲಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ವಿಚಾರ ಸಂಕಿರಣ ಕಾರ್ಯಕ್ರಮ ಬಳಿಕ ಸೀಮಾ ಘೋಷ್ ಅವರಿಂದ ಮಧ್ಯಪ್ರದೇಶದ ಒಂದು ಜನಪದ ಪ್ರಕಾರದ ಪಾಂಡ್ವಾನಿ ಪ್ರದರ್ಶನವಾಯಿತು. ಚರ್ಚಾ ಕಾರ್ಯಕ್ರಮದಲ್ಲಿ ಕೆಮೆಂಕಟರಾಜು, ಹಿರಿಯ ರಂಗಕರ್ಮಿ ಕಾಳೇಗೌಡ, ರಾಜೀವ್, ನಿರಂತರ ಸಂಸ್ಥೆ ಶ್ರೀನಿವಾಸ್, ರಂಗಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳು ಮತ್ತಿತರರಿದ್ದರು.

ಪ್ಲಾಸ್ಟಿಕ್ ಮುಕ್ತ ಪರಿಸರದಿಂದ ಹಸಿರೀಕರಣ

ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್



ಭಾರತಿನಗರ, ಮೇ 22– ನಮ್ಮ ಪರಿಸರವನ್ನು ಪ್ಲಾಸ್ಟಿಕ್ ಮುಕ್ತ ವಲಯವನ್ನಾಗಿ ಮಾಡಿ ಹಸಿರೀಕರಣಗೊಳಿಸುವ ಮೂಲಕ ನಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಈ ನಿಟ್ಟಿನಲ್ಲಿ ಇಂತಹ ಸಾಮಾಜಿಕ ಕಾರ್ಯಕ್ರಮ ದೇವಸ್ಥಾನಗಳಿಂದಲೇ ಆರಂಭವಾಗಲಿ ಎಂದು ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಇಲ್ಲಿನ ಕಾಡುಕೊತ್ತನಹಳ್ಳಿ ಗ್ರಾಮದಲ್ಲಿ ಸೋಮವಾರ ನಡೆದ ಶ್ರೀವೀರಭದ್ರೇಶ್ವರ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಪೂಜೆ ನೆರವೇರಿಸಿ, ಗ್ರಾಮಸ್ಥರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, 800 ವರ್ಷಗಳ ಇತಿಹಾಸವಿರುವ ಈ ದೇವಾಲಯ 400 ವರ್ಷಗಳ ಕಾಲ ಮೈಸೂರು ಸಂಸ್ಥಾನಕ್ಕೆ ಒಳಪಟ್ಟಿದ್ದನ್ನು ಕೇಳಿ ಅತೀವ ಸಂತೋಷವಾಯಿತು ಎಂದು ಹರ್ಷ ವ್ಯಕ್ತಪಡಿಸಿದರು.

ನಮ್ಮ ಸಂಸ್ಥಾನದೊಂದಿಗೆ ಇಲ್ಲಿನ ಗ್ರಾಮಸ್ಥರ ನಂಟು ಬಹಳ ಹಿಂದಿನಿಂದಲೂ ಇದೆ. ಅದು ಹಾಗೆಯೇ ಮುಂದುವರೆಯಲಿ. ಸುಮಾರು 2 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಈ ದೇವಾಲಯವನ್ನು ಹಳೇ ವಾಸ್ತು ಶೈಲಿಯಲ್ಲಿ ನಿರ್ಮಾಣ ಮಾಡಿ ಮುಂದಿನ ಪೀಳಿಗೆಗೆ ಈ ದೇವಾಲಯದ ಮಹತ್ವ ತಿಳಿಸುವ ಅಗತ್ಯವಿದೆ ಎಂದರು.

ದೇವಾಲಯ ನಿರ್ಮಾಣದ ಬಳಿಕ ಪೂಜಾ ಕಾರ್ಯದ ಜೊತೆಗೆ ಸಾಮಾಜಿಕ ಕಾರ್ಯಕ್ರಮ ಹಮ್ಮಿಕೊಂಡು ಇಲ್ಲಿನ ಜನರ ಹಾಗೂ ನಾಡಿನ ಅಭ್ಯುದಯಕ್ಕೆ ಕಾರಣರಾಗಿದ್ದೀರಿ. ದೇವಾಲಯದಲ್ಲಿ ನಡೆದುಕೊಂಡು ಬಂದಿರುವ ಕಾರ್ಯಗಳನ್ನು ಮುಂದುವರೆಸಬೇಕಾಗಿದೆ. ಅದಕ್ಕಾಗಿ ಮೈಸೂರು ಸಂಸ್ಥಾನ ನಿಮ್ಮ ಜೊತೆ ಇರಲಿದೆ ಎಂದರು.

ದೇವಸ್ಥಾನ ಜೀರ್ಣೋದ್ಧಾರ ಕಾಮಗಾರಿ ಶೀಘ್ರ ಮುಕ್ತಾಯಗೊಂಡು ಲೋಕಾರ್ಪಣೆಯಾಗಲಿ. ದೇವಾಲಯ ಆರಂಭೋತ್ಸವಕ್ಕೆ ನಾನು ಖುದ್ದು ಹಾಜರಿರುತ್ತೇನೆ. ಯಾವುದೇ ಒತ್ತಡ ಕಾರ್ಯವಿದ್ದರೂ ಅದನ್ನು ಬದಿಗಿರಿಸಿ ಇಂತಹ ಲೋಕ ಕಲ್ಯಾಣ ಸತ್ಕಾರ್ಯದಲ್ಲಿ ಭಾಗಿಯಾಗುತ್ತೇನೆ ಎಂದರು.

ಕಾರ್ಯಕ್ರಮಕ್ಕೂ ಮುನ್ನಾ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಪೂರ್ಣಕುಂಭದೊಡನೆ ಸ್ವಾಗತಿಸಲಾಯಿತು. ಕಾರ್ಯಕ್ರಮದಲ್ಲಿ ದೇವಸ್ಥಾನ ನಿರ್ಮಾಣ ಸಮಿತಿ ಸದಸ್ಯರಾದ ಎಸ್.ದೇವ ಪ್ರಸಾದ್, ದೊಡ್ಡ ಯಜಮಾನರಾದ ಕೆ.ವಿ. ರಾಮಕೃಷ್ಣ, ಮರಿಸ್ವಾಮಿ, ಮಾದಯ್ಯ, ಶಿವರುದ್ರಯ್ಯ, ವಕೀಲ ರಾಜೇಂದ್ರಸ್ವಾಮಿ, ಮಹದೇವು, ಕೆ.ಆರ್.ಗಿರೀಶ್, ಶ್ರೀಧರ್, ಸೋಮಣ್ಣ ಶಂಕರ್, ಮಹೇಶ್, ವೀರಭದ್ರಯ್ಯ, ಮಂಚೇಗೌಡ, ಕಪನಿಗೌಡ, ನಂಜುಂಡ, ಪುಟ್ಟಸ್ವಾಮಿ, ಚಿಕ್ಕಸ್ವಾಮಿ, ದೇವಾಲಯದ ಅರ್ಚಕರು ಸೇರಿದಂತೆ ಇನ್ನಿತರರಿದ್ದರು.

ಶ್ರೀನಿವಾಸ್ ಸೇರಿ ಬೆಂಬಲಿಗರಿಗೆ 'ಕೈ' ಗಾಳ

■ ವಿಜಯಾನಂದ, ಯೋಗೇಶ್, ಮಹಾಲಿಂಗೇಗೌಡ ಪಕ್ಷ ಸೇರ್ಪಡೆಗೆ ಕಾಂಗ್ರೆಸ್ ಒಲವು ■ ಶ್ರೀನಿವಾಸ್ ಒಪ್ಪಿದರೆ ಡಿಕೆಶಿ ನೇತೃತ್ವದಲ್ಲಿ ಪಕ್ಷ ಸೇರ್ಪಡೆಗೆ ವೇದಿಕೆ ಸಜ್ಜು

● ಎಂ.ಕೆ.ಮೋಹನ್‌ರಾಜ್



ಎಂ. ಶ್ರೀನಿವಾಸ್ | ಯೋಗೇಶ್ | ವಿಜಯಾನಂದ | ಮಹಾಲಿಂಗೇಗೌಡ

ಮಂಡ್ಯ, ಮೇ 22– ಜೆಡಿಎಸ್ ಪಕ್ಷ ತಮಗೆ ಹಾಗೂ ತಮ್ಮ ಬೆಂಬಲಿಗರಿಗೆ ಟಿಕೆಟ್ ಕೊಡದಿದ್ದಕ್ಕೆ ಪಕ್ಷದ ವಿರುದ್ಧವೇ ಸೆಡ್ಡು ಹೊಡೆದು ಈ ಬಾರಿಯ ಚುನಾವಣೆಯಲ್ಲಿ ಬೆಂಬಲಿಗರೊಬ್ಬರನ್ನು ಜೆಡಿಎಸ್ ಬಂಡಾಯ ಅಭ್ಯರ್ಥಿ ಮಾಡಿ ಜೆಡಿಎಸ್ ಅಭ್ಯರ್ಥಿ ಸೋಲಿಗೆ ಕಾರಣರಾದ ಮಾಜಿ ಶಾಸಕ ಎಂ. ಶ್ರೀನಿವಾಸ್‌ಗೆ ಕಾಂಗ್ರೆಸ್ ಗಾಳ ಹಾಕಿದ್ದು, ಕೇವಲ ಶ್ರೀನಿವಾಸ್ ಅಲ್ಲದೇ ಅವರ ಪ್ರಮುಖ ಬೆಂಬಲಿಗರನ್ನು ಸಹ ಪಕ್ಷಕ್ಕೆ ಸೇರಿಸಿಕೊಳ್ಳಲು ಕಾಂಗ್ರೆಸ್ ಒಲವು ತೋರಿದೆ.

ನಾಗಮಂಗಲ ಶಾಸಕ ಎನ್.ಚಲುವರಾಯಸ್ವಾಮಿ ಮಾಜಿ ಶಾಸಕ ಎಂ.ಶ್ರೀನಿವಾಸ್ ಅವರನ್ನು ಕಾಂಗ್ರೆಸ್‌ಗೆ ಕರೆತರಲು ಉತ್ಸುಕತೆ ತೋರಿದ್ದು, ಈ ಹಿಂದೆ ಜೆಡಿಎಸ್‌ನಲ್ಲಿ ಇದ್ದಾಗಿನಿಂದಲೂ ಚಲುವರಾಯಸ್ವಾಮಿ ಹಾಗೂ ಶ್ರೀನಿವಾಸ್ ನಡುವೆ ಉತ್ತಮ ಬಾಂಧವ್ಯ ಇದೆ. ಈ ನಿಟ್ಟಿನಲ್ಲಿ ಶ್ರೀನಿವಾಸ್‌ರನ್ನು ಪಕ್ಷಕ್ಕೆ ಸೇರಿಸಿಕೊಂಡರೆ ಮಂಡ್ಯ ನಗರ ಸೇರಿದಂತೆ ಗ್ರಾಮಾಂತರ ಭಾಗದಲ್ಲಿ ಪಕ್ಷಕ್ಕೆ ಬಲ ಬಂದಂತಾಗುತ್ತದೆ. ಈ ನಿಟ್ಟಿನಲ್ಲಿ ಪಕ್ಷಕ್ಕೆ ಬರುವಂತೆ ಶ್ರೀನಿವಾಸ್‌ಗೆ ಚಲುವರಾಯಸ್ವಾಮಿ ಆಹ್ವಾನ ಕೊಟ್ಟಿದ್ದಾರೆ ಎನ್ನಲಾಗಿದೆ.

ಬೆಂಬಲಿಗರಿಗೆ ನೆಲೆ ಕಲ್ಪಿಸುವ ಸವಾಲು: ಚುನಾವಣೆ ವೇಳೆ ಹಾಲಿ ಶಾಸಕನಾಗಿದ್ದರೂ, ಜೆಡಿಎಸ್ ಪಕ್ಷ ಟಿಕೆಟ್ ಕೊಡದಿದ್ದಾಗ ಪಕ್ಷದ ವಿರುದ್ಧವೇ ಬಂಡೆದ್ದ ಎಂ. ಶ್ರೀನಿವಾಸ್‌ಗೆ ಟಿಕೆಟ್ ಆಕಾಂಕ್ಷಿಗಳಾಗಿದ್ದ ಪಿಇಟಿ ಅಧ್ಯಕ್ಷ ಕೆ.ಎಸ್. ವಿಜಯಾನಂದ, ಗ್ರಾಪಂ ಮಾಜಿ ಅಧ್ಯಕ್ಷ ಮಹಾಲಿಂಗೇಗೌಡ, ಶ್ರೀನಿವಾಸ್ ಅಳಿಯ, ಜಿಪಂ ಮಾಜಿ ಸದಸ್ಯ ಎಚ್.ಎನ್.ಯೋಗೇಶ್ ಸೇರಿದಂತೆ ಹಲವರು ಸಾಥ್ ನೀಡಿದ್ದರಿಂದ ಅವರು ಜೆಡಿಎಸ್‌ನಿಂದ ಹೊರ ಬಂದಿದ್ದರು. ಎಲ್ಲರೂ ಒಗ್ಗೂಡಿ ವಿಜಯಾನಂದರನ್ನು ಪಕ್ಷೇತರರಾಗಿ ಕಣಕ್ಕಿಳಿಸಿದ್ದರು. ಇದೀಗ ಜೆಡಿಎಸ್‌ನಿಂದ ಹೊರ ಬಂದಿರುವ ತಮ್ಮೆಲ್ಲಾ ಬೆಂಬಲಿಗರಿಗೆ ನೆಲೆ ಕಲ್ಪಿಸಬೇಕಾದ ಒತ್ತಡದಲ್ಲಿ ಮಾಜಿ ಶಾಸಕ ಶ್ರೀನಿವಾಸ್ ಇದ್ದಾರೆ.

ಜಿಪಂ, ತಾಪಂ ಚುನಾವಣೆಯಲ್ಲಿ ಟಿಕೆಟ್ ನೀಡುವ ಬೇಡಿಕೆ: ಹಾಗೊಂದು ವೇಳೆ ಮಾಜಿ ಶಾಸಕ ಎಂ.ಶ್ರೀನಿವಾಸ್ ಕಾಂಗ್ರೆಸ್ ಆಹ್ವಾನ ಪುರಸ್ಕರಿಸಿ, ಪಕ್ಷಕ್ಕೆ ಹೋದರೆ ಆಡಳಿತರೂಢ ಕಾಂಗ್ರೆಸ್‌ನಿಂದ ಬೇಕಾದ ಕೆಲಸಗಳು ಸುಲಭವಾಗಿ ಆಗಲಿವೆ. 3 ಬಾರಿ ಮಂಡ್ಯ ಕ್ಷೇತ್ರದ ಶಾಸಕರಾಗಿರುವ ಶ್ರೀನಿವಾಸ್ ಅನುಭವ ಕಾಂಗ್ರೆಸ್ ಪಕ್ಷಕ್ಕೆ ವರದಾನವಾಗಲಿದ್ದು, ಎಲ್ಲಕ್ಕಿಂತ ಹೆಚ್ಚಾಗಿ ಶ್ರೀನಿವಾಸ್ ಪಕ್ಷ ಸೇರ್ಪಡೆಗೂ ಮುನ್ನ ಹಲವು ಷರತ್ತುಗಳನ್ನು ಕಾಂಗ್ರೆಸ್ಸಿಗರಿಗೆ ಹಾಕುವ ಸಾಧ್ಯತೆ ಇದೆ. ತಮ್ಮ ಪ್ರಮುಖ ಬೆಂಬಲಿಗರ ಪೈಕಿ ಕೆ.ಎಸ್.ವಿಜಯಾನಂದರಿಗೆ ವಿಧಾನಪರಿಷತ್ ಟಿಕೆಟ್, ಇನ್ನುಳಿದ ಮಹಾಲಿಂಗೇಗೌಡ, ಯೋಗೇಶ್‌ಗೆ ಜಿಪಂ ಟಿಕೆಟ್ ಕೇಳುವ ಸಾಧ್ಯತೆ ಇದೆ. ಇತರೆ ಬೆಂಬಲಿಗರಿಗೆ ತಾಪಂ ಟಿಕೆಟ್ ಕೊಡುವಂತೆಯೂ ಬೇಡಿಕೆ ಇಡಬಹುದು.

ಲಾಭದ ನಿರೀಕ್ಷೆ: ಮಾಜಿ ಶಾಸಕ ಎಂ.ಶ್ರೀನಿವಾಸ್ ಹಾಗೂ ಬೆಂಬಲಿಗರು ಕಾಂಗ್ರೆಸ್‌ಗೆ ಬಂದರೆ ಶೀಘ್ರದಲ್ಲೇ ಎದುರಾಗಲಿರುವ ಜಿಪಂ ಚುನಾವಣೆಯಲ್ಲಿ ಪಕ್ಷ ಹೆಚ್ಚಿನ ಸೀಟು ಗೆಲ್ಲಲು ಸಹಾಯವಾಗಬಹುದು. ಜೊತೆಗೆ ಮುಂದಿನ ಲೋಕಸಭಾ ಚುನಾವಣೆ ದೃಷ್ಟಿಯಿಂದ ಪಕ್ಷಕ್ಕೆ ಲಾಭವಾಗುವ ನಿರೀಕ್ಷೆಯಲ್ಲಿ ಶ್ರೀನಿವಾಸ್‌ಗೆ ಕಾಂಗ್ರೆಸ್ ಪಕ್ಷ ಗಾಳ ಹಾಕುತ್ತಿದೆ.

ನಗರಸಭೆ ಗದ್ದುಗೆ ಹಿಡಿಯಲು ಕೈ ಕಸರತ್ತು: ಪ್ರಸ್ತುತ ಮಂಡ್ಯ ನಗರಸಭೆಯಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರ ಹಿಡಿಯಬೇಕೆಂದು ತಂತ್ರಗಾರಿಕೆ ರೂಪಿಸುತ್ತಿದೆ. ಮಂಡ್ಯ ನಗರಸಭೆಯ 35 ವಾರ್ಡ್‌ಗಳ ಪೈಕಿ ಜೆಡಿಎಸ್ 18, ಕಾಂಗ್ರೆಸ್ 10, ಬಿಜೆಪಿ 2 ಹಾಗೂ ಪಕ್ಷೇತರರು 5 ಮಂದಿ ಇದ್ದು, ಜೆಡಿಎಸ್ ತೆಕ್ಕೆಯಲ್ಲಿ ಮಂಡ್ಯ ನಗರಸಭೆ ಇದೆ. ಆದರೆ ಎಂ.ಶ್ರೀನಿವಾಸ್ ಕಾಂಗ್ರೆಸ್‌ಗೆ ಬಂದರೆ ಶ್ರೀನಿವಾಸ್ ಬೆಂಬಲಿತ ನಗರಸಭಾ ಸದಸ್ಯರನ್ನು ಪಕ್ಷಕ್ಕೆ ಸೆಳೆದುಕೊಳ್ಳಬಹುದಾಗಿದ್ದು, ಈ ಮೂಲಕ ಮಂಡ್ಯ ನಗರಸಭೆ ಅಧಿಕಾರ ಹಿಡಿಯಲು ಸುಲಭವಾಗುವ ಸಾಧ್ಯತೆ ಸಹ ಇದೆ.

ಒಟ್ಟಾರೆ ಈ ಎಲ್ಲಾ ಬೆಳವಣಿಗೆಯಿಂದ ಪಕ್ಷಕ್ಕೆ ಲಾಭವಾಗುವ ನಿರೀಕ್ಷೆಯಲ್ಲಿ ಕಾಂಗ್ರೆಸ್ ಎಂ.ಶ್ರೀನಿವಾಸ್ ಮತ್ತು ಬೆಂಬಲಿಗರಿಗೆ ಗಾಳ ಹಾಕಿದೆ. ಒಪ್ಪಿಕೊಂಡು ಪಕ್ಷಕ್ಕೆ ಬರುವುದು ಅಂತಿಮವಾದರೆ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಸೇರ್ಪಡೆಗೆ ವೇದಿಕೆ ಸಜ್ಜು ಮಾಡುವ ಸಾಧ್ಯತೆ ಇದೆ.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ, ಮೇ 22– ಕೆಐಎಡಿಬಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕಾರ್ಯ ಹಮ್ಮಿಕೊಂಡಿರುವುದರಿಂದ ಮೇ 23 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 2ರವರೆಗೆ ಗುತ್ತಲು, ಫ್ಯಾಕ್ಟರಿ ವೃತ್ತ, ಕೈಗಾರಿಕಾ ಬಡಾವಣೆಗಳು, ಎಂ.ಸಿ.ರಸ್ತೆ, ತಾವರೆಗೆರೆ, ನೆಹರು ನಗರ, ಉದಯಗಿರಿ, ಸಾದತ್ ಮೊಹಲ್ಲ, ಚನ್ನಯ್ಯ ಬಡಾವಣೆ, ಸಿದ್ಧಾರ್ಥ ಬಡಾವಣೆ, ಬೆಂಗಳೂರು ಮುಖ್ಯ ರಸ್ತೆಯ ಹೆಬ್ಬಾಳ, ಶ್ರೀನಿವಾಸಪುರ ಗೇಟ್, ಕೀಲಾರ ಐಪಿ ವ್ಯಾಪ್ತಿ, ಹನಕೆರೆ ಐಪಿ ವ್ಯಾಪ್ತಿ, ಬಸವನಪುರ ಐಪಿ ವ್ಯಾಪ್ತಿ, ಬೂದನೂರು, ಭೂತನ ಹೊಸೂರು, ಚನ್ನಪ್ಪನ ದೊಡ್ಡಿ, ಹಂಬರಹಳ್ಳಿ ಸೇರಿದಂತೆ ಸುತ್ತಮುತ್ತು ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಖಾತಾ ಆಂದೋಲನಕ್ಕೆ ಪುರಸಭಾಧ್ಯಕ್ಷೆ ಚಾಲನೆ



ಕೆ.ಆರ್.ಪೇಟೆ, ಮೇ 22– ಲೋಕಾ ಯುಕ್ತ ತನಿಖೆಗೊಳಗಾಗಿ ನನೆಗುದಿಗೆ ಬಿದ್ದಿದ್ದ ಪಟ್ಟಣದ ಹೇಮಾವತಿ ಬಡಾವಣೆ ನಿವೇಶನಗಳು ಸೇರಿದಂತೆ ಮನೆ ಖಾತಾ ಆಂದೋಲನಕ್ಕೆ ಪುರಸಭಾಧ್ಯಕ್ಷೆ ಮಹಾ ದೇವಿ ನಂಜುಂಡ ಚಾಲನೆ ನೀಡಿದರು.

ಪಟ್ಟಣದ ಪುರಸಭಾ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಹೇಮಾವತಿ ಬಡಾವಣೆಯ ಹಲವು ಫಲಾನುಭವಿಗಳಿಗೆ ಮೊದಲ ಹಂತದಲ್ಲಿ ಇ–ಸ್ವತ್ತು ಹಸ್ತಾಂತರಿಸಿದ ಅವರು ಹಂತ ಹಂತ ವಾಗಿ ಬಡಾವಣೆಯ ಎಲ್ಲಾ ಅರ್ಹ ಫಲಾನುಭವಿಗಳಿಗೆ ಇ–ಸ್ವತ್ತು ವಿತರಿಸುವುದಾಗಿ ತಿಳಿಸಿದರು.

ಮಾಜಿ ಸಚಿವ ಡಾ. ನಾರಾಯಣ ಗೌಡರ ಹೋರಾಟದ ಫಲ ಮೊದಲ ಹಂತ ದಲ್ಲಿ ಹೇಮಾವತಿ ಬಡಾವಣೆಯ 700ಕ್ಕೂ ಹೆಚ್ಚಿನ ಫಲಾನುಭವಿಗಳಿಗೆ ಖಾತೆ ಮಾಡಿ ಇ–ಸ್ವತ್ತು ವಿತರಿಸಲು ಹೈಕೋರ್ಟ್ 3 ತಿಂಗಳ ಹಿಂದೆಯೇ ನಗರಾಭಿವೃದ್ಧಿ ಇಲಾಖೆಗೆ ಆದೇಶಿಸಿತ್ತು. ಆದರೆ ದಾಖಲೆ ಕ್ರೋಢೀಕರಿಸಿ ಇ–ಸ್ವತ್ತು ವಿತರಿಸುವ ವೇಳೆ ಚುನಾವಣೆ ಘೋಷಣೆಯಾದ ಹಿನ್ನೆಲೆಯಲ್ಲಿ ಇದೀಗ ಇ–ಸ್ವತ್ತು ವಿತರಣೆಗೆ ಚಾಲನೆ ನೀಡಲಾಗಿದೆ ಎಂದರು.

ಈ ವೇಳೆ ಪುರಸಭೆ ಮುಖ್ಯಾಧಿಕಾರಿ ಎಂ.ಬಸವರಾಜು, ಕಂದಾಯ ನಿರೀಕ್ಷಕ ರವಿಕುಮಾರ್, ವ್ಯವಸ್ಥಾಪಕ ಸೋಮಶೇಖರ್, ಪುರಸಭಾ ಸದಸ್ಯರಾದ ಡಿ.ಪ್ರೇಮಕುಮಾರ್, ಕೆ.ಆರ್.ರವೀಂದ್ರಬಾಬು, ಕೆ.ಎಸ್. ಸಂತೋಷ್ ಕುಮಾರ್, ಪ್ರಮೋದ್, ಹೆಚ್.ಡಿ.ಅಶೋಕ್, ಸುಗುಣ, ಸೌಭಾಗ್ಯ, ಮುಖಂಡರಾದ ಎಂ.ಟಿ. ಲೋಕೇಶ್, ಅಶ್ವತ್ಥ ಲಕ್ಷ್ಮಿನಾರಾಯಣ್, ರಾಜೇಗೌಡ ಸೇರಿದಂತೆ ಹೇಮಾವತಿ ಬಡಾವಣೆ ನಿವಾಸಿಗಳು ಉಪಸ್ಥಿತರಿದ್ದರು.

ಪಿಯು ಪೂರಕ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧ

ಮಂಡ್ಯ, ಮೇ 22– ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗಳು ಮೇ 23 ರಿಂದ ಜೂ.3 ರವರೆಗೆ ನಡೆಯಲಿದ್ದು, ಜಿಲ್ಲಾ ವ್ಯಾಪ್ತಿಯ 09 ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಪರೀಕ್ಷಾ ದಿನಗಳಂದು 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ. ಅಲ್ಲದೇ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲ ಜೆರಾಕ್ಸ್ ಮತ್ತು ಕಂಪ್ಯೂಟರ್/ಸೈಬರ್ ಅಂಗಡಿಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ ಆದೇಶ ಹೊರಡಿಸಿದ್ದಾರೆ. ಪರೀಕ್ಷಾರ್ಥಿಗಳು ಮತ್ತು ಪರೀಕ್ಷಾ ಕಾರ್ಯಕ್ಕೆ ನೇಮಕಗೊಂಡ ಅಧಿಕಾರಿಗಳು/ಸಿಬ್ಬಂದಿಗಳು ಹೊರತುಪಡಿಸಿ ಇತರರು ಯಾರೂ ನಿಷೇಧಿತ ಪ್ರದೇಶದೊಳಗೆ ಪ್ರವೇಶಿಸುವಂತಿಲ್ಲ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಇಬ್ಬರು ಯುವಕರು ನೀರು ಪಾಲು

ಶ್ರೀರಂಗಪಟ್ಟಣ, ಮೇ 22– ಕಾವೇರಿ ನದಿಯಲ್ಲಿ ಈಜಲು ಹೋದ ಇಬ್ಬರು ಯುವಕರು ನೀರು ಪಾಲಾದ ಘಟನೆ ತಾಲೂಕಿನ ಬಲಮುರಿಯಲ್ಲಿ ಭಾನುವಾರ ನಡೆದಿದೆ.

ಹಾಸನ ಜಿಲ್ಲೆ, ಹೊಳೆನರಸೀಪುರದ ನಿವಾಸಿ ಪ್ರಸನ್ನ ಎಂಬುವರ ಮಗ ದರ್ಶನ್.ಪಿ (19) ಮತ್ತು ಈತನ ಸಂಬಂಧಿಕರಾದ ಧನಂಜಯ (19) ಸಾವನ್ನಪ್ಪಿದವರು. ಇವರು ಬಲಮುರಿಯ ಕಲ್ಯಾಣ ಮಂಟಪದಲ್ಲಿ ನಡೆದ ಸಂಬಂಧಿಕರ ಮದುವೆಗೆ ಆಗಮಿಸಿದ್ದರು. ಮದುವೆ ಮುಗಿದ ಬಳಿಕ ಕಾವೇರಿ ನದಿಯಲ್ಲಿ ಈಜಾಡಲು ಹೋಗಿ ಸುಳಿಗೆ ಸಿಲುಕಿ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕೆ.ಆರ್.ಸಾಗರ ಠಾಣೆ ಪೊಲೀಸರು ಪರಿಶೀಲನೆ ನಡೆಸಿದರು. ಬಳಿಕ ನದಿಯಿಂದ ಮೃತದೇಹ ಗಳನ್ನು ಮೇಲೆತ್ತಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಈ ಸಂಬಂಧ ಕೆ.ಆರ್.ಸಾಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

140 ಶಾಸಕರು ಪ್ರಮಾಣ ಸ್ವೀಕಾರ

ಶಾಸಕರಾಗಿ ಕೆ.ಹೆಚ್.ಮುನಿಯಪ್ಪ, ಸರ್ವಜ್ಞನಗರ ಕ್ಷೇತ್ರದ ಶಾಸಕರಾಗಿ ಕೆ.ಜೆ.ಜಾರ್ಜ್, ಬಬಲೇಶ್ವರ ಕ್ಷೇತ್ರದ ಶಾಸಕರಾಗಿ ಎಂ.ಬಿ.ಪಾಟೀಲ್ ಭಗವಂತನ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಈ ನಡುವೆ ಅಧಿವೇಶನಕ್ಕೆ 7 ಸಚಿವರ ಪೈಕಿ ರಾಮಲಿಂಗಾರೆಡ್ಡಿ ಮತ್ತು ಜಮೀರ್ ಅಹಮದ್ ಖಾನ್ ಗೈರಾಗಿದ್ದಾರೆಂದು ತಿಳಿದು ಬಂದಿದೆ. ಈ ನಡುವೆ ಯಮಕನಮರಡಿ ಶಾಸಕರಾಗಿ ಸತೀಶ್ ಜಾರಕಿಹೊಳಿ, ಚಿತ್ತಾಪುರ ಶಾಸಕರಾಗಿ ಪ್ರಿಯಾಂಕ್ ಖರ್ಗೆ, ಬಿಟಿಎಂ ಲೇಔಟ್ ಶಾಸಕರಾಗಿ ರಾಮಲಿಂಗಾರೆಡ್ಡಿ, ಮಂಗಳೂರು ಶಾಸಕರಾಗಿ ಯು.ಟಿ.ಖಾದರ್, ಬಸವನಬಾಗೇವಾಡಿ ಶಾಸಕರಾಗಿ ಶಿವಾನಂದ ಪಾಟೀಲ್ ಅವರು ಪ್ರಮಾಣವಚನ ಸ್ವೀಕರಿಸಿದರು.

ಸಿದ್ದರಾಮಯ್ಯನವರೇ ಐದು ವರ್ಷ ಸಿಎಂ

ಮುಖ್ಯಮಂತ್ರಿ ಎನ್ನುವ ಮೂಲಕ ಮುಂದಿನ ದಿನಗಳಲ್ಲಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಯಾಗುತ್ತಾರೆಂಬ ಆಶಯವುಳ್ಳವರಿಗೆ ಶಾಕ್ ನೀಡಿದ್ದಾರೆ. ಅಧಿಕಾರ ಹಂಚಿಕೆ ಬಗ್ಗೆ ಯಾವುದೇ ನಿರ್ಧಾರವಾಗಿಲ್ಲ. ಲೋಕಸಭೆ ಚುನಾವಣೆ ನಂತರ ಬದಲಾವಣೆ ಬಗ್ಗೆಯೂ ಯಾವುದೇ ಪ್ರಸ್ತಾಪವಿಲ್ಲ. ಹಾಗೇನಾದರೂ ಇದ್ದಿದ್ದರೆ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಅಧಿಕೃತ ಸುದ್ದಿಗೋಷ್ಠಿಯಲ್ಲೇ ಪ್ರಕಟಿಸುತ್ತಿದ್ದರು. ಹಾಗಾಗಿ ಸಿದ್ದರಾಮಯ್ಯನವರೇ 5 ವರ್ಷ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದಾರೆ ಎಂದು ತಿಳಿಸಿದರು.

ಮೂರು ದಿನಗಳ ಕಾಲ ವಿಧಾನಸಭೆ ಅಧಿವೇಶನ ನಡೆಯಲಿದ್ದು, ಮುಂದಿನ 4 ದಿನಗಳಲ್ಲಿ ಸಚಿವ ಸಂಪುಟ ರಚನೆಯಾಗಿ ಖಾತೆ ಹಂಚಿಕೆ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ. 2013–18ರ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರು ರಾಜ್ಯದ ಜನತೆಗೆ ನೀಡಿದ್ದ 165 ಭರವಸೆಗಳಲ್ಲಿ 158 ಭರವಸೆಗಳನ್ನು ಈಡೇರಿಸಿದ್ದರು. ನಾನು ನೀರಾವರಿ ಸಚಿವನಾಗಿ ಗುತ್ತಿಗೆದಾರರಿಗೆ ಒಂದು ಬಿಲ್ ಅನ್ನೂ ಉಳಿಸಿಕೊಂಡ ಉದಾಹರಣೆಯಿಲ್ಲ. ಆದರೆ ಬಿಜೆಪಿ ಸರ್ಕಾರದ ಭ್ರಷ್ಟಾಚಾರದಿಂದಾಗಿ ಬೇಸತ್ತು ಜನ ಈ ಬಾರಿ ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ಬಹುಮತ ನೀಡಿದ್ದಾರೆ ಎಂದು ಹೇಳಿದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ ನೀರಾವರಿ, ಲೋಕೋಪಯೋಗಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇರಿದಂತೆ ಹಲವು ಇಲಾಖೆಗಳಲ್ಲಿ ಹಗರಣ ನಡೆದಿದೆ. ನೇಮಕಾತಿಯಲ್ಲೂ ಗೋಲ್‌ಮಾಲ್ ನಡೆದಿದೆ. ಈ ಎಲ್ಲಾ ಹಗರಣಗಳ ಬಗ್ಗೆ ತನಿಖೆ ನಡೆಸಿ ತಾತ್ವಿಕ ಹಂತಕ್ಕೆ ಕೊಂಡೊಯ್ದು ಅನ್ಯಾಯವಾದವರಿಗೆ ನ್ಯಾಯ ಕೊಡಿಸುವುದರ ಜೊತೆಗೆ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಕಾಂಗ್ರೆಸ್ ನೀಡಿದ್ದ ಗ್ಯಾರೆಂಟಿ ಕಾರ್ಡ್ ವಿಚಾರವಾಗಿ ಮೊದಲ ಕ್ಯಾಬಿನೆಟ್ ಸಭೆಯಲ್ಲಿ ಚರ್ಚೆ ನಡೆಸಿ, ತಾತ್ವಿಕ ಒಪ್ಪಿಗೆ ನೀಡಲಾಗಿದೆ. ಈ ವಿಚಾರದಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ ಎಂದು ಇದೇ ವೇಳೆ ಅವರು ಸ್ಪಷ್ಟಪಡಿಸಿದರು.

ಗದ್ದಿಗೆಗೆ ಪೂಜೆ: ಸಚಿವ ಎಂ.ಬಿ ಪಾಟೀಲ್ ಹಾಗೂ ಅವರ ಪತ್ನಿ ಆಶಾ ಪಾಟೀಲ್ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಕರ್ತೃ ಗದ್ದಿಗೆಗೆ ವಿಶೇಷ ಪೂಜೆ ಸಲ್ಲಿಸಿ, ಕೆಲಕಾಲ ಧ್ಯಾನ ಮಂದಿರದಲ್ಲಿ ಕುಳಿತು ಪ್ರಾರ್ಥನೆ ಸಲ್ಲಿಸಿದರು. ಸಚಿವನಾಗಿ ಪ್ರಮಾಣವಚನ ಸ್ವೀಕರಿಸಿದ ಮೇಲೆ ಸುತ್ತೂರು ಶ್ರೀಗಳ ಆಶೀರ್ವಾದ ಪಡೆಯಲು ಬಂದಿದ್ದೇನೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಕೆಪಿಸಿಸಿ ಕಾರ್ಯದರ್ಶಿ ಹದಿನಾರು ಗುರುಪಾದಸ್ವಾಮಿ, ಮುಖಂಡರಾದ ಆಲನಹಳ್ಳಿ ಪುಟ್ಟಸ್ವಾಮಿ, ರವಿಕುಮಾರ್, ವರುಣ ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಸ್ವಾಗತ: ಸುತ್ತೂರು ಕ್ಷೇತ್ರಕ್ಕೆ ಭೇಟಿ ನೀಡಲು ಆಗಮಿಸಿದ್ದ ಎಂ.ಬಿ.ಪಾಟೀಲ್ ಅವರನ್ನು ಮೈಸೂರಿನಲ್ಲಿ ಆತ್ಮೀಯವಾಗಿ ಸ್ವಾಗತಿಸಲಾಯಿತು. ಟೋಲ್‌ಗೇಟ್ ಬಳಿ ಕಾಂಗ್ರೆಸ್ ಮುಖಂಡರಾದ ಪ್ರತಿಧ್ವನಿ ಪ್ರಸಾದ್, ಆರಿಸ್ ಪಾಶ ಮಂಜುಳಾ ಮಾನಸ, ಪ್ರಕಾಶ್, ಪಾಳ್ಯ ಸುರೇಶ್, ರಘುರಾಜೇ ಅರಸ್, ಪದ್ಮನಾಭನ್, ಲತಾ ರಂಗನಾಥ್, ಮಹಮ್ಮದ್ ತಸಿಂ, ಕೆಂಪರಾಜ ಅರಸ್, ಜಪ್ರುಲ್ಲಾ, ಯೋಗೇಶ್, ಚಂದ್ರಶೇಖರ್ ಮತ್ತಿತರರು ಸಚಿವರನ್ನು ಅಭಿನಂದಿಸಿ ಸ್ವಾಗತಿಸಿದರು.

ಹೈಕೋರ್ಟ್‌ಗೆ ವರದಿ!

ಸಂಬಂಧಪಟ್ಟಂತೆ 2023ರ ಮಾರ್ಚ್ 21ರಂದು ಮುಡಾ ಸಭೆಯಲ್ಲಿ ವಿಷಯ ಸಂಖ್ಯೆ 13(4)ರಲ್ಲಿ ನಿರ್ಣಯ ಕೈಗೊಳ್ಳಲಾಗಿದೆ ಎಂದು ಹೈಕೋರ್ಟ್‌ಗೆ ವರದಿ ಸಲ್ಲಿಸಿದ್ದು, ಇದು ಮುಡಾ ಹಿತಾಸಕ್ತಿಗೆ ವಿರುದ್ಧವಾದ ನಿರ್ಣಯವಾಗಿದೆ. ಇದರಂತೆ ಮೂರನೇ ವ್ಯಕ್ತಿಯು ಹೈಕೋರ್ಟ್ ಆದೇಶ ಪಡೆದು ಕೋಟ್ಯಾಂತರ ಬೆಲೆ ಬಾಳುವ ಆಸ್ತಿಯನ್ನು ಕಬಳಿಸಲು ಉದ್ದೇಶಿಸಲಾಗಿದೆ ಎಂದು ವಕೀಲ ಹೆಚ್.ಎ. ಮುರಳೀಧರ ಅವರು ಮೇ 12ರಂದು ಲೀಗಲ್ ನೋಟೀಸ್‌ನಲ್ಲಿ ತಿಳಿಸಿದ್ದಾರೆ ಎಂದು ಜಿಲ್ಲಾಧಿಕಾರಿ ರಾಜೇಂದ್ರ ಅವರು ಮುಡಾ ಆಯುಕ್ತರಿಗೆ ರವಾನಿಸಿರುವ ನೋಟೀಸ್‌ನಲ್ಲಿ ಉಲ್ಲೇಖಿಸಿದ್ದಾರೆ.

ಮೊದಲನೆಯದಾಗಿ ಈ ಭೂಮಿಗೆ ಸಂಬಂಧಪಟ್ಟಂತೆ ಮುಡಾದಲ್ಲಿ ಸಭೆಯೇ ಜರುಗಿಲ್ಲ. ಹೈಕೋರ್ಟ್‌ಗೆ ಮುಡಾ ಆಯುಕ್ತರು ಸಲ್ಲಿಸಿರುವ ವರದಿಯಂತೆ ಮಾರ್ಚ್ 21ರಂದು ಯಾವುದೇ ನಿರ್ಣಯ ಮುಡಾದಲ್ಲಿ ಸ್ವೀಕೃತವಾಗಿರುವುದಿಲ್ಲ. ಹೀಗಿದ್ದರೂ ಮಾರ್ಚ್ 21ರ ನಿರ್ಣಯದ ಬಗ್ಗೆ ಮುಡಾ ಸಭೆಯ ಸದಸ್ಯರ ಗಮನಕ್ಕೂ ಸಲ್ಲಿಸದೇ ಹೈಕೋರ್ಟ್‌ಗೆ ನೀವು (ಮುಡಾ ಆಯುಕ್ತರು) ವರದಿ ಸಲ್ಲಿಸಲು ಕಾರಣವೇನು? ಅಂತಹ ಅನಿವಾರ್ಯತೆ ಏನಿತ್ತು? ಯಾರ ಆದೇಶದ ಮೇರೆಗೆ ಸ್ವೀಕೃತವಾಗದ ನಡಾವಳಿಯನ್ನು ಯಾವ ಆಧಾರದ ಮೇರೆಗೆ ಹೈಕೋರ್ಟ್‌ಗೆ ಸಲ್ಲಿಸಲಾಗಿದೆ? ಹೈಕೋರ್ಟ್‌ನಲ್ಲಿ ನಡೆಯುತ್ತಿರುವ ಪ್ರಕರಣದಲ್ಲಿ ಮುಡಾದಿಂದ ಸಲ್ಲಿಸಿರುವ ಆಕ್ಷೇಪಣೆ ಏನು? ಸದರಿ ಆದೇಶವನ್ನು ಪ್ರಶ್ನಿಸಲಾಗಿದೆಯೇ? ಎಂದು ಜಿಲ್ಲಾಧಿಕಾರಿಗಳು ಮುಡಾ ಆಯುಕ್ತರಿಗೆ ಪ್ರಶ್ನೆಗಳ ಸುರಿಮಳೆಗೈದಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟ ಸ್ವತ್ತು ಮುಡಾ ಸ್ವತ್ತಾಗಿದ್ದು, ಅದನ್ನು ಸಂರಕ್ಷಿಸಿರುವುದು ಮುಡಾದ ಆದ್ಯ ಕರ್ತವ್ಯವಾಗಿದ್ದರೂ, ಮೈಸೂರಿನ ಹೃದಯ ಭಾಗದಲ್ಲಿರುವ ಸುಮಾರು 27 ಎಕರೆ ಭೂಮಿಯನ್ನು ಮನಸ್ಸೋ ಇಚ್ಛೆ ನಿರ್ವಹಿಸುತ್ತಿರುವುದು ಮತ್ತು ಪ್ರಾಧಿಕಾರದ ಸ್ಥಿರೀಕರಣವಾಗದ ನಿರ್ಣಯವನ್ನು ಹೈಕೋರ್ಟ್‌ಗೆ ಸಲ್ಲಿಸುವ ಮತ್ತು ಪ್ರಕರಣದಲ್ಲಿ ಮುಂದುವರೆದಿರುವ ನಡವಳಿಕೆಗಳನ್ನು ಗಮನಿಸಿದ್ದಲ್ಲಿ ಸಂಶಯಕ್ಕೆ ಎಡೆ ಮಾಡಿಕೊಡುತ್ತಿರುವುದರಿಂದ ಈ ಸಂಬಂಧ ಯಾವುದೇ ನಡಾವಳಿ ಕೈಗೊಳ್ಳದೇ ಸ್ಥಗಿತಗೊಳಿಸಿ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಖುದ್ದಾಗಿ ಮೇಲ್ಕಂಡ ಅಂಶಗಳಿಗೆ ಲಿಖಿತ ವಿವರಣೆಗಳೊಂದಿಗೆ ತಮ್ಮ ಮುಂದೆ ಹಾಜರಾಗಬೇಕೆಂದು ಜಿಲ್ಲಾಧಿಕಾರಿಗಳು ಮುಡಾ ಆಯುಕ್ತರಿಗೆ ನೀಡಿರುವ ನೋಟೀಸ್‌ನಲ್ಲಿ ತಿಳಿಸಿದ್ದಾರೆ.

ಮದ್ದೂರನ್ನು ಮಾದರಿಯಾಗಿಸಲು ಶ್ರಮಿಸುವೆ: ಉದಯ್




ಮದ್ದೂರು, ಮೇ 22–ಹಲವು ಘಟಾನುಘಟಿ ನಾಯಕರನ್ನು ಕೊಟ್ಟ ಮದ್ದೂರು ಕ್ಷೇತ್ರವನ್ನು ರಾಜ್ಯದಲ್ಲೇ ಮಾದರಿಯನ್ನಾಗಿಸಲು ಶ್ರಮಿಸುವುದಾಗಿ ಶಾಸಕ ಕೆ.ಎಂ.ಉದಯ್ ತಿಳಿಸಿದರು.

ಪಟ್ಟಣದ ಖಾಸಗಿ ಹೋಟೆಲ್‌ನಲ್ಲಿ ಸೋಮವಾರ ಆಯೋಜಿಸಿದ್ದ ಮತದಾರರಿಗೆ ಕೃತಜ್ಞತಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಧಾನಿ ಹುದ್ದೆ ಹೊರತುಪಡಿಸಿ ಮುಖ್ಯಮಂತ್ರಿ, ರಾಜ್ಯಪಾಲ, ವಿದೇಶಾಂಗ ಸಚಿವ ಸೇರಿದಂತೆ ಇನ್ನಿತರ ಹತ್ತು ಹಲವು ಸ್ಥಾನಗಳನ್ನು ಅಲಂಕರಿಸಿ ರುವ ಕ್ಷೇತ್ರದ ಹಿರಿಯ ಮುತ್ಸದಿ ಎಸ್.ಎಂ.ಕೃಷ್ಣ ಅವರನ್ನು ಪ್ರತಿಯೊಬ್ಬರು ಸ್ಮರಿಸಬೇಕೆಂದರು.

ಹೆಚ್.ಕೆ.ವೀರಣ್ಣಗೌಡ, ಮಂಚೇಗೌಡ, ಜಿ. ಮಾದೇಗೌಡ, ಎಂ.ಎಸ್.ಸಿದ್ದರಾಜು ಸೇರಿದಂತೆ ಹಲವು ನಾಯಕರು ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದು ಬಣ್ಣಿಸಿದ ಅವರು ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಕ್ಷೇತ್ರದಲ್ಲೂ ವಿಶೇಷವಾಗಿ ಮದ್ದೂರು ಪ್ರಸಿದ್ಧಿ ಪಡೆದಿರುವುದು ಸಂತಸ ತಂದಿದೆ ಎಂದರು. ಕ್ಷೇತ್ರದ ಮತದಾರರು ತಮಗೆ ದೊಡ್ಡ ಜವಾಬ್ದಾರಿ ನೀಡಿದ್ದು, ಸಮಾಜ ಸೇವೆ ಜೊತೆಗೆ ತಾವು ಶಾಸಕ ರಾಗೂ ಕ್ಷೇತ್ರದ ಅಭಿವೃದ್ಧಿಗೆ ಹಗಲಿರುಳು ಶ್ರಮಿಸ ಲಿದ್ದು, ಮದ್ದೂರು ತಾಲೂಕನ್ನು ಮಾದರಿ ಕ್ಷೇತ್ರವನ್ನಾಗಿಸುವ ಗುರಿ ಹೊಂದಿರುವುದಾಗಿ ತಿಳಿಸಿದರು. ಸಾರ್ವಜನಿಕರ ಹಿತದೃಷ್ಟಿಯಿಂದ ಪಟ್ಟಣದ ತಾಲೂಕು ಕಚೇರಿಯಲ್ಲಿ ಮುಂದಿನ ವಾರ ಶಾಸಕರ ಕಚೇರಿ ತೆರೆಯಲಿದ್ದು, ಕೆ.ಎಂ.ಉದಯ್ ಚಾರಿಟಬಲ್ ಟ್ರಸ್ಟ್ ಕಚೇರಿಯಲ್ಲಿ ಲಭ್ಯವಿರುವ ತಾವು ಎರಡೂ ಕಡೆಗಳಲ್ಲಿಯೂ ಕ್ಷೇತ್ರದ ಜನರ ಕೆಲಸ ಕಾರ್ಯಗಳಿಗೆ ಸ್ಪಂದಿಸುವ ಆಶ್ವಾಸನೆ ನೀಡಿದರು.

ಕ್ಷೇತ್ರದ ಪ್ರತಿ ಗ್ರಾಮಗಳಿಗೂ ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಸಮಸ್ಯೆಗಳಿಗೆ ಪರಿಹಾರ ನೀಡುವ ಜೊತೆಗೆ ಕುಡಿಯುವ ನೀರು, ಶಿಕ್ಷಣ, ನೀರಾವರಿ, ಮತ್ತಿತರ ಮೂಲ ಸೌಕರ್ಯಗಳಿಗೆ ಒತ್ತು ನೀಡುವುದಾಗಿ ತಿಳಿಸಿದರು. ಕೆಪಿಸಿಸಿ ವಕ್ತಾರ ಟಿ.ಎಸ್. ಸತ್ಯಾನಂದ, ಜಿಪಂ ಮಾಜಿ ಅಧ್ಯಕ್ಷ ಕೆ.ಬಸವರಾಜು, ಮಾಜಿ ಸದಸ್ಯ ರಾಜೀವ್, ಕಿಸಾನ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಆರ್. ಮೋಹನ್‌ಕುಮಾರ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ರಾಮಕೃಷ್ಣ, ಹೊಂಬಯ್ಯ, ಪುರಸಭೆ ಮಾಜಿ ಉಪಾಧ್ಯಕ್ಷ ಮನ್ಸೂರ್ ಖಾನ್ ಮಾತನಾಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕದಲೂರು ರಾಮಕೃಷ್ಣ, ಶಿವಲಿಂಗೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ಡಿ.ಮಹಾಲಿಂಗಯ್ಯ, ತಾಪಂ ಮಾಜಿ ಸದಸ್ಯ ಚಲುವರಾಜು, ಸೋಮನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಸಿ.ಟಿ.ಶಂಕರ್, ಮುಖಂಡರಾದ ಪುಟ್ಟಸ್ವಾಮಿ, ತೈಲೂರು ರಘು, ಟಿ.ಲಿಂಗಯ್ಯ ಇತರರಿದ್ದರು.

ದಡಾರ–ರುಬೆಲ್ಲಾ ಕಾಯಿಲೆಯಿಂದ ಜಿಲ್ಲೆ ಮುಕ್ತಗೊಳಿಸಿ: ಎಡಿಸಿ ನಾಗರಾಜ್



ಮಂಡ್ಯ, ಮೇ 22– ಜಿಲ್ಲೆಯನ್ನು ದಡಾರ–ರುಬೆಲ್ಲಾ ಕಾಯಿಲೆಯಿಂದ ಮುಕ್ತಗೊಳಿಸಲು ಜಿಲ್ಲೆಯ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಸಾರ್ವಜನಿಕರು ಜಿಲ್ಲಾಡಳಿತ ಹಾಗೂ ಆರೋಗ್ಯ ಇಲಾಖೆ ಯೊಂದಿಗೆ ಸಹಕರಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗಾರಾಜು ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ದಡಾರ– ರುಬೆಲ್ಲಾ ನಿರ್ಮೂಲನೆ 2023ರ ಜಿಲ್ಲಾ ಮಟ್ಟದ ಕಾರ್ಯಪಡೆ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದಡಾರ–ರುಬೆಲ್ಲಾ ಕಾಯಿಲೆಯನ್ನು ದೇಶ, ರಾಜ್ಯ ಹಾಗೂ ಜಿಲ್ಲೆಯಿಂದ ನಿರ್ಮೂಲನೆ ಮಾಡಲು ಸಾರ್ವಜನಿಕರು ಆರೋಗ್ಯ ಇಲಾಖೆಯೊಂದಿಗೆ ಸಹಕರಿಸಿದರೆ ದೇಶವನ್ನು ದಡಾರ–ರುಬೆಲ್ಲಾ ಕಾಯಿಲೆಯಿಂದ ಮುಕ್ತ ಮಾಡ ಬಹುದು ಎಂದರು. ಜಿಲ್ಲೆಯಲ್ಲಿ 14 ದಡಾರ–ರುಬೆಲ್ಲಾ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಈ ಕಾಯಿಲೆ ಹೆಚ್ಚಾಗಿ 5 ವರ್ಷದೊಳಗಿನ ಮಕ್ಕಳಲ್ಲಿ ಕಂಡು ಬರುತ್ತದೆ. ಮಕ್ಕಳ ಮುಖ, ಹೊಟ್ಟೆ ಹಾಗೂ ತೆಳುವಾದ ಜಾಗದಲ್ಲಿ ಗುಳ್ಳೆಗಳ ಜೊತೆಗೆ ಜ್ವರದ ಲಕ್ಷಣ ಕಂಡು ಬರುತ್ತದೆ. ಈ ಲಕ್ಷಣಗಳು ಕಂಡು ಬಂದಲ್ಲಿ ಹತ್ತಿರದ ವೈದ್ಯರ ಸಲಹೆ ಪಡೆದುಕೊಳ್ಳಿ ಎಂದು ಸಲಹೆ ನೀಡಿದರು.

ಅಧಿಕಾರಿಗಳು ಈ ಬಗ್ಗೆ ಸಾರ್ವಜನಿಕರಿಗೆ ಹೆಚ್ಚಿನ ಅರಿವು ಮೂಡಿಸಬೇಕು. ಕಾಯಿಲೆ ಲಕ್ಷಣ ಕಂಡು ಬಂದರೆ ತಕ್ಷಣ ಸ್ಥಳೀಯ ವೈದ್ಯರ ಸಲಹೆ ಪಡೆದು ಚಿಕಿತ್ಸೆ ಪಡೆದುಕೊಳ್ಳಬೇಕು. ಸರ್ಕಾರದಿಂದಲೇ ಸಂಪೂರ್ಣ ಉಚಿತ ಚಿಕಿತ್ಸೆ ನೀಡಲಾಗುವುದು ಎಂದರು.

ಜಿಲ್ಲೆಯ ರಕ್ತ ನಿಧಿಯಲ್ಲಿ ಶೇ.56ರಷ್ಟು ರಕ್ತ ಚಿಕಿತ್ಸೆ ಸಂದರ್ಭ ಸಿಗುತ್ತಿದೆ. ಇನ್ನುಳಿದ ಶೇಕಡವಾರು ರಕ್ತವನ್ನು ಬೇರೆ ಜಿಲ್ಲೆಯಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ರಕ್ತದ ನಿಧಿಯಲ್ಲಿ ರಕ್ತದ ಕೊರತೆ ತಪ್ಪಿಸಲು ಜಿಲ್ಲೆಯ 7 ತಾಲೂಕಿನಲ್ಲಿ ಜೂ.7 ರಿಂದ 14 ರವರೆಗೆ ರಕ್ತದಾನಿಗಳ ದಿನವನ್ನು ಅರ್ಥ ಪೂರ್ಣವಾಗಿ ಆಚರಿಸಲಾಗುವುದು ಎಂದರು.

ಜಿಲ್ಲೆಯ 3 ರಕ್ತನಿಧಿ ಕೇಂದ್ರಗಳಲ್ಲಿ ಸುರಕ್ಷಿತವಾಗಿ ರಕ್ತ ಸಂಗ್ರಹಿಸಿಟ್ಟುಕೊಂಡು ಅವಶ್ಯಕತೆ ಇರುವ ರೋಗಿಗೆ ರಕ್ತವನ್ನು ಉಚಿತವಾಗಿ ಕೊಡುವ ವ್ಯವಸ್ಥೆ ಮಾಡಬೇಕು ಎಂದರು.

ಸಭೆಯಲ್ಲಿ ಜಿಪಂ ಉಪಕಾರ್ಯದರ್ಶಿ ಎಂ.ಬಾಬು, ನಿವೃತ್ತ ಆರೋಗ್ಯಾಧಿಕಾರಿ ಟಿ.ಎನ್.ಮರೀಗೌಡ, ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಎಂ.ಎನ್. ಆಶಾಲತಾ, ಮಾನಸಿಕ ರೋಗ ತಜ್ಞ ಡಾ.ಕೆ.ಪಿ. ಅಶ್ವಥ್, ಕುಟುಂಬ ಕಲ್ಯಾಣಾಧಿಕಾರಿ ಡಾ. ಕೆ.ಆರ್. ಶಶಿಧರ್, ಆರ್.ಸಿ.ಹೆಚ್ ಅಧಿಕಾರಿ ಡಾ.ಅನಿಲ್ ಕುಮಾರ್, ಜಿಲ್ಲಾ ಮೇಲ್ವಿಚಾರಕ ವಿನಯ್ ಹಾಜರಿದ್ದರು.

ಸೋಲಾರ್ ಪಿಲ್ಲರ್‌ಗೆ ಬೈಕ್ ಡಿಕ್ಕಿ: ಓರ್ವ ಸಾವು

ಮದ್ದೂರು, ಮೇ 22– ರಸ್ತೆ ಬದಿಯ ಸೋಲಾರ್ ಪಿಲ್ಲರ್‌ಗೆ ದ್ವಿಚಕ್ರ ವಾಹನ ಡಿಕ್ಕಿ ಹೊಡೆದ ಪರಿಣಾಮ ಸವಾರ ಮೃತಪಟ್ಟು ಇಬ್ಬರು ತೀವ್ರ ಗಾಯಗೊಂಡಿರುವ ಘಟನೆ ತಾಲೂಕಿನ ನಿಡಘಟ್ಟ ಬಳಿ ಭಾನುವಾರ ರಾತ್ರಿ ನಡೆದಿದೆ. ಬೆಂಗಳೂರಿನ ಬನಶಂಕರಿ ನಿವಾಸಿ ಆನಂದ್ ಅವರ ಪುತ್ರ ಗೋವಿಂದ ರಾಜು (22) ಮೃತಪಟ್ಟವರು. ಕತ್ರಿಗುಪ್ಪೆ ನಿವಾಸಿ ರವಿಕುಮಾರ್ ಹಾಗೂ ಹರ್ಷ ತೀವ್ರವಾಗಿ ಗಾಯಗೊಂಡಿದ್ದಾರೆ. ಮೃತ ಗೋವಿಂದ ರಾಜು ಅವರ ದ್ವಿಚಕ್ರ ವಾಹನದಲ್ಲಿ ಸ್ನೇಹಿತರಾದ ರವಿಕುಮಾರ್ ಹಾಗೂ ಹರ್ಷ ಮೈಸೂರು–ಬೆಂಗಳೂರು ಹೆದ್ದಾರಿ ಯಲ್ಲಿ ತೆರಳುತ್ತಿದ್ದ ವೇಳೆ ನಿಯಂತ್ರಣ ತಪ್ಪಿದ ಬೈಕ್ ರಸ್ತೆಬದಿ ಅಳವಡಿಸಿದ್ದ ಸೋಲಾರ್ ಪಿಲ್ಲರ್‌ಗೆ ಡಿಕ್ಕಿ ಹೊಡೆದು ಈ ದುರ್ಘಟನೆ ಸಂಭವಿಸಿದೆ. ತೀವ್ರ ಗಾಯಗೊಂಡ ಗೋವಿಂದ ರಾಜು ಅವರು ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ಕರೆದೊಯ್ಯುತ್ತಿದ್ದ ಮಾರ್ಗಮಧ್ಯೆ ಮೃತಪಟ್ಟಿದ್ದು, ಇಬ್ಬರು ತೀವ್ರವಾಗಿ ಗಾಯ ಗೊಂಡು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ. ಈ ಸಂಬಂಧ ಮದ್ದೂರು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೂತನ ಡಿಜಿ–ಐಜಿಪಿ ಅಲೋಕ್ ಮೋಹನ್ ಅಧಿಕಾರ ಸ್ವೀಕಾರ



ಬೆಂಗಳೂರು, ಮೇ 22– ರಾಜ್ಯದ ನೂತನ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಡಾ. ಅಲೋಕ್ ಮೋಹನ್ ಅವರು ಸೋಮವಾರ ಅಧಿಕಾರ ಸ್ವೀಕರಿಸಿದರು. ಈ ಹಿಂದಿನ ಡಿಜಿ–ಐಜಿಪಿ ಪ್ರವೀಣ್ ಸೂದ್ ಅವರು ಅಲೋಕ್ ಮೋಹನ್ ಅವರಿಗೆ ಬ್ಯಾಟನ್ ನೀಡುವ ಮೂಲಕ ಅಧಿಕಾರ ಹಸ್ತಾಂತರಿಸಿದರು.

ಬಿಹಾರ ಮೂಲದ ಡಾ.ಅಲೋಕ್ ಮೋಹನ್ ಅವರು ರಾಜ್ಯದ ಹಿರಿಯ ಐಪಿಎಸ್ ಅಧಿಕಾರಿಯಾಗಿದ್ದಾರೆ. 1987ನೇ ಬ್ಯಾಚ್‌ನ ಕರ್ನಾಟಕ ಕೇಡರ್ ಐಪಿಎಸ್ ಅಧಿಕಾರಿಯಾದ ಇವರು 36 ವರ್ಷ ಸೇವೆ ಸಲ್ಲಿಸಿದ್ದಾರೆ. ಅಗ್ನಿಶಾಮಕದಳ ಹಾಗೂ ತುರ್ತು ಸೇವೆಗಳ ಡಿಜಿಪಿಯಾಗಿ ಸೇವೆ ಸಲ್ಲಿಸಿದ್ದ ಇವರು, ಈ ಹಿಂದೆ ಕಾರಾಗೃಹ ಇಲಾಖೆ ಡಿಜಿಪಿ, ಬೆಂಗಳೂರು ನಗರ ಅಪರಾಧ ವಿಭಾಗದ ಜಂಟಿ ಆಯುಕ್ತರಾಗಿ ಕರ್ತವ್ಯ ನಿರ್ವಹಿಸಿದ್ದರು. ಹಾಗೆಯೇ ಎಸಿಬಿ ಎಡಿಜಿಪಿ ಸೇರಿ ಹಲವು ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅಲೋಕ್ ಮೋಹನ್ ಅವರು 2025ರ ಏಪ್ರಿಲ್‌ನಲ್ಲಿ ನಿವೃತ್ತರಾಗಲಿದ್ದಾರೆ. ಡಿಜಿ–ಐಜಿಪಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮಾತನಾಡಿದ ಡಾ.ಅಲೋಕ್ ಮೋಹನ್ ಅವರು, ಡಿಜಿ–ಐಜಿಪಿ ಆಗಿ ಅಧಿಕಾರ ಸ್ವೀಕರಿಸಿದ್ದೇನೆ. ನನ್ನನ್ನು ಈ ಹುದ್ದೆಗೆ ಪರಿಗಣಿಸಿದ ಕರ್ನಾಟಕ ಸರ್ಕಾರಕ್ಕೆ ಧನ್ಯವಾದಗಳು. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಉತ್ತಮವಾಗಿದೆ. ಇದೇ ನಮಗೆ ನಮ್ಮ ಮೊದಲ ಆದ್ಯತೆ. ಮಹಿಳೆ ಮತ್ತು ಮಕ್ಕಳ ಸುರಕ್ಷತೆ, ಸೈಬರ್ ಕ್ರೈಂ ಪ್ರಕರಣಗಳಿಗೆ ಕಡಿವಾಣಕ್ಕೆ ಒತ್ತು ನೀಡಲಾಗುತ್ತದೆ ಎಂದು ತಿಳಿಸಿದರು.

ಪೊಲೀಸರು ಠಾಣೆಗೆ ಬರುವ ಎಲ್ಲ ದೂರುಗಳನ್ನು ಸ್ವೀಕರಿಸಬೇಕು. ನಮ್ಮ ಪೊಲೀಸರಿಗೆ ಮತ್ತಷ್ಟು ಹೆಚ್ಚಿನ ಟೆಕ್ನಿಕಲ್ ಟ್ರೈನಿಂಗ್ ನೀಡಲಾಗುವುದು. ಟ್ರಾಫಿಕ್ ಮ್ಯಾನೇಜ್ಮೆಂಟ್ ಕೂಡ ಮುಖ್ಯವಾಗುತ್ತದೆ. ಸಂಚಾರ ದಟ್ಟಣೆ ಆಗದಂತೆ ಗಮನ ನೀಡಲಿದ್ದೇವೆ. ಯಾವುದೇ ಕಾರಣಕ್ಕೂ ಸಂಘಟಿತ ಅಪರಾಧ ಸಹಿಸುವುದಿಲ್ಲ. ಮಾದಕ ವಸ್ತುಗಳ ಸಾಗಣೆ ಸಂಪೂರ್ಣವಾಗಿ ನಿರ್ಬಂಧಿಸುವುದು ನಮ್ಮ ಗುರಿ. ಮಾನವ ಹಕ್ಕುಗಳನ್ನು ಗೌರವಿಸಿ, ಜನರಿಗೆ ಅರಿವು ಮೂಡಿಸುತ್ತೇವೆ ಎಂದು ಹೇಳಿದರು.

ಸಿಬಿಐ ನಿರ್ದೇಶಕರಾಗಿ ಪ್ರವೀಣ್ ಸೂದ್: ಈ ಹಿಂದೆ ರಾಜ್ಯದ ಡಿಜಿಪಿಯಾಗಿದ್ದ ಪ್ರವೀಣ್‌ಸೂದ್ ಅವರನ್ನು ಸಿಬಿಐ ನಿರ್ದೇಶಕರನ್ನಾಗಿ ನೇಮಕ ಮಾಡಿರುವ ಹಿನ್ನೆಲೆಯಲ್ಲಿ ಖಾಲಿಯಾದ ಹುದ್ದೆಗೆ ಅಲೋಕ್ ಮೋಹನ್ ಅವರನ್ನು ನೇಮಿಸಲಾಗಿದೆ.

ಕೇಂದ್ರೀಯ ತನಿಖಾ ಮಂಡಳಿಯ ನಿರ್ದೇಶಕರಾಗಿ ನೇಮಕಗೊಂಡಿರುವ ಪ್ರವೀಣ್ ಸೂದ್ ಅವರನ್ನು ರಾಜ್ಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ವಿಭಾಗ ರಾಜ್ಯ ಸೇವೆಯಿಂದ ಮೇ 22ರಿಂದ ಅನ್ವಯವಾಗುವಂತೆ ತೆರವುಗೊಳಿಸಿದೆ. ಹೀಗಾಗಿ ಈ ಹುದ್ದೆಗೆ ಡಾ.ಅಲೋಕ್ ಮೋಹನ್ ಅವರನ್ನು ನೇಮಿಸಲಾಗಿದೆ. ಇದೇ ವೇಳೆ ನಿರ್ಗಮಿತ ಡಿಜಿ–ಐಜಿಪಿ ಪ್ರವೀಣ್ ಸೂದ್ ಅವರು ರಾಜ್ಯದ ಜನತೆ ಹಾಗೂ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗಕ್ಕೆ ಧನ್ಯವಾದ ಅರ್ಪಿಸಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 23 ಮೇ 2023

ಪೊನ್ನಣ್ಣ, ಡಾ. ಮಂಥರ್‌ಗೌಡ ಕಾವೇರಿ ಮಾತೆ ಹೆಸರಿನಲ್ಲಿ ಶಾಸಕರಾಗಿ ಪ್ರಮಾಣವಚನ ಸ್ವೀಕಾರ




ಮಡಿಕೇರಿ, ಮೇ 22– ಕೊಡಗು ಜಿಲ್ಲೆಯ ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂಥರ್ ಗೌಡ ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅವರು ಸೋಮವಾರ ವಿಧಾನ ಸೌಧದಲ್ಲಿ ಶಾಸಕರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಹಂಗಾಮಿ ಸಭಾಪತಿ ಆರ್.ವಿ.ದೇಶ ಪಾಂಡೆ ಅವರ ಅಧ್ಯಕ್ಷತೆಯಲ್ಲಿ ನಡೆದ 16ನೇ ವಿಧಾನಸಭಾದ ಪ್ರಥಮ ಅಧಿವೇಶನದಲ್ಲಿ ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಅವರು ಕೊಡಗಿನ 'ಕುಲದೇವತೆ ಮಾತೆ ಕಾವೇರಿ' ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರೆ, ವಿಧಾನಸಭಾ ಸದಸ್ಯರಾಗಿ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್. ಪೊನ್ನಣ್ಣ ಅವರು ಕೊಡಗಿನ 'ಕುಲದೇವಿ ಕಾವೇರಮ್ಮನ' ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಎ.ಎಸ್.ಪೊನ್ನಣ್ಣ ಅವರು ವಿಧಾನಸಭಾ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದ ಸಂಭ್ರಮದ ಕ್ಷಣಗಳಿಗೆ ಸಾಕ್ಷಿಯಾದ ಅವರ ಸಹೋದರ ನರೇನ್ ಕಾರ್ಯಪ್ಪ ಅವರು ಸಂತಸ ವ್ಯಕ್ತಪಡಿಸಿದರು.


ಕಳೆದ 20–25 ವರ್ಷಗಳಿಂದ ಬಿಜೆಪಿಯ ಭದ್ರಕೋಟೆ ಎಂದೇ ಬಿಂಬಿತವಾಗಿದ್ದ ಕೊಡಗಿನ ಎರಡು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಪಕ್ಷ ಜಯಭೇರಿ ಬಾರಿಸಿದೆ. ಮಡಿಕೇರಿ ಕ್ಷೇತ್ರದಿಂದ ಬಿಜೆಪಿಯ ಅಪ್ಪಚ್ಚು ರಂಜನ್ ಅವರ ವಿರುದ್ಧ ಡಾ.ಮಂತರ್‌ಗೌಡ ಹಾಗೂ ವಿರಾಜಪೇಟೆ ಕ್ಷೇತ್ರದಿಂದ ಕೆ.ಜಿ. ಬೋಪಯ್ಯ ಅವರ ವಿರುದ್ಧ ಎ.ಎಸ್.ಪೊನ್ನಣ್ಣ ಅವರು ಗೆಲುವು ಸಾಧಿಸುವ ಮೂಲಕ ಪ್ರಥಮ ಬಾರಿಗೆ ವಿಧಾನಸಭೆಯನ್ನು ಪ್ರವೇಶಿಸಿದ್ದಾರೆ.

ಹಾಲಿಗಳನ್ನೇ ಮಣಿಸಿದರು: ಬಿಜೆಪಿಯ ಭದ್ರಕೋಟೆ ಎನಿಸಿಕೊಂಡಿದ್ದ ಕೊಡಗಿನಲ್ಲಿ ಹಾಲಿ ಪ್ರಭಾವಿ ಶಾಸಕರನ್ನೇ ಚುನಾವಣೆಯಲ್ಲಿ ಮಣಿಸಿದ ಕೀರ್ತಿ ಕಾಂಗ್ರೆಸ್‌ನ ನೂತನ ಶಾಸಕರದ್ದಾಗಿದೆ. ಮೇ.13 ರಂದು ನಡೆದ ಮತ ಎಣಿಕೆಯಲ್ಲಿ ಮಡಿಕೇರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಾ. ಮಂಥರ್ ಗೌಡ ಅವರು 84,879 ಮತಗಳನ್ನು ಪಡೆದು ಗೆಲುವು ಸಾಧಿಸಿದ್ದರೆ, ಇವರ ಪ್ರತಿಸ್ಪರ್ಧಿ 5 ಬಾರಿಯ ಬಿಜೆಪಿ ಶಾಸಕ ಎಂ.ಪಿ. ಅಪ್ಪಚ್ಚು ರಂಜನ್ ಅವರು ತೀವ್ರ ಪೈಪೋಟಿ ನೀಡಿ 80,477 ಮತಗಳನ್ನು ಪಡೆದುಕೊಂಡು 4,402 ಮತಗಳಿಂದ ಪರಾಭವಗೊಂಡಿದ್ದರು. ವಿರಾಜಪೇಟೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಅವರು 83,791 ಮತಗಳನ್ನು ಪಡೆದು ಗೆಲುವು ಸಾಧಿಸಿದರೆ, ಸಮೀಪದ ಪ್ರತಿಸ್ಪರ್ಧಿ 4 ಬಾರಿಯ ಶಾಸಕ, ಬಿಜೆಪಿಯ ಕೆ.ಜಿ. ಬೋಪಯ್ಯ 79,500 ಮತಗಳನ್ನು ಪಡೆದು, 4291 ಮತಗಳ ಅಂತರದಿಂದ ಪರಾಭವಗೊಳಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಕೊಡವರ ಲೋಗೋ ಅಧಿಕೃತ 'ಟ್ರೇಡ್ ಮಾರ್ಕ್'

ಕೊಡವರು, 21 ಸಮುದಾಯಗಳು ಮಾತ್ರ ಬಳಸಲು ಅವಕಾಶ

● ದುರುಪಯೋಗ ತಡೆಯಲು ಕೊಡವಾಮೆರ ಕೊಂಡಾಟ ಸಂಸ್ಥೆಯಿಂದ ನೊಂದಣಿ ● 10 ವರ್ಷಗಳಿಗೊಮ್ಮೆ ಲೋಗೋ ನವೀಕರಣ



ಲೋಗೋ ಅಧಿಕೃತ ಸ್ಥಾನಮಾನ ಪಡೆದಿರುವ ನೋಂದಣಿ ಪತ್ರವನ್ನು ಕೊಡವಾಮೆರ ಕೊಂಡಾಟ ಸಂಘಟನೆಯ ಸ್ಥಾಪಕಾಧ್ಯಕ್ಷ ಚಾಮೇರ ದಿನೇಶ್ ನಾಣಯ್ಯ ಅವರು ಮುಂಬೈ ಟ್ರೇಡ್ ಮಾರ್ಕ್ ಕಚೇರಿ ಮುಖ್ಯಸ್ಥರಿಂದ ಪಡೆದುಕೊಳ್ಳುತ್ತಿರುವುದು.

"ಕೊಡವ ಮತ್ತು ಕೊಡವ ಭಾಷಿಕ ಸಮುದಾಯಗಳ ಸಾಂಪ್ರದಾಯಿಕ ಲೋಗೋವನ್ನು ಕೊಡವಾಮೆರ ಕೊಂಡಾಟ ಸಂಘಟನೆ ರಚಿಸಿದೆ. ಈ ಲೋಗೋ ಕೊಡವ ಹಾಗೂ ಕೊಡವ ಭಾಷಿಕರ ಧಾರ್ಮಿಕ ಮತ್ತು ಭಾವನಾತ್ಮಕ ಸಂಬಂಧವನ್ನು ಹೊಂದಿದೆ. ಗಡಿ ಭಾಗಗಳಲ್ಲಿ ಸಾಗುವ ವಾಹನಗಳಲ್ಲಿ ಈ ಲೋಗೋವನ್ನು ಬಳಸಿಕೊಂಡು ಅತಿಯಾದ ಕಾನೂನು ಬಾಹಿರ ಕೃತ್ಯ ನಡೆಯುತ್ತಿತ್ತು. ಇದರಿಂದ ಕೊಡವ ಮತ್ತು ಕೊಡವ ಭಾಷಿಕ ಸಮುದಾಯಗಳಿಗೆ ನೋವುಂಟು ಮಾಡುತ್ತಿತ್ತು. ಈ ಹಿನ್ನೆಲೆಯಲ್ಲಿ ಈ ಲೋಗೋವನ್ನು ಅಧಿಕೃತ ಟ್ರೇಡ್ ಮಾರ್ಕ್ ನೋಂದಣಿ ಮಾಡಲಾಗಿದೆ. 2020ರಲ್ಲಿ ಇದಕ್ಕಾಗಿ ಅರ್ಜಿ ಸಲ್ಲಿಸಲಾಗಿತ್ತಾಗಿದ್ದರೂ, ಎಲ್ಲಾ ವಿಚಾರಗಳ ಪರಿಶೀಲನೆ ಬಳಿಕ ಟ್ರೇಡ್ ಮಾರ್ಕ್ ಮುದ್ರೆ ಲಭಿಸಿದೆ.

-ಚಾಮೇರ ದಿನೇಶ್ ಬೆಳ್ಯಪ್ಪ
ಸ್ಥಾಪಕಾಧ್ಯಕ್ಷ, ಕೊಡವಾಮೆರ ಕೊಂಡಾಟ

ಯಾರು ಯಾರಿಗೆ ಬಳಸಲು ಅವಕಾಶ

ಕೊಡವರ ಸಹಿತ ಈ ಲೋಗೋವನ್ನು ಕೊಡವ ಭಾಷಿಕ ಸಮುದಾಯಗಳಾದ ಅಮ್ಮ ಕೊಡವರು, ಐರಿ, ಬಣ್ಣ, ಬನಿಯ, ಬೂಣೆಪಟ್ಟ, ಗೊಲ್ಲ, ಕೊಡವ ಹೆಗ್ಗಡೆ, ಕಣಿಯ, ಕಾಪಾಳ, ಕೆಂಬಟ್ಟಿ, ಕೋಲೆಯ, ಕೊಯುವ, ಕೊಡವ ಸವಿತಾ ಸಮಾಜ, ಕೊಡವ ನಾಯರ್, ಪಣಿಕ, ಮರಂಗಿ, ಮಡಿವಾಳ, ಮಲೆಯ, ಮೇದ, ಮಲೆ ಕುಡಿಯ ಮತ್ತು ನಾಯಂಡ ಸಮುದಾಯಗಳು ಮಾತ್ರವೇ ಬಳಸಬಹುದಾಗಿದೆ.

ಮಡಿಕೇರಿ, ಮೇ 22– ಕೊಡವಾಮೆರ ಕೊಂಡಾಟ ಸಂಘಟನೆಯು ಕೊಡಗಿನ ಕೊಡವ ಜನಾಂಗ ಮತ್ತು ಅದರ 21 ಸಮುದಾಯಗಳ ಧಾರ್ಮಿಕ, ಸಾಂಪ್ರದಾಯಿಕ ಮತ್ತು ಪಾರಂಪರಿಕ ಸಂಕೇತವಾಗಿರುವ 'ಪೀಚೆಕತ್ತಿ,' 'ಒಡಿಕತ್ತಿ' ಮತ್ತು 'ಕೋವಿ' ಚಿಹ್ನೆಗಳನ್ನು ಒಳಗೊಂಡಿರುವ ಲೋಗೋವನ್ನು ಸರಕಾರದ ನಿಯಮದಂತೆ ಅಧಿಕೃತಗೊಳಿಸಿ 'ಟ್ರೇಡ್ ಮಾರ್ಕ್' ಪಡೆದುಕೊಂಡಿದೆ.

2023ರ ಮೇ 14ರಂದು ಭಾರತ ಸರಕಾರದ 'ಟ್ರೇಡ್ ಮಾರ್ಕ್ ಅಧಿನಿಯಮ 1999' ಅಡಿ ಈ ಲೋಗೋ ಇದೀಗ ಅಧಿಕೃತ ಸ್ಥಾನಮಾನ ಪಡೆದಿದ್ದು, ನೋಂದಣಿ ಪತ್ರವನ್ನು ಸಂಘಟನೆಯ ಸ್ಥಾಪಕಾಧ್ಯಕ್ಷ ಚಾಮೇರ ದಿನೇಶ್ ನಾಣಯ್ಯ ಅವರು ಮುಂಬೈ ಟ್ರೇಡ್ ಮಾರ್ಕ್ ಕಚೇರಿ ಮುಖ್ಯಸ್ಥರಿಂದ ಪಡೆದುಕೊಂಡಿದ್ದಾರೆ. ಹೀಗಾಗಿ ಇನ್ನು ಮುಂದೆ ಕೊಡವ ಮತ್ತು ಕೊಡವ ಭಾಷಿಕ 21 ಸಮುದಾಯಗಳನ್ನು ಹೊರತುಪಡಿಸಿ ಇನ್ಯಾರಿಗೂ ಈ ಲೋಗೋ ಬಳಸಲು ಕಾನೂನಿನಲ್ಲಿ ಅವಕಾಶವಿಲ್ಲ. ಇತರ ಜನಾಂಗ ಅಥವಾ ಸಮುದಾಯ ಈ ಅಧಿಕೃತ ಲೋಗೋವನ್ನು ಬಳಸಿದಲ್ಲಿ ಅದು ಕಾನೂನು ಬಾಹಿರವಾಗಲಿದೆ.

2020ರಲ್ಲಿ ಅರ್ಜಿ ಸಲ್ಲಿಕೆ: ಕೊಡಗಿನಲ್ಲಿ ಕಾರ್ಯಾಚರಿಸುತ್ತಿರುವ 'ಕೊಡವಾಮೆರ ಕೊಂಡಾಟ' ಸಂಘಟನೆ ಸಹಕಾರ ಸಂಘದ ಕಾಯಿದೆ ಅಡಿಯಲ್ಲಿ ನೋಂದಣಿಯಾದ ಸಂಘಟನೆಯಾಗಿದ್ದು, ಈ ಸಂಘಟನೆ ರಚಿಸಿದಂತಹ ಲೋಗೋವನ್ನು ಅಧಿಕೃತ ಲೋಗೋ ಎಂದು ಮುದ್ರಾಂಕಿತಗೊಳಿಸಲು 2020ರಲ್ಲಿ ಮುಂಬೈನಲ್ಲಿರುವ ಟ್ರೇಡ್ ಮಾರ್ಕ್ ನೋಂದಣಿ ಸಂಸ್ಥೆಗೆ ಅರ್ಜಿ ಸಲ್ಲಿಸಿತ್ತು. ಈ ಅರ್ಜಿಯನ್ನು ಪರಿಗಣಿಸಿದ್ದ ಸಂಸ್ಥೆ ಲೋಗೋದಲ್ಲಿರುವ ಚಿಹ್ನೆಗಳು, ಅವುಗಳಿಗೂ ಕೊಡವ ಮತ್ತು ಕೊಡವ ಭಾಷಿಕರಿಗೆ ಇರುವ ಸಾಂಪ್ರದಾಯಿಕ, ಭಾವನಾತ್ಮಕ, ಐತಿಹಾಸಿಕ ಸಂಬಂಧಗಳು ಮತ್ತು ಇತಿಹಾಸವನ್ನು ಕೂಲಂಕುಶವಾಗಿ ಪರಿಶೀಲನೆಗೆ ಒಳಪಡಿಸಿತ್ತು. ಈ ಎಲ್ಲಾ ವಿಷಯಗಳು ಸುದೀರ್ಘ ವಿಚಾರಣೆಗೆ ಒಳಪಟ್ಟು ಇದೀಗ ಲೋಗೋ ಅಧಿಕೃತ ಮುದ್ರೆ ಪಡೆದುಕೊಂಡಿದೆ. ಮಾತ್ರವಲ್ಲದೇ, ಈ ಲೋಗೋ ಪ್ರತಿ 10 ವರ್ಷಗಳಿಗೊಮ್ಮೆ ಟ್ರೇಡ್ ಮಾರ್ಕ್ ಅಧಿನಿಯಮದ ಪ್ರಕಾರ ನವೀಕರಣಗೊಳ್ಳಲಿದೆ.

ಪೊಲೀಸ್ ಇಲಾಖೆಗೆ ಪತ್ರ: ಪೀಚೆ ಕತ್ತಿ, ಒಡಿಕತ್ತಿ, ಕೋವಿಯನ್ನು ಹೊಂದಿರುವ 'ಲೋಗೋ' ಇದೀಗ ಒಂದು ಸಮುದಾಯ ಮತ್ತು ಅದರ ಉಪ ಪಂಗಡಗಳಿಗೆ ಮಾತ್ರವೇ ಸೀಮಿತವಾಗಿರುವುದರಿಂದ ಇದನ್ನು ಇನ್ನಾವುದೇ ಜನಾಂಗ ಅಥವಾ ಸಮುದಾಯ ಬಳಸದಂತೆ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಪೊಲೀಸ್ ಮಹಾ ನಿರ್ದೇಶಕರು, ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಕೊಡವಾಮೆರ ಕೊಂಡಾಟ ಸಂಘಟನೆ ಪತ್ರ ಬರೆದಿದೆ. ಬೇರೆಯವರು ಲೋಗೋವನ್ನು ಬಳಸುವ ಮೂಲಕ ದುರುಪಯೋಗಪಡಿಸುವುದನ್ನೂ ತಡೆಯಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ನಾಪೋಕ್ಲು ಸುತ್ತಮುತ್ತ ಭಾರೀ ಗಾಳಿ ಮಳೆ

ಮುರಿದ ಕೊಂಬೆಗಳು, ವಿದ್ಯುತ್ ಕಂಬಗಳು



ನಾಪೋಕ್ಲು, ಮೇ 22– ಪಟ್ಟಣದ ಸುತ್ತಮುತ್ತ ಭಾನುವಾರ ಸಂಜೆ ಗಾಳಿ ಮತ್ತು ಗುಡುಗು ಸಹಿತ ಮಳೆಯಾಗಿದೆ. ಮಳೆಯೊಂದಿಗೆ ಗಾಳಿಯು ಬೀಸಿದ್ದರಿಂದ ಅಲ್ಲಲ್ಲಿ ಮರದ ರೆಂಬೆಗಳು ಮುರಿದು ಬಿದ್ದಿದ್ದು ವಿದ್ಯುತ್ ಕಂಬಗಳು ತುಂಡಾಗಿವೆ.

ಸ್ಥಳೀಯ ಸರ್ಕಾರಿ ಪದವಿ ಕಾಲೇಜಿನ ರಸ್ತೆಗೆ ಮರ ಬಿದ್ದುದಲ್ಲದೆ ವಿದ್ಯುತ್ ಕಂಬಗಳು ತುಂಡಾಗಿವೆ. ಗ್ರಾಮೀಣ ಭಾಗದ ಹಲವೆಡೆ ವಿದ್ಯುತ್ ಕಂಬಗಳ ಮೇಲೆ ಮರ ಮುರಿದು ಬಿದ್ದ ಪರಿಣಾಮ ಕಂಬಗಳು ತುಂಡಾಗಿದ್ದು, ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶದಲ್ಲಿ ಬಿರುಸಿನ ಮಳೆಯಾಗಿದೆ.

ವಿಜೃಂಭಣೆಯ ಚಾಮುಂಡಿ ಕೋಲ ತೆರೆ

ವಿರಾಜಪೇಟೆ, ಮೇ.22– ಸಮೀಪದ ಬೇಟೋಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೆಗ್ಗಳ ಗ್ರಾಮದ ಅಚ್ಚಪಂಡ ಕುಟುಂಬದ ಗುರುಕಾರಣದ ಕೈಮಡದಲ್ಲಿ ಚಾಮುಂಡಿ (ಕೋಲ) ತೆರೆ ಮಹೋತ್ಸವವನ್ನು 2 ದಿನಗಳ ಕಾಲ ವಿಜೃಂಭಣೆಯಿಂದ ಆಚರಿಸಲಾಯಿತು. ಮೊದಲ ದಿನ ತೋತ ದೇವರು ಮೇಲೇರಿ ಇಡೋದು, ನಂತರ ರಾತ್ರಿ ಕುಟ್ಟಿಚಾತ, ಮಾದೇರಪ್ಪ ಹಾಗೂ ಇತರ ದೈವಗಳ ತೆರೆ ನಡೆಯಿತು. ಬಳಿಕ ಕುನ್ನಮ್ಮ ಚೌಂಡಿ, ಚಾಮುಂಡಿ ಮೇಲೇರಿ ಬೆಂಕಿ ಕೊಂಡಕ್ಕೆ ಬೀಳುವುದು. ಮರುದಿನ ಚಾಮುಂಡಿ, ಗುಳಿಗರಾಜ ಹಾಗೂ ಅಜ್ಜಪ್ಪ ದೇವ, ಕುನ್ನಮ್ಮ ಚೌಂಡಿ ಕೋಲದ ನಂತರ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ನಡೆಯಿತು.



ಬಳಿಕ ಅಜ್ಜಪ್ಪತೆರೆ, ಕುನ್ನಮ್ಮ ಚೌಂಡಿ, ಪೋಟ್ಟ ದೈವಗಳು ವಾದ್ಯಗೋಷ್ಠಿಯೊಂದಿಗೆ ಸಮೀಪದ ಹೆಗ್ಗಳ ಗ್ರಾಮದ ಶ್ರೀ ಅಯ್ಯಪ್ಪ ದೇವಸ್ಥಾನಕ್ಕೆ ತೆರಳಿ ನೃತ್ಯ ನಡೆಸಿ ಪೂಜೆ ಸಲ್ಲಿಸಲಾಯಿತು. ಈ ಸಂದರ್ಭ ಗ್ರಾಮಸ್ಥರಾದ ಅಚ್ಚಪಂಡ ಮಹೇಶ್ ಗಣಪತಿ ಅವರು ಮಾತನಾಡಿ, ಕೊರೊನಾ ಕಾರಣ ಎರಡು ವರ್ಷಗಳಿಂದ ಸರಳ ರೀತಿ ಹಬ್ಬವನ್ನು ಆಚರಿಸಲಾಗಿತ್ತು ಆದರೆ ಈ ವರ್ಷ ಗ್ರಾಮಸ್ಥರೆಲ್ಲ ಸೇರಿ ಎರಡು ದಿನಗಳ ಕಾಲ ಚಾಮುಂಡಿ ಕೋಲವನ್ನು ವಿಜೃಂಭಣೆಯಿಂದ ಆಚರಿಸುತ್ತಿರುವುದಾಗಿ ಹೇಳಿದರು. ತೆರೆ ಮಹೋತ್ಸವದಲ್ಲಿ ಊರುತಕ್ಕರಾದ ಅಚ್ಚಪಂಡ ಚೋಟು ಮುತ್ತಣ್ಣ, ದೇವತಕ್ಕರಾದ ಪೊರೇರ ಉಲ್ಲಾಸ್, ಮಾಜಿ ಅಧ್ಯಕ್ಷ ಅಚ್ಚಪಂಡ ಗಣೇಶ್, ಕಾರ್ಯದರ್ಶಿ ಎ.ಬೋಪಣ್ಣ, ಉಪಾಧ್ಯಕ್ಷ ಪೊರೇರ ಬಿದ್ದಪ್ಪ, ಅಚ್ಚಪಂಡ ಕುಟುಂಬದ ಅಧ್ಯಕ್ಷ ಕಟ್ಟಿ, ಅಚ್ಚಪಂಡ ಹಾಗೂ ಪೊರೇರ ಮತ್ತು ಇತರ ಕುಟುಂಬಸ್ತರು ಸೇರಿದಂತೆ ಗ್ರಾಮಸ್ಥರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಎರಡು ದಿನಗಳು ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಸರಣಿ ಕಳ್ಳತನ

ಕುಶಾಲನಗರ, ಮೇ 22– ಕುಶಾಲನಗರದ ಗುಂಡುರಾವ್ ಬಡಾವಣೆಯಲ್ಲಿ ಅಕ್ಕಪಕ್ಕದ ಎರಡು ಮನೆಗಳಲ್ಲಿ ಕಳ್ಳತನ ನಡೆದಿದೆ. ಮನೆಗಳಲ್ಲಿ ಯಾರೂ ಇಲ್ಲದ ಸಮಯ ಸಾಧಿಸಿ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ಲತಾ ಎಂಬವರ ಮನೆಯಿಂದ 5 ಗ್ರಾಂ ಚಿನ್ನದ ಆಭರಣ ಹಾಗೂ ಮಂಜು ಎಂಬುವರ ಮನೆಯಿಂದ 50 ಸಾವಿರ ರೂ. ನಗದು ಕಳ್ಳತನ ಮಾಡಿದ್ದು ಈ ಬಗ್ಗೆ ಕುಶಾಲನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬಸವೇಶ್ವರ ಬಡಾವಣೆಯಲ್ಲಿ ಒಂದು ಮನೆಗೆ ಕಳ್ಳರು ಲಗ್ಗೆಯಿಟ್ಟಿದ್ದು, ಮಾಲೀಕರು ಪರ ರಾಜ್ಯಕ್ಕೆ ತೆರಳಿದ್ದು ಬಂದ ನಂತರ ಕಳ್ಳತನ ಪ್ರಮಾಣದ ಬಗ್ಗೆ ಮಾಹಿತಿ ಲಭಿಸಲಿದೆ.

ನಾಪತ್ತೆಯಾಗಿದ್ದ ಮಹಿಳೆಯ ಕಾಲಿನ ತುಂಡು ಪತ್ತೆ

ಕೊಲೆಯೋ, ಹುಲಿ ದಾಳಿಗೆ ಬಲಿಯಾಗಿರುವುದೋ...?

ಗೋಣಿಕೊಪ್ಪ, ಮೇ 22– ನಾಪತ್ತೆಯಾಗಿದ್ದ ಕಾರ್ಮಿಕ ಮಹಿಳೆಯ ಕಾಲಿನ ತುಂಡು ತೋಟದಲ್ಲಿ ಪತ್ತೆಯಾಗಿದ್ದು, ಕೊಲೆಯೋ ಅಥವಾ ಹುಲಿ ದಾಳಿಗೆ ಬಲಿಯಾಗಿದ್ದಾರೋ ಎಂಬ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಬೆಳ್ಳೂರು ಗ್ರಾಮದಲ್ಲಿ ವಾಸವಿದ್ದ ಅಪ್ಪು ಅವರ ಪತ್ನಿ ಚೋಂದು (25) ಮೃತ ಮಹಿಳೆ. ಪತಿ ಅಪ್ಪು ಅವರನ್ನು ಶ್ರೀಮಂಗಲ ಪೊಲೀಸರು ವಿಚಾರಣೆ ನಡೆಸುತ್ತಿದ್ದು, ಸಾವಿಗೆ ನಿಖರ ಕಾರಣ ಇನ್ನೂ ತಿಳಿದು ಬಂದಿಲ್ಲ.

ಚೋಂದು ಮೇ 16 ರಿಂದ ಕಾಣೆಯಾಗಿದ್ದರು. ಮನೆಗೆ ಹಿಂತಿರುಗದ ಕಾರಣ ತೋಟದ ಮಾಲಿಕ ರಂಜಿ ಶನಿವಾರ ಕಾಣೆಯಾಗಿರುವ ಬಗ್ಗೆ ಶ್ರೀಮಂಗಲ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಭಾನುವಾರ ಗ್ರಾಮದ ಕಾಫಿ ತೋಟದಲ್ಲಿ ಬಲಗಾಲು ಪತ್ತೆಯಾಗಿದ್ದು, ಹಾಕಿದ್ದ ಬಟ್ಟೆಯ ತುಂಡು ಆಧರಿಸಿ ಚೋಂದು ಎಂದು ಗುರುತಿಸಲಾಗಿದೆ.

ದೇಹದ ಉಳಿದ ಭಾಗ ಏನಾಗಿದೆ ಎಂದು ಪರಿಶೀಲನೆ ನಡೆಸಲಾಗುತ್ತಿದೆ. ಕೊಲೆಯೋ ಅಥವಾ ಹುಲಿ ದಾಳಿಗೆ ಬಲಿಯಾಗಿದ್ದರೋ ಎಂಬುದು ತನಿಖೆಯಿಂದ ತಿಳಿದು ಬರಬೇಕಾಗಿದೆ. ನಾಪತ್ತೆಯಾಗಿ ಐದು ದಿನಗಳು ಕಳೆದಿರುವುದರಿಂದ ಪತ್ತೆ ಕಾರ್ಯಕ್ಕೆ ತೊಡಕ್ಕಾಗಿದೆ. ಈ ಬಗ್ಗೆ ಶ್ರೀಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಾಮರಾಜನಗರದಲ್ಲಿ ಅದ್ದೂರಿ ಬಸವ ಜಯಂತಿ ಆಚರಣೆ

● ಬಸವೇಶ್ವರರ ಪುತ್ಥಳಿ, ಭಾವಚಿತ್ರಗಳ ಮೆರವಣಿಗೆ ● ಸಿದ್ಧಮಲ್ಲೇಶ್ವರ ವಿರಕ್ತ ಮಠದ ದಾಸೋಹ ಭವನಕ್ಕೆ ಭೂಮಿಪೂಜೆ



ಚಾಮರಾಜನಗರ, ಮೇ 22– ಚಾಮರಾಜನಗರದಲ್ಲಿ ಸೋಮವಾರ ಅದ್ಧೂರಿಯಾಗಿ ಗ್ರಾಮಾಂತರ ಬಸವ ಜಯಂತಿಯನ್ನು ಆಚರಿಸಲಾಯಿತು.

ನಗರದ ಶ್ರೀ ಸಿದ್ದಮಲ್ಲೇಶ್ವರಸ್ವಾಮಿ ವಿರಕ್ತ ಮಠದ ಆವರಣದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಗ್ರಾಮಾಂತರ ಬಸವ ಜಯಂತಿ ಕಾರ್ಯಕ್ರಮದ ಅದ್ದೂರಿ ಮೆರವಣಿಗೆಗೆ ಚಾಲನೆ ನೀಡಿದರು. ನಂತರ ಮಠದ ಆವರಣದಲ್ಲಿ ದಾಸೋಹ ಭವನ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿದರು.

ಇದೇ ವೇಳೆ ಮಠದ ಮುಂಭಾಗ ಬೆಳ್ಳಿರಥದ ಮೇಲೆ ಕೂರಿಸಿದ್ದ ಬಸವೇಶ್ವರರ ಪುತ್ಥಳಿಗೆ ಸುತ್ತೂರು ಸ್ವಾಮೀಜಿಗಳು ಪುಷ್ಪ ನಮನ ಸಲ್ಲಿಸುವ ಮೂಲಕ ಮೆರವಣಿಗೆಗೆ ಅಧಿಕೃತವಾಗಿ ಚಾಲನೆ ನೀಡಿದರು.

ಮೆರವಣಿಗೆಯು ನಗರದ ಶ್ರೀಸಿದ್ದಮಲ್ಲೇಶ್ವರ ಸ್ವಾಮಿ ವಿರಕ್ತ ಮಠದಿಂದ ಆರಂಭಗೊಂಡು ಬಿ. ರಾಚಯ್ಯ ಜೋಡಿರಸ್ತೆ ಮೂಲಕ ಭುವನೇಶ್ವರಿ ವೃತ್ತ, ಡಿವಿಯೇಷನ್ ರಸ್ತೆ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಗುಂಡ್ಲುಪೇಟೆ ವೃತ್ತ, ದೊಡ್ಡಂಗಡಿ ಬೀದಿ, ಚಿಕ್ಕ ಅಂಗಡಿ ಬೀದಿ, ಸಂತೇಮರಹಳ್ಳಿ ವೃತ್ತದಿಂದ ಮತ್ತೆ ಡಿವಿಯೇಷನ್ ರಸ್ತೆ, ಬಿ. ರಾಚಯ್ಯ ರಸ್ತೆಯ ಮೂಲಕ ಮಠದ ಆವರಣಕ್ಕೆ ಬಂದು ತಲುಪಿತು.

ಕಲಾತಂಡಗಳ ವೈಭವ: ನಗರದಲ್ಲಿ ನಡೆದ ಗ್ರಾಮಾಂತರ ಬಸವ ಜಯಂತಿ ಮೆರವಣಿಯಲ್ಲಿ ತಾಲೂಕು ಸೇರಿದಂತೆ ವಿವಿಧೆಡೆಯಿಂದ ಜನಪದ ಕಲಾತಂಡಗಳು ಪಾಲ್ಗೊಂಡಿದ್ದವು. ಗಾರುಡಿಗೊಂಬೆ, ಡೊಳ್ಳು, ಕಂಸಾಳೆ, ವೀರಗಾಸೆ, ಗೊರವರ ಕುಣಿತ, ನಂದಿಧ್ವಜ, ಮಂಗಳವಾದ್ಯ, ಬ್ಯಾಂಡ್‌ಸೆಟ್ ಸೇರಿದಂತೆ 10ಕ್ಕೂ ಹೆಚ್ಚು ಜನಪದ ಕಲಾತಂಡಗಳ ಕಲಾವಿದರು ಮೆರವಣಿಗೆಯುದ್ದಕ್ಕೂ ತಮ್ಮ ಕಲೆ ಪ್ರದರ್ಶನ ಮಾಡುವ ಮೂಲಕ ಮೆರವಣಿಗೆಗೆ ಮೆರಗು ತಂದರು.

ಮೆರವಣಿಗೆಯಲ್ಲಿ 6ಕ್ಕೂ ಹೆಚ್ಚು ವಾಹನಗಳಲ್ಲಿ ಬಸವೇಶ್ವರರ ಭಾವಚಿತ್ರಗಳನ್ನು ಇಡಲಾಗಿತು. ಜೋಡೆತ್ತುಗಳೊಂದಿಗೆ ಕೆಲವರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ನೂರಾರು ಯುವಕರು ಬ್ಯಾಂಡ್‌ಸೆಟ್ ಸದ್ದಿಗೆ ಕುಣಿದು ಕುಪ್ಪಳಿಸಿದರು. ಬಸವೇಶ್ವರರ ಪರವಾಗಿ ಜಯಘೋಷಗಳನ್ನು ಕೂಗುವ ಮೂಲಕ ಸಂಭ್ರಮಿಸಿದರು.



ಸಾವಿರಾರು ಭಕ್ತರಿಗೆ ಅನ್ನದಾಸೋಹ: ಬಸವ ಜಯಂತಿ ಅಂಗವಾಗಿ ಸಿದ್ದಮಲ್ಲೇಶ್ವರಸ್ವಾಮಿ ವಿರಕ್ತ ಮಠದ ಆವರಣದಲ್ಲಿ ಸಾವಿರಾರು ಭಕ್ತರಿಗೆ ಸೋಮವಾರ ಬೆಳಗ್ಗೆ ತಿಂಡಿ ಹಾಗೂ ಮಧ್ಯಾಹ್ನ ಅನ್ನ ದಾಸೋಹ ಮಾಡಲಾಗಿತ್ತು. ಚಾಮರಾಜನಗರ ಸೇರಿದಂತೆ ಜಿಲ್ಲೆ ಹಾಗೂ ಹೊರ ಜಿಲ್ಲೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಜಯಂತ್ಯೋತ್ಸವದಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಹರವೆ ವಿರಕ್ತ ಮಠದ ಶ್ರೀ ಸರ್ಪಭೂಷಣ ಸ್ವಾಮೀಜಿ, ಮರಿಯಾಲ ಮಠದ ಶ್ರೀಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ, ನಗರದ ಸಿದ್ದಮಲ್ಲೇಶ್ವರಸ್ವಾಮಿ ವಿರಕ್ತ ಮಠದ ಶ್ರೀಚೆನ್ನಬಸವ ಸ್ವಾಮೀಜಿ ಸೇರಿದಂತೆ ಜಿಲ್ಲೆಯ ವಿವಿಧ ಮಠಗಳ ಮಠಾಧೀಶರು, ಮುಖಂಡರು ಪಾಲ್ಗೊಂಡಿದ್ದರು.



ಶರಣ ಶ್ರೀ ಕುಳುವ ನುಲಿಯ ಚಂದಯ್ಯನವರ ವಿಶೇಷ ಅಂಚೆ ಲಕೋಟೆ ಲೋಕಾರ್ಪಣೆ



ಚಾಮರಾಜನಗರ, ಮೇ 22– ಭಾರತೀಯ ಅಂಚೆ ಇಲಾಖೆ ಹೊರತಂದಿರುವ ಶರಣ ಶ್ರೀ ಕುಳುವ ನುಲಿಯ ಚಂದಯ್ಯನವರ ವಿಶೇಷ ಅಂಚೆ ಲಕೋಟೆಯನ್ನು ಲೋಕಾರ್ಪಣೆಗೊಳಿಸಲಾಯಿತು.

ಅಖಿಲ ಕರ್ನಾಟಕ ಕುಳುವ ಮಹಾ ಸಂಘ ಚಾಮರಾಜನಗರ ಜಿಲ್ಲಾ ಸಮಿತಿ ಸಹಯೋಗದೊಂದಿಗೆ ಮಲೆ ಮಹದೇಶ್ವರ ಬೆಟ್ಟದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ರಾಜೇಂದ್ರ ಕುಮಾರ್ ವಿಶೇಷ ಅಂಚೆ ಲಕೋಟೆಯನ್ನು ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಭಾರತ ಸರ್ಕಾರದ ಅಂಚೆ ಇಲಾಖೆಯು ನಾಡಿನ ಅತ್ಯುತ್ತಮ ಚಿಂತಕರು ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರರ ಲಕೋಟೆ ಗಳನ್ನು ಬಿಡುಗಡೆ ಮಾಡುತ್ತಿದ್ದು, ಅದೇ ರೀತಿ ವಚನ ದಾರ್ಶನಿಕರು ಹಾಗೂ 12 ಶತಮಾನದ ಶರಣ ಚಂದಯ್ಯನವರ ಜೀವನ ಮತ್ತು ಕಾಯಕ ತತ್ವಾದರ್ಶಗಳನ್ನು ಮುಂದಿನ ತಲೆಮಾರಿಗೆ ಪರಿಚಯಿಸುವುದರ ಮೂಲಕ ದೇಶದ ಜನತೆಗೆ ಕಾಯಕದ ಮಹತ್ವವನ್ನು ಮತ್ತು ಸಂದೇಶವನ್ನು ಸಾರುವ ಮೂಲಕ ಯುವಜನತೆಯ ನಿರುದ್ಯೋಗ ಮೂಲ ಸಮಸ್ಯೆಗೆ ಕಾಯಕವೇ ಪರಿಹಾರ ಎಂಬ ಸ್ಪಷ್ಟ ದಿಕ್ಕು ತೋರಿಸುತ್ತದೆ ಎಂದರು.

ಎಸ್‌ಸಿ–ಎಸ್‌ಟಿ ಅಲೆಮಾರಿ ವಿಮುಕ್ತ ಬುಡಕಟ್ಟು ಮಹಾಸಭಾ ರಾಜ್ಯ ಪ್ರಧಾನ ಕಾರ್ಯದರ್ಶಿ ಕಿರಣ್ ಕುಮಾರ್ ಕೊತ್ತಗೆರೆ, ನಂಜನಗೂಡು ವಿಭಾಗದ ಅಂಚೆ ಅಧೀಕ್ಷ ಹೆಚ್.ಸಿ ಸದಾನಂದ, ಅಖಿಲ ಕರ್ನಾಟಕ ಕುಳುವ ಮಹಾ ಸಂಘ ರಾಜ್ಯಾಧ್ಯಕ್ಷ ಶಿವಾನಂದ ಎಂ.ಭಜಂತ್ರಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಆದರ್ಶ್ ಯಲ್ಲಪ್ಪ, ಜಿಲ್ಲಾ ಧ್ಯಕ್ಷ ಮಾದೇಶ್, ಯುವ ಘಟಕದ ಅಧ್ಯಕ್ಷ ಜಿ.ಶಿವಕುಮಾರ್, ಪದಾಧಿಕಾರಿಗಳಾದ ಆನಂದ್ ಕುಮಾರ್ ಏಕಲವ್ಯ, ಭೀಮಪುತ್ರೀ ನಾಗಮ್ಮ, ಶ್ರೀ ವೆಂಕಟಾಚಲ, ವಿಜಯ್ ರಂಗಪ್ಪ, ವಕೀಲ ಮಹದೇವು, ಶ್ರೀನಿವಾಸ್ ಜಿನಕನಹಳ್ಳಿ ಮತ್ತಿತರರಿದ್ದರು.

ತೋಟಗಾರಿಕೆ ಇಲಾಖಾ ವತಿಯಿಂದ ತೆಂಗಿನ ಸಸಿಗಳ ಮಾರಾಟ

ಚಾಮರಾಜನಗರ, ಮೇ 22– ತೋಟಗಾರಿಕೆ ಇಲಾಖೆಯಿಂದ ತಾಲೂಕಿನ ಸುವರ್ಣಾವತಿ ತೋಟಗಾರಿಕೆ ಕ್ಷೇತ್ರದಲ್ಲಿ ಉತ್ತಮ ಗುಣಮಟ್ಟದ ತೆಂಗಿನ ಸಸಿಗಳನ್ನು ಇಲಾಖಾ ದರದಲ್ಲಿ 75 ರೂ. ಗಳಿಗೆ ರೈತರಿಗೆ ಮಾರಾಟ ಮಾಡಲಾಗುತ್ತದೆ. ಆಸಕ್ತ ರೈತರು ಸುವರ್ಣಾವತಿ ತೋಟಗಾರಿಕೆ ಕ್ಷೇತ್ರದ ನಾಗರಾಜು. ಕೆಎಸ್. ಮೊ.ಸಂ 7975515269, ರವಿಕುಮಾರ. ಎಸ್.ಆರ್ ಮೊ.ಸಂ 9380076380 ಅವರನ್ನು ಸಂಪರ್ಕಿಸಬಹುದು.

ಕೊಳ್ಳೇಗಾಲ ಸರ್ವಾಂಗೀಣ ಅಭಿವೃದ್ಧಿಗೆ ಬದ್ಧ

ಸಂತೇಮರಹಳ್ಳಿಯ ಕೃತಜ್ಞತಾ ಸಭೆಯಲ್ಲಿ ಎಆರ್‌ಕೆ ಅಭಯ



ಚಾಮರಾಜನಗರ, ಮೇ 22– ಸರ್ಕಾರದಿಂದ ವಿಶೇಷ ಅನುದಾನವನ್ನು ತಂದು ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸುವುದಾಗಿ ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ಭರವಸೆ ನೀಡಿದರು. ತಾಲೂಕಿನ ಸಂತೇಮರಹಳ್ಳಿ ಪ್ರವಾಸಿ ಮಂದಿರದಲ್ಲಿ ಭಾನುವಾರ ಸಂಜೆ ಭೇಟಿ ನೀಡಿ, ಕ್ಷೇತ್ರದ ಮತದಾರರು ಹಾಗೂ ಮುಖಂಡರಿಗೆ ಕೃತಜ್ಞತೆ ಸಲ್ಲಿಸಿ ಅವರು ಮಾತನಾಡಿದರು.

ಕೊಳ್ಳೇಗಾಲ ಕ್ಷೇತ್ರವು ಮೂರು ತಾಲೂಕುಗಳನ್ನು ಒಳಗೊಂಡಿದೆ. ಸಂತೇಮರಹಳ್ಳಿ ಭಾಗವು ಚಾಮರಾಜನಗರಕ್ಕೆ, ಯಳಂದೂರು ತಾಲೂಕು ಪೂರ್ಣ ಹಾಗೂ ಕೊಳ್ಳೇಗಾಲ ತಾಲೂಕು ಭಾಗಶಃ ಕ್ಷೇತ್ರಕ್ಕೆ ಸೇರಿಕೊಂಡಿದೆ. ಹೀಗಾಗಿ ಆಯಾ ಭಾಗದ ಜನರ ಸಮಸ್ಯೆಗಳನ್ನು ಆಲಿಸಲು ಹಾಗೂ ಕುಂದು ಕೊರತೆಯನ್ನು ಬಗೆಹರಿಸಲು ಪ್ರತಿವಾರ ಜನಸಂಪರ್ಕ ಸಭೆಗಳನ್ನು ನಡೆಸಿ, ಸ್ಥಳದಲ್ಲಿಯೇ ಸಮಸ್ಯೆಗಳಿಗೆ ಅಧಿಕಾರಿಗಳಿಂದ ಉತ್ತರ ಹಾಗೂ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಬಡವರ ಸೇವೆಯೇ ನನ್ನ ಗುರಿ: ಕಳೆದ 19 ವರ್ಷಗಳಿಂದ ಅಧಿಕಾರದಿಂದ ವಂಚಿತನಾಗಿದ್ದ ನನಗೆ ಕ್ಷೇತ್ರದ ಜನರು ನಿರೀಕ್ಷೆಗೂ ಮೀರಿ ಪ್ರಚಂಡ ಗೆಲುವು ತಂದುಕೊಟ್ಟಿದ್ದಾರೆ. ಸುಮಾರು 1 ಲಕ್ಷಕ್ಕೂ ಹೆಚ್ಚು ಮತಗಳನ್ನು ನೀಡಿ, 59 ಸಾವಿರ ಮತಗಳ ಅಂತರದಲ್ಲಿ ಗೆಲ್ಲಿಸಿದ್ದಾರೆ. ಅವರ ಪ್ರೀತಿ–ವಿಶ್ವಾಸಕ್ಕೆ ನಾನು ಚಿರಋಣಿಯಾಗಿದ್ದೇನೆ. ಕ್ಷೇತ್ರದ ಜನರ ಸಂಕಷ್ಟಗಳಿಗೆ ಸ್ಪಂದಿಸಬೇಕು. ಅವರಿಗೆ ಸರ್ಕಾರದಿಂದ ದೊರೆಯುವ ಎಲ್ಲಾ ಯೋಜನೆಗಳನ್ನು ತಲುಪಿಸುವ ಜೊತೆಗೆ ಕ್ಷೇತ್ರದಲ್ಲಿ ಆದ್ಯತೆ ಮೇರೆಗೆ ಮೂಲ ಸೌಲಭ್ಯಗಳನ್ನು ಕಲ್ಪಿಸಿ, ಮಾದರಿ ಕ್ಷೇತ್ರವನ್ನಾಗಿ ಮಾಡುವುದು ನನ್ನ ಗುರಿಯಾಗಿದೆ ಎಂದರು. ಕಳೆದ 10 ವರ್ಷಗಳ ಹಿಂದೆ ಕ್ಷೇತ್ರದಲ್ಲಿ 2013ರಲ್ಲಿ ಜಯಣ್ಣ ಅವರು ಶಾಸಕರಾಗಿದ್ದಾಗ ನಡೆದಿದ್ದ ಅಭಿವೃದ್ಧಿ ಪರ್ವ ಈಗ 2023ರ ನಂತರ ಆರಂಭವಾಗಲಿದೆ. ಅಂದು ನಮ್ಮ ನಾಯಕರಾದ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದರು. ನಾನು ಶಾಸಕನಾಗಿರುವ ಈ ಅವಧಿಯಲ್ಲಿಯೇ ನಮ್ಮ ಸರ್ಕಾರ ರಚನೆಯಾಗಿ, ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿರುವುದು ಕ್ಷೇತ್ರದ ಜನರು ಹಾಗೂ ನನ್ನ ಸೌಭಾಗ್ಯವಾಗಿದೆ. ಕ್ಷೇತ್ರದ ಅಭಿವೃದ್ಧಿಗೆ ಈ ಎಲ್ಲಾ ಅಂಶಗಳು ಪೂರಕವಾಗಿದ್ದು, ಮುಂದಿನ ದಿನಗಳಲ್ಲಿ ಎಲ್ಲರೂ ಒಗ್ಗಟ್ಟಿನಿಂದ ದುಡಿಯುವ ಮೂಲಕ ಕೊಳ್ಳೇಗಾಲ ಕ್ಷೇತ್ರದ ಅಭಿವೃದ್ಧಿಯತ್ತ ಕೊಂಡೊಯ್ಯಣ ಎಂದರು.

ಸಭೆಯಲ್ಲಿ ಜಿಪಂ ಮಾಜಿ ಉಪಾಧ್ಯಕ್ಷ ಯೋಗೇಶ್, ಯಳಂದೂರು ಬ್ಲಾಕ್ ಅಧ್ಯಕ್ಷ ಹೊಂಗನೂರು ಚಂದ್ರು, ಮುಖಂಡರಾದ ಹೊಂಗನೂರು ಪುಟ್ಟಸ್ವಾಮಿ, ಬಾಗಳಿ ರೇವಣ್ಣ, ಉಮ್ಮತ್ತೂರು ಶಿವಣ್ಣ, ನಾಗಲಿಂಗನಾಯಕ, ಗ್ರಾಪಂ ಮಾಜಿ ಅಧ್ಯಕ್ಷ ಜಿ.ಎಂ. ರವಿಶಂಕರಮೂರ್ತಿ, ಸಂತೇಮರಹಳ್ಳಿ ಮಹದೇವಪ್ರಸಾದ್, ಎಪಿಎಂಸಿ ಮಾಜಿ ಅಧ್ಯಕ್ಷ ಶಂಕರಮೂರ್ತಿ, ಎಂಡಿಸಿಸಿ ಮಾಜಿ ನಿರ್ದೇಶಕ ಶಿವಶಂಕರ್, ಕೆ.ಎಂ. ನಾಗರಾಜು, ಹೊಮ್ಮ ರಾಮನಾಯಕ, ಉಮ್ಮತ್ತೂರು ಭಾಗ್ಯ ಮತ್ತಿತರರಿದ್ದರು.

ಚಗ್ಗಿ ಕವನ ಸಂಕಲನಕ್ಕೆ ಓದುಗರನ್ನು ಆಕರ್ಷಿಸುವ ಅಗಾಧ ಶಕ್ತಿ ಇದೆ

ಕೊಳ್ಳೇಗಾಲ, ಮೇ 22– ದಿಲೀಪ್ ಎನ್ಕೆ ಅವರು ಉತ್ತಮ ಹಾಗೂ ಹೆಮ್ಮೆಯ ಕವಿಯಾಗಬಲ್ಲ ಎಲ್ಲಾ ಲಕ್ಷಣಗಳು ಮತ್ತು ಮಹಾನ್ ಪ್ರತಿಭೆ ಅಡಗಿದೆ ಎಂಬುದಕ್ಕೆ ಅವರ ಚಗ್ಗಿ ಕವನ ಸಂಕಲನ ಸಾಕ್ಷಿಯಾಗಿದೆ. ನೈಜ ಕವಿಯಾದವನಿಗೆ ಎಂದೆಂದಿಗೂ ಸಾವಿಲ್ಲ, ಆತ್ಮೀಯ ಸ್ನೇಹಿತ ದಿಲೀಪ್ ಕವನ ಸಂಕಲದಲ್ಲಿ ಹಲವು ವಿಶೇಷತೆಗಳಿವೆ. ಅದನ್ನು ಓದಿ ಆನಂದಿಸಿ ಎಂದು ಹಿರಿಯ ಸಾಹಿತಿಗಳು, ಚಿಂತಕರೂ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಮುಡ್ನಾಕೂಡು ಚಿನ್ನಸ್ವಾಮಿ ಹೇಳಿದರು.

ಎಲ್ಲಾ ಕವಿತೆಗಳು ಓದಿಸಿಕೊಳ್ಳುವಷ್ಟರ ಮಟ್ಟಿಗೆ ಆಸಕ್ತಿ ಬೆಳೆಸಲ್ಲ, ಅಧ್ಯಯನ ಮಾಡಬೇಕು ಅನಿಸಿಕೊಳ್ಳಲ್ಲ, ಚಗ್ಗಿ ಕವನ ಸಂಕಲನ ಹೆಚ್ಚು ಓದಿಸಿಕೊಳ್ಳುವ ಜೊತೆ ಜೊತೆಗೆ ಮತ್ತೆ ಮತ್ತೆ ಆಕರ್ಷಿಸುವ ಶಕ್ತಿ ಇದೆ. ಈ ಕವನ ಸಂಕಲನ ಓದಿದ್ದು ಮತ್ತು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು, ನಿಜಕ್ಕೂ ನನಗೆ ಹೆಮ್ಮೆ ಹಾಗೂ ಸಾರ್ಥಕ ಎನಿಸಿದೆ ಎಂದು ಚಗ್ಗಿ ಕವನ ಸಂಕಲನ ಬಿಡುಗಡೆಗೊಳಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಪ್ರೀತಿ ಶುಭಚಂದ್ರ ಮಾತನಾಡಿ, ಪುಸ್ತಕ ಬಿಡುಗಡೆ ಎಂಬುದು ಮನೆಯಲ್ಲಿನ ಮಗು ಜನಿಸಿದ ಸಂಭ್ರಮಕ್ಕೆ ಸರಿಸಾಟಿಯಾದುದು.

ಇಂದಿನ ಕಾರ್ಯಕ್ರಮ ಅರ್ಥಪೂರ್ಣವಾದುದು, ದಿಲೀಪ್ ನಮ್ಮೆಲ್ಲರ ಹೆಮ್ಮೆ ಈ ತಲೆಮಾರಿನ ಯುವ ಕವಿ ಎಂಬುದನ್ನು ಈ ಕವನ ಸಂಕಲದಲ್ಲಿ ಸಾಬೀತು ಪಡಿಸಿದ್ದಾರೆ. ಅವರೊಬ್ಬ ಸೃಜನ ಶೀಲ ಕವಿ. ವರ್ಣಾವಸ್ಥೆ, ಪ್ರಸ್ತುತ ಸ್ಥಿತಿಗತಿ, ಹೋರಾಟ, ಸಂಸ್ಕೃತಿ ಪರಂಪರೆಯ ಅನಾವರಣವನ್ನು ಈ ಕವನ ಸಂಕಲ ಬಿಂಬಿಸುತ್ತಿದೆ ಎಂದು ಹೇಳಿದರು.

ಸಾಹಿತ್ಯ ಮಿತ್ರಕೂಟದ ಅಧ್ಯಕ್ಷ ದೊರೆಸ್ವಾಮಿ, ಪ್ರಧಾನ ಕಾರ್ಯದರ್ಶಿ ಸತೀಶ್, ಸಾಹಿತಿ ಶಂಕನಪುರ ಮಹದೇವ, ಪ್ರೊ.ದೊಡ್ಡಲಿಂಗೇಗೌಡ, ನು.ರಮೇಶ್, ಕಲಾವಿದ ಲೋಕೇಶ್, ಬಾಳಗುಣಸೆ ಮಂಜುನಾಥ್, ಪ್ರಸಾದ್, ಪಳನಿಸ್ವಾಮಿ ಇನ್ನಿತರರು ಇದ್ದರು.



ಒಂದನೇ ಪುಟದಿಂದ

ಶನಿವಾರ ಮಂತ್ರಿಮಂಡಲ ವಿಸ್ತರಣೆ

ಸಧ್ಯಕ್ಕೆ ಮಂತ್ರಿ ಮಂಡಲದ ಗಾತ್ರ 10ರಷ್ಟಿದೆ. ಸಂಪುಟಕ್ಕೆ 34 ಮಂದಿಯನ್ನು ಸೇರ್ಪಡೆ ಮಾಡಿಕೊಳ್ಳಲು ಅವಕಾಶವಿದ್ದು, 3–4 ಸಚಿವ ಸ್ಥಾನವನ್ನು ಉಳಿಸಿಕೊಂಡು ಉಳಿದವುಗಳನ್ನು ಭರ್ತಿ ಮಾಡಲು ತೀರ್ಮಾನಿಸಿದ್ದಾರೆ. ಬರುವ ಭಾನುವಾರದ ವೇಳೆಗೆ ಪೂರ್ಣ ಪ್ರಮಾಣದ ಮಂತ್ರಿಮಂಡಲ ರಚನೆಯಾಗಿ ಸೋಮವಾರದಿಂದಲೇ ಸಂಪುಟದ ಎಲ್ಲಾ ಸದಸ್ಯರು ಯುದ್ಧೋಪಾದಿಯಲ್ಲಿ ಕೆಲಸ ಮಾಡಲು ಖಾತೆ ಹಂಚಿಕೊಡಲಿದ್ದಾರೆ. ಮುಂಬರುವ ಲೋಕಸಭಾ ಚುನಾವಣೆಗೆ ಪಕ್ಷವನ್ನು ಮತ್ತಷ್ಟು ಬಲಿಷ್ಠಗೊಳಿಸಿ ಹೆಚ್ಚು ಸ್ಥಾನಗಳಿಸುವ ಲೆಕ್ಕಾಚಾರವನ್ನು ಗಮನದಲ್ಲಿಟ್ಟುಕೊಂಡೇ ತಮ್ಮ ಮಂತ್ರಿ ಮಂಡಲ ವಿಸ್ತರಣೆ ಮಾಡುತ್ತಿರುವ ಮುಖ್ಯಮಂತ್ರಿಗಳು ಲೋಕಸಭಾ ಚುನಾವಣೆಗೂ ಮುನ್ನ ಜನತೆ ತಮಗೆ ನೀಡಿರುವ ಜವಾಬ್ದಾರಿಯನ್ನು ನಿರ್ವಹಿಸಲು ಕೆಲವು ಕಾರ್ಯಕ್ರಮಗಳನ್ನು ಅಳವಡಿಸುತ್ತಿದ್ದಾರೆ. ವಿಧಾನಸಭಾ ಚುನಾವಣೆಗೂ ಮುನ್ನ ಜನತೆಗೆ ನೀಡಿರುವ 5 ಗ್ಯಾರಂಟಿಗಳನ್ನು ಬರುವ ಜೂನ್ ನಿಂದ ಅನುಷ್ಠಾನ ಗೊಳಿಸಲು ಸಂಬಂಧಪಟ್ಟ ಇಲಾಖಾ ಸಚಿವರು ಕಾರ್ಯೋನ್ಮುಖವಾಗಬೇಕು.

ಕಾಂಗ್ರೆಸ್‌ನ ಅಧಿನಾಯಕ ರಾಹುಲ್ ಗಾಂಧಿ ಅವರು, ಈ ಸರ್ಕಾರ ಕ್ರಿಯಾಶೀಲ ಆಡಳಿತ ನೀಡಲು ಪೂರ್ಣ ಪ್ರಮಾಣದ ಮಂತ್ರಿ ಮಂಡಲ ರಚಿಸಿ ಜನರ ಕೆಲಸ ಮಾಡಲು ಅವಕಾಶ ಮಾಡಿ ಕೊಡಿ ಎಂದು ಮುಖ್ಯಮಂತ್ರಿ ಹಾಗೂ ಉಪ ಮುಖ್ಯ ಮಂತ್ರಿಗಳಿಗೆ ಸಲಹೆ ಮಾಡಿದ್ದಾರೆ. ವರಿಷ್ಠರ ಆದೇಶದಂತೆ ಮಂತ್ರಿ ಮಂಡಲ ವಿಸ್ತರಣೆಗೆ ಮುಂದಾಗಿರುವ ಮುಖ್ಯಮಂತ್ರಿ ಒಂದೇ ಹಂತದಲ್ಲಿ ಖಾತೆ ಹಂಚಿಕೆ ಮಾಡುವ ಉದ್ದೇಶದಿಂದ ಕಳೆದ ಶನಿವಾರ ತಮ್ಮ ಮಂತ್ರಿ ಮಂಡಲ ಸೇರಿರುವ ಯಾವ ಸದಸ್ಯರಿಗೂ ಇನ್ನೂ ಖಾತೆ ನೀಡಿಲ್ಲ. ಬರುವ ಭಾನುವಾರದವರೆಗೂ ಸಚಿವರು ಖಾತೆರಹಿತರಾಗಿಯೇ ಕೆಲಸ ನಿರ್ವಹಿಸಲಿದ್ದಾರೆ. ಸರ್ಕಾರ ರಚನೆ ಸಂದರ್ಭದಲ್ಲೇ 28 ಮಂದಿಯನ್ನು ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಲು ಮುಖ್ಯಮಂತ್ರಿ ಅವರು ನಿರ್ಧರಿಸಿದ್ದರು. ಆದರೆ, ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರ ನಡುವೆ ಸಚಿವ ಸ್ಥಾನಕ್ಕೆ ಶಾಸಕರ ಪಟ್ಟಿ ಆಯ್ಕೆ ಮಾಡುವಲ್ಲಿ ಮೂಡದ ಒಮ್ಮತದಿಂದ ಅದು ಸಾಧ್ಯವಾಗಿರಲಿಲ್ಲ.

ಸಿಎಂ ಸಚಿವಾಲಯಕ್ಕೆ ಅಧಿಕಾರಿಗಳ ನೇಮಕ

ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ. ಸಿದ್ದರಾಮಯ್ಯ ಅವರು ಪ್ರತಿಪಕ್ಷ ನಾಯಕರಾಗಿದ್ದ ಸಂದರ್ಭದಲ್ಲಿ ಆಪ್ತ ಕಾರ್ಯದರ್ಶಿಯಾಗಿದ್ದ ಕೆಎಎಸ್ ಅಧಿಕಾರಿ ಡಾ.ವೆಂಕಟೇಶಯ್ಯ ಅವರನ್ನು ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಮೊದಲ ಅವಧಿಯ ಸಂದರ್ಭದಲ್ಲಿ ವಿಶೇಷಾಧಿಕಾರಿಯಾಗಿದ್ದ ಎಂ. ವೆಂಕಟೇಶ್ ಅವರನ್ನು ಮುಖ್ಯಮಂತ್ರಿಯವರ ಪದಾವಧಿಯವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮುಖ್ಯಮಂತ್ರಿಯವರ ವಿಶೇಷಾಧಿಕಾರಿಯಾಗಿ ಗುತ್ತಿಗೆ ಆಧಾರದ ಮೇರೆಗೆ ನೇಮಕ ಮಾಡಲಾಗಿದೆ.

ಅವಾಂತರವಾಗದಂತೆ ಕ್ರಮ

ಗಮನದಲ್ಲಿಟ್ಟುಕೊಂಡು ಅಭಯ ತಂಡಗಳು ಇಂದು ಬೆಳಗ್ಗೆಯಿಂದ ಕ್ಷಿಪ್ರ ಕಾರ್ಯಾಚರಣೆ ನಡೆಸುತ್ತಿವೆ. ದಿನದ ಮೂರು ಪಾಳಿಯಲ್ಲಿ ಪೂರ್ಣ ಪ್ರಮಾಣದ ಸಿಬ್ಬಂದಿಗಳಿದ್ದು, ಕೆಲಸ ನಿರ್ವಹಿಸಿ ಮರದ ರೆಂಬೆ, ವಿದ್ಯುತ್ ಕಂಬಗಳನ್ನು ತೆರವುಗೊಳಿಸುವಂತೆ ಸೂಚನೆ ನೀಡಲಾಗಿದೆ ಎಂದು ಅವರು ತಿಳಿಸಿದರು. ಚರಂಡಿ, ಕಾಲುವೆಗಳಲ್ಲಿ ಬೆಳೆದಿರುವ ಗಿಡ–ಗಂಟಿ ತೆಗೆದು ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಲಾಗುತ್ತಿದೆ. ಸಂಪರ್ಕವಿಲ್ಲದ ಚರಂಡಿಗಳಲ್ಲಿ ನೀರು ಮುಂದೆ ಹರಿದು ಹೋಗಲು ಸಹಾಯವಾಗುವಂತೆ ಕ್ರಮ ವಹಿಸಲಾಗುತ್ತಿದೆ. ಎಷ್ಟೇ ಜೋರು ಮಳೆ ಬಂದರೂ ತೊಂದರೆಯಾಗದಂತೆ ವಾಹನ ವಿಭಾಗ, ಆರೋಗ್ಯ ವಿಭಾಗದ ಅಧಿಕಾರಿಗಳು ನಿರ್ವಹಣೆ ಮಾಡುತ್ತಿದ್ದಾರೆ ಎಂದು ಶಿವಕುಮಾರ್ ತಿಳಿಸಿದರು.

ಪಾಲಿಕೆ 'ಅಭಯ' ತಂಡ ರೆಡಿ

ತಕ್ಷಣ ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುವುದು, ಬ್ಯಾನರ್, ಫ್ಲೆಕ್ಸ್‌ಗಳನ್ನು ತೆರವುಗೊಳಿಸುವುದು, ಚರಂಡಿಗಳಲ್ಲಿ, ರಾಜಕಾಲುವೆಗಳಲ್ಲಿ ಬೆಳೆದಿರುವ ಗಿಡ–ಗಂಟಿ ಸ್ವಚ್ಛಗೊಳಿಸುವುದು, ರಸ್ತೆಗಳಲ್ಲಿ ಒಣಗಿ ಬೀಳುವ ಸ್ಥಿತಿಯಲ್ಲಿರುವ ರೆಂಬೆಗಳನ್ನು ಕತ್ತರಿಸುವುದು ಗಾಗೂ ಅಪಾಯ ತಂದೊಡ್ಡುವ ವಿದ್ಯುತ್ ಕಂಬ, ಇನ್ನಿತರ ಕೇಬಲ್ ವೈರ್‌ಗಳನ್ನು ತೆರವುಗೊಳಿಸಲು ಅಭಯ ತಂಡದ ಸಿಬ್ಬಂದಿಗಳು ಅಗತ್ಯ ಸಲಕರಣೆಗಳೊಂದಿಗೆ ಸಜ್ಜಾಗಿದ್ದಾರೆ.

ಗರಗಸ, ಕೊಡಲಿ, ಕುಡುಗೋಲು, ಗುದ್ದಲಿ, ಹಾರೆಗಳಂತಹ ರಕ್ಷಣಾ ಸಾಮಗ್ರಿಗಳನ್ನು ಹೊಂದಿರುವ ಅಭಯ ತಂಡದ ಸಿಬ್ಬಂದಿಗಳು, ಮೂರು ಪಾಳಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಬೆಳಗ್ಗೆ 8 ರಿಂದ ಸಂಜೆ 4 ಗಂಟೆವರೆಗೆ ಎರಡು ತಂಡಗಳು, ಮಧ್ಯಾಹ್ನ 2 ರಿಂದ ರಾತ್ರಿ 10 ಮತ್ತು ರಾತ್ರಿ 10 ರಿಂದ ಮುಂಜಾನೆ 6 ಗಂಟೆವರೆಗೆ ತಲಾ ಒಂದು ತಂಡದ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸಲಿವೆ. ಈ ಹಿಂದೆ ಕ್ಷಿಪ್ರ ಕಾರ್ಯಾಚರಣೆ ನಡೆಸುತ್ತಿದ್ದ 'ಧನುಷ್' ತಂಡವನ್ನೇ ಈಗ 'ಅಭಯ' ಎಂಬ ಹೆಸರಿನಿಂದ ಕರೆಯುತ್ತಿದ್ದು, ನೈಸರ್ಗಿಕ ವಿಪತ್ತು, ಅಗ್ನಿ ಅವಘಡ ಹಾಗೂ ಇನ್ನಿತರ ಅಪಾಯ ಸಂಭವಿಸಿದಲ್ಲಿ ಪೊಲೀಸರು, ಚೆಸ್ಕಾಂ, ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ನೆರವಿಗೆ ಬಂದು ಅಭಯ ತಂಡದ ಸಿಬ್ಬಂದಿಗಳು ಅವಾಂತರಗಳಿಂದ ಸಂಭವಿಸಬಹುದಾದ ತೊಂದರೆಗಳನ್ನು ತಪ್ಪಿಸಲು ಕಾರ್ಯಾಚರಣೆ ನಡೆಸಲಿದ್ದಾರೆ. ಪಾಲಿಕೆಯ ವಾಹನ ವಿಭಾಗದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮೃತ್ಯುಂಜಯ ಅವರು ಅಭಯ ಟೀಂ ಕಾರ್ಯಾಚರಣೆಯ ಮೇಲುಸ್ತುವಾರಿ ಮಾಡಲಿದ್ದಾರೆ. ಮುಂಗಾರು ಆರಂಭವಾದಲ್ಲಿ ಮೈಸೂರು ನಗರದ ತಗ್ಗು ಪ್ರದೇಶಕ್ಕೆ ನೀರು ನುಗ್ಗುವುದನ್ನು ತಪ್ಪಿಸಲು ಚರಂಡಿ, ಕಾಲುವೆಗಳನ್ನು ಸ್ವಚ್ಛಗೊಳಿಸುವ ಕಾರ್ಯವನ್ನು ಆರಂಭಿಸಿದ್ದಾರೆ.

ಅಧ್ಯಕ್ಷರು, ನಿರ್ದೇಶಕರ ನೇಮಕ ರದ್ದು

ಬಿಜೆಪಿ ಸರ್ಕಾರದ ಅವಧಿಯಲ್ಲಿ ನೇಮಕವಾಗಿದ್ದ ನಿಗಮ–ಮಂಡಳಿ ಅಧ್ಯಕ್ಷರು, ಸದಸ್ಯರು, ನಿರ್ದೇಶಕರನ್ನು ವಜಾ ಗೊಳಿಸಿ, ಉಪಯೋಗಿಸುತ್ತಿದ್ದ ಎಲ್ಲ ಸರ್ಕಾರಿ ಸೌಲಭ್ಯಗಳನ್ನು ವಾಪಸ್ ಪಡೆಯಲಾಗುತ್ತಿದೆ. ಇನ್ನು ಈ ಹಿಂದೆ ಆಡಳಿತದಲ್ಲಿದ್ದ ಬಿಜೆಪಿ ಸರ್ಕಾರದಿಂದ ರಾಜ್ಯದ ಎಲ್ಲ ಇಲಾಖೆ, ಅಕಾಡೆಮಿ ಗಳು, ನಿಗಮ ಹಾಗೂ ಮಂಡಳಿಗಳಲ್ಲಿ ಚಾಲನೆ ನೀಡಲಾಗಿದ್ದ ಕಾಮಗಾರಿಗಳಿಗೆ ತಡೆ ನೀಡಲಾಗಿದೆ. ನಿಗಮ, ಮಂಡಳಿ, ಪ್ರಾಧಿಕಾರಗಳ ಕಾಮಗಾರಿಗಳಿಗೆ ತಡೆ ನೀಡಿ ಆದೇಶ ಹೊರಡಿ ಸಲಾಗಿದೆ. ಜೊತೆಗೆ, ಕಾಮಗಾರಿಗಳಿಗೆ ಸಂಬಂಧಿಸಿದ ಎಲ್ಲ ಮುಂದಿನ ಹಣ ಬಿಡುಗಡೆ, ಹಣ ಪಾವತಿಗಳನ್ನು ತಕ್ಷಣದಿಂದ ತಡೆ ಹಿಡಿಯುವಂತೆ ಸೂಚನೆ ನೀಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ಮೇರೆಗೆ ಆರ್ಥಿಕ ಇಲಾಖೆಯ ಕಾರ್ಯದರ್ಶಿ ಏಕರೂಪ್ ಖೌರ್ ಅವರು ಹಣ ಬಿಡುಗಡೆಯನ್ನು ತಡೆಹಿಡಿಯುವಂತೆ ಆದೇಶಿಸಿದ್ದಾರೆ.

ಹತ್ತು ತಿಂಗಳಿಗೇ ಅಧಿಕಾರ ಮುಕ್ತಾಯ: ಕರ್ನಾಟಕದ ವಿವಿಧ ನಿಗಮ ಮಂಡಳಿಗಳಿಗೆ ಹೊಸ ಅಧ್ಯಕ್ಷರನ್ನು ನಾಮನಿರ್ದೇಶನ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಲಾಗಿತ್ತು. ಒಟ್ಟು 22 ನಿಗಮ ಮಂಡಳಿಗಳಿಗೆ ಅಧ್ಯಕ್ಷರ ನೇಮಕಾತಿ ಮಾಡಿ 2022ರ ಜುಲೈ 25ರಂದು ಸರ್ಕಾರ ಆದೇಶ ಹೊರಡಿಸಿದ್ದು, ಪಕ್ಷ ನಿಷ್ಠ ನಾಯಕರುಗಳಿಗೆ ಮಣೆ ಹಾಕಲಾಗಿತ್ತು. ಮುಂಬರುವ ವಿಧಾನಸಭೆ ಚುನಾವಣೆ ಗಮನದಲ್ಲಿಟ್ಟುಕೊಂಡು ಪಕ್ಷ ಸಂಘಟನೆಗೆ ಶ್ರಮಿಸುತ್ತಿರುವರಿಗೆ ಮುಖಂಡರುಗಳಿಗೆ ನಿಗಮ ಮಂಡಳಿ ನೀಡಲಾಗಿತ್ತು. ಆದರೆ, ಈ ನಾಯಕರಿಗೆ ನಿಗಮ ಮಂಡಳಿಗಳು ಹಾಗೂ ಪ್ರಾಧಿಕಾರಗಳ ಆಡಳಿತ 10 ತಿಂಗಳಿಗೇ ಮುಕ್ತಾಯಗೊಂಡಿದೆ.

10 ತಿಂಗಳು ಮಾತ್ರ ಅಧಿಕಾರ ಅನುಭವಿಸಿದವರು: ಸಫಾಯಿ ಕರ್ಮಚಾರಿ ನಿಗಮ – ಕೆ.ಪಿ.ವೆಂಕಟೇಶ್, ಅಲೆಮಾರಿ ಅಭಿವೃದ್ಧಿ ನಿಗಮ–ದೇವೇಂದ್ರನಾಥ್ ಕೆ., ಕಾಡುಗೊಲ್ಲ ಅಭಿವೃದ್ಧಿ ನಿಗಮ–ಚಂಗಾವರ ಮಾರಣ್ಣ, ವಸ್ತುಪ್ರದರ್ಶನ ಪ್ರಾಧಿಕಾರ–ಮಿರ್ಲೆ ಶ್ರೀನಿವಾಸ, ಮಾವು ಅಭಿವೃದ್ಧಿ ನಿಗಮ–ಎಂ.ಕೆ.ವಾಸುದೇವ್, ದ್ರಾಕ್ಷಿ, ವೈನ್ ಬೋರ್ಡ್–ಓ.ಓ.ರವಿ ನಾರಾಯಣ ರೆಡ್ಡಿ, ರೇಷ್ಮೆ ಮಾರಾಟ ಮಂಡಳಿ –ಬಿ.ಸಿ.ನಾರಾಯಣ ಸ್ವಾಮಿ, ಲಿಂಬೆ ಅಭಿವೃದ್ಧಿ ಮಂಡಳಿ–ಚಂದ್ರಶೇಖರ ಕವಟಗಿ, ಗೇರು ಅಭಿವೃದ್ಧಿ ನಿಗಮ–ಮಣಿರಾಜ ಶೆಟ್ಟಿ, ಪಶ್ಚಿಮ ಘಟ್ಟಗಳ ಕಾರ್ಯಪಡೆ –ಗೋವಿಂದ ನಾಯ್ಕ್, ಮೈಸೂರು ಮೃಗಾಲಯ ಪ್ರಾಧಿಕಾರ–ಒ.ಶಿವಕುಮಾರ್, ಅರಣ್ಯ ಅಭಿವೃದ್ಧಿ ನಿಗಮ–ರೇವಣ್ಣಪ್ಪ ಕೋಳಗಿ, ಜೀವ ವೈವಿದ್ಯ ಮಂಡಳಿ–ರವಿಕಾಳಪ್ಪ, ಕುರಿ, ಉಣ್ಣೆ ಅಭಿವೃದ್ಧಿ ನಿಗಮ–ಧರ್ಮಣ್ಣ ದೊಡ್ಡಮನೆ, ಮೀನುಗಾರಿಕೆ ಅಭಿವೃದ್ಧಿ ನಿಗಮ–ಎ.ವಿ.ತೀರ್ಥರಾಮ, ಪೇಂಟ್ಸ್, ವಾರ್ನಿಷ್ – ರಘು ಕೌಟಿಲ್ಯ, ಜವಳಿ ಅಭಿವೃದ್ಧಿ ನಿಗಮ– ವಿರೂಪಾಕ್ಷಗೌಡ, ಖಾದಿ, ಗ್ರಾಮೋದ್ಯೋಗ ಮಂಡಳಿ ಕೆ.ವಿ.ನಾಗರಾಜ್, ಕರಕುಶಲ ಅಭಿವೃದ್ಧಿ ನಿಗಮ–ಮಾರುತಿ ಅಷ್ಟಗಿ, ತುಂಗಾಭದ್ರ ಯೋಜನೆ (ಕಾಡಾ)–ಕೊಲ್ಲಾ ಶೇಷಗಿರಿ ರಾವ್, ಕಾವೇರಿ ಜಲಾನಯನ ಯೋಜನೆ–ನಿಜಗುಣರಾಜು, ಮದ್ಯಪಾನ ಸಂಯಮ ಮಂಡಳಿ–ಮಲ್ಲಿಕಾರ್ಜುನ ತುಬಾಕಿ.

ಸಿಎಂ ಸಿದ್ದರಾಮಯ್ಯ ಸಭೆ

ಮನೆಗಳು ಕುಸಿದಿದ್ದು, ಅಪಾರ ಪ್ರಮಾಣದ ಬೆಳೆ ನಾಶವಾಗಿದೆ. ನಿರೀಕ್ಷೆ ಮೀರಿ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗುತ್ತಿರುವುದರಿಂದ ಜನರಲ್ಲಿ ಆತಂಕ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಸಿಇಓಗಳೊಂದಿಗೆ ಹಲವು ವಿಚಾರಗಳ ಬಗ್ಗೆ ಚರ್ಚೆ ನಡೆಸಿ, ಮಾಹಿತಿ ಸಂಗ್ರಹಿಸಲಿದ್ದಾರೆ.

ಹಿರಿಯ ಅಧಿಕಾರಿಗಳ ಸಭೆ: ಆಡಳಿತ ಯಂತ್ರಕ್ಕೆ ಚುರುಕು ನೀಡುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್ಕಾರದ ಹಿರಿಯ ಅಧಿಕಾರಿಗಳ ಸಭೆ ಕರೆದಿದ್ದಾರೆ. ಮಂಗಳವಾರ ಸಂಜೆ 5 ಗಂಟೆಗೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸರ್ಕಾರದ ಅಪಾರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳ ಸಭೆ ಕರೆಯಲಾಗಿದ್ದು, ಸರ್ಕಾರದ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಲಿದ್ದಾರೆ.

ಮಳೆ ದುರಂತಕ್ಕೆ ಕಡಿವಾಣ ಹಾಕಲು

ರಾಜಕಾಲುವೆ ಒತ್ತುವರಿ ತೆರವಿಗೆ ಸಾರ್ವಜನಿಕರ ಆಗ್ರಹ

● ಜನತಾನಗರ, ಶಾರದಾದೇವಿ ನಗರ, ರಾಮಕೃಷ್ಣನಗರ, ಶ್ರೀರಾಮಪುರ, ಬೋಗಾದಿ ಸೇರಿದಂತೆ ವಿವಿಧ ಬಡಾವಣೆಗಳ ಜನರ ಆತಂಕ ● ಬೆಂಗಳೂರಿನ ಘಟನೆ ನಂತರ ಮೈಸೂರಲ್ಲಿ ಹೆಚ್ಚಾದ ಆತಂಕ





ಮೈಸೂರು,ಮೇ 22(ಎಂಟಿವೈ) – ರಾಜಧಾನಿ ಬೆಂಗಳೂರಿನ ಹೃದಯ ಭಾಗದಲ್ಲಿ ಅಂಡರ್‌ಪಾಸ್‌ನಲ್ಲಿ ನೀರಿನಲ್ಲಿ ಕಾರೊಂದು ಮುಳುಗಿ ಯುವತಿ ಸಾವಿಗೀಡಾದ ಪ್ರಕರಣದಿಂದಾಗಿ ಮೈಸೂರಿನ ಕೆಲ ಬಡಾವಣೆಗಳ ಜನರಲ್ಲಿ ಆತಂಕ ಮನೆ ಮಾಡಿದ್ದು, ಮಳೆ ನೀರು ಸರಾಗವಾಗಿ ಹರಿದು ಹೋಗಲು ರಾಜಕಾಲುವೆ ಒತ್ತುವರಿ ತೆರವುಗೊಳಿಸಿ ಸಂಭವಿಸಬಹುದಾದ ಅಪಾಯ ತಪ್ಪಿಸುವಂತೆ ವಿವಿಧ ಬಡಾವಣೆಗಳ ನಿವಾಸಿಗಳು ಮನವಿ ಮಾಡಿದ್ದಾರೆ.

ಈ ಸಾಲಿನ ಮುಂಗಾರು ಆರಂಭದಲ್ಲೇ ಅರ್ಭಟಿಸುತ್ತಿದ್ದು, ತಗ್ಗು ಪ್ರದೇಶದ ಜನರ ನಿದ್ದೆಗೆಡಿಸಿದೆ. ಬೆಂಗಳೂರಿನ ಪ್ರಕರಣ ಮೈಸೂರಲ್ಲೂ ಆತಂಕವನ್ನುಂಟು ಮಾಡಿದೆ. ಮಳೆ ನೀರಿನಿಂದ ಮೈಸೂರಲ್ಲಿ ಯಾವುದೇ ಅನಾಹುತ ಸಂಭವಿಸದಂತೆ ಮೈಸೂರು ಮಹಾನಗರ ಪಾಲಿಕೆ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಮೈಸೂರಿನ ಜನತೆ ಮನವಿ ಮಾಡಿದ್ದಾರೆ.

ಕಳೆದ 2–3 ವರ್ಷಗಳ ಅವಧಿಯನ್ನು ಅವಲೋಕಿಸಿ ಮೈಸೂರಲ್ಲಿ ಸಂಭವಿಸಿದ ಮಳೆ ಅನಾಹುತದ ಸ್ಥಳಗಳ ಜನರು ಚಿಂತೆಗೀಡಾಗಿದ್ದಾರೆ. ಮಳೆ ನೀರು ಸರಾಗವಾಗಿ ಹರಿದು ಹೋಗುವುದಕ್ಕೆ ರಾಜಕಾಲುವೆ ಒತ್ತುವರಿಯಾಗಿರುವುದರಿಂದ ತಗ್ಗು ಪ್ರದೇಶದ ಜನರ ಚಿಂತೆ ಹೆಚ್ಚಾಗಿದೆ. ಕಳೆದ ಕೆಲ ವರ್ಷಗಳಿಂದಲೂ ಮೈಸೂರಿನ ಕೆಲ ಬಡಾವಣೆಗಳು ಮಳೆ ನೀರಿನಿಂದ ಜಲಾವೃತಗೊಂಡು ಅಲ್ಲಿನ ನಿವಾಸಿಗಳನ್ನು ಚಿಂತೆಗೀಡು ಮಾಡಿದೆ. ಈ ವರ್ಷವೂ ಮಳೆ ಅವಾಂತರ ಪುನರಾವರ್ತನೆಯಾಗಬಹುದು ಎಂಬ ಆತಂಕ ತಗ್ಗು ಪ್ರದೇಶದ ಜನರಲ್ಲಿ ಕಾಡುತ್ತಿದೆ. ಕೆಲವು ಬಡಾವಣೆಗಳು ನಗರ ಪಾಲಿಕೆ ವ್ಯಾಪ್ತಿಗೆ, ಮತ್ತೆ ಕೆಲವು ಬಡಾವಣೆಗಳು ಮುಡಾ ವ್ಯಾಪ್ತಿಗೆ ಒಳಪಡುತ್ತವೆ. ತಮ್ಮ ವ್ಯಾಪ್ತಿಗೆ ಒಳಪಡುವ ಮಳೆ ನೀರು ಹರಿದು ಹೋಗುವ ಚರಂಡಿಯನ್ನು ದುರಸ್ತಿ ಮಾಡಿದರೆ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಬಹುದಾಗಿದೆ. ಆದರೆ, ಇಚ್ಛಾಶಕ್ತಿ ಪ್ರದರ್ಶಿಸಬೇಕಾದ ಅನಿವಾರ್ಯತೆ ಇದೆ.

ರಾಜಕಾಲುವೆಗೆ ಮುಕ್ತಿ ಎಂದು: ಮೈಸೂರಿನ ಹೊರವಲಯ ಬೋಗಾದಿ ಕಡೆಯಿಂದ ಮಳೆ ನೀರು ಹರಿದು ಬರುವ ರಾಜಕಾಲುವೆಯನ್ನು ಕೆಲವು ಪ್ರಭಾವಿಗಳು ಒತ್ತುವರಿ ಮಾಡಿಕೊಂಡಿದ್ದು, ಅದನ್ನು ತೆರವುಗೊಳಿಸಲು ಅಧಿಕಾರಿಗಳು ಹಿಂಜರಿಯುತ್ತಿರುವುದೇ ತಗ್ಗು ಪ್ರದೇಶಕ್ಕೆ ನೀರು ನುಗ್ಗಲು ಕಾರಣವಾಗುತ್ತಿದೆ. ಜನತಾ ನಗರ, ಶಾರದಾದೇವಿ ನಗರ, ದಟ್ಟಗಳ್ಳಿ, ರಾಮಕೃಷ್ಣನಗರ, ಲಿಂಗಾಂಬುದಿ ಪಾಳ್ಯ ಸೇರಿದಂತೆ ಹಲವೆಡೆ ಮಳೆ ನೀರು ತಗ್ಗು ಪ್ರದೇಶಕ್ಕೆ ನುಗ್ಗಿ ಅವಾಂತರ ಸೃಷ್ಟಿಸಿತ್ತು ಎರಡು ವರ್ಷದ ಹಿಂದೆ ಶ್ರೀರಾಂಪುರದಲ್ಲಿ ತಗ್ಗು ಪ್ರದೇಶದಲ್ಲಿ ಸಿಲುಕಿದ್ದವರನ್ನು ಬೋಟ್ ಬಳಸಿಕೊಂಡು ರಕ್ಷಿಸಲಾಗಿತ್ತು. ಈ ಬಾರಿ ಮಳೆ ಅವಾಂತರ ಮರುಕಳಿಸದಂತೆ ಪಾಲಿಕೆ ಹಾಗೂ ಮುಡಾ ಅಧಿಕಾರಿಗಳು ಮುನ್ನೆಚ್ಚರಿಕಾ ಕ್ರಮ ಕೈಗೊಂಡು ಕಾರ್ಯನಿರ್ವಹಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಮೈಸೂರು ನಗರ ರಾಜರ ಆಳ್ವಿಕೆಯಲ್ಲಿ ಸುಸಜ್ಜಿತವಾಗಿ ನಿರ್ಮಾಣವಾಗಿದೆ. ಮಳೆ ನೀರು ಕೆರೆಗಳಿಗೆ ಹರಿದು ಹೋಗಲೆಂಬ ಕಾರಣದಿಂದ ರಾಜಕಾಲುವೆ ನಿರ್ಮಾಣ ಮಾಡಲಾಗಿತ್ತು. ಆದರೆ, ಕೆಲವು ದಶಕಗಳಿಂದ ರಾಜಕಾಲುವೆಯನ್ನೂ ಬಿಡದೆ ಒತ್ತುವರಿ ಮಾಡಿಕೊಳ್ಳಲಾಗಿದೆ. ಇದರಿಂದ ಭಾರಿ ಪ್ರಮಾಣದ ಮಳೆಯಿಂದಾಗಿ ಹರಿದು ಬರುವ ನೀರು ಸರಾಗವಾಗಿ ಹರಿದು ಹೋಗಲಾಗದೇ, ಮಾರ್ಗ ಬದಲಿಸುತ್ತಿವೆ. ಇದರಿಂದ ತಗ್ಗು ಪ್ರದೇಶಗಳಿಗೆ ನೀರು ನುಗ್ಗುತ್ತಿದೆ. ಪ್ರಭಾವಿಗಳು ಮಾಡಿದ ಒತ್ತುವರಿಗೆ ಅಮಾಯಕರು ಪರಿತಪಿಸುವಂತಾಗಿದೆ. ಇದರಿಂದ ಈ ಬಾರಿಯಾದರೂ ರಾಜಕಾಲುವೆ ಒತ್ತುವರಿ ತೆರವಿಗೆ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

ರಾಜಕಾಲುವೆ ಪರಿಶೀಲನೆ: ಬೆಂಗಳೂರಿನ ಮಳೆ ಅವಾಂತರ ಘಟನೆಯಿಂದ ಎಚ್ಚೆತ್ತುಕೊಂಡ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳ ತಂಡ ಸೋಮವಾರ ವಿವಿಧೆಡೆ ರಾಜಕಾಲುವೆಯನ್ನು ಪರಿಶೀಲನೆ ಮಾಡಿದ್ದಾರೆ. ಪಾಲಿಕೆ ಆಯುಕ್ತ ಜಿ.ಲಕ್ಷ್ಮಿ ಕಾಂತರೆಡ್ಡಿ, ಪಾಲಿಕೆಯ ಸೂಪರಿಂಟೆಂಡೆಂಟ್ ಇಂಜಿನಿಯರ್ ಜೆ.ಮಹೇಶ್ ಸೇರಿದಂತೆ ವಿವಿಧ ಅಧಿಕಾರಿಗಳ ತಂಡ ವಿವಿಧೆಡೆ ರಾಜಕಾಲುವೆ ಪರಿಶೀಲನೆ ನಡೆಸಿದೆ. ಅಲ್ಲದೆ, ಈ ಹಿಂದೆ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದ ಸ್ಥಳವನ್ನು ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಆಯಾ ವಲಯ ಅಧಿಕಾರಿಗಳು ಸೂಚನೆ ನೀಡಿದ್ದಾರೆ.

ಸದ್ಯಕ್ಕೆ ಮೈಸೂರಲ್ಲಿ ಸಮಸ್ಯೆಯಿಲ್ಲ

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ 65 ವಾರ್ಡ್‌ಗಳ ವ್ಯಾಪ್ತಿಯಲ್ಲಿ ಮಳೆ ನೀರು ಹರಿಯುವ ಚರಂಡಿ ಹಾಗೂ ರಾಜಕಾಲುವೆಯಲ್ಲಿ ಬೆಳೆದು ನಿಂತಿದ್ದ ಗಿಡಗಂಟಿಗಳ ತೆರವು ಕಾರ್ಯಾಚರಣೆ ಈಗಾಗಲೇ ನಡೆಸಲಾಗುತ್ತಿದೆ. ನಾಲ್ಕು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲೂ ಚರಂಡಿಯಲ್ಲಿ ಬೆಳೆದು ನಿಂತಿರುವ ಗಿಡ ಹಾಗೂ ತುಂಬಿಕೊಂಡಿದ್ದ ಹೂಳನ್ನು ತೆರವುಗೊಳಿಸುವ ಕಾರ್ಯ ಶೇ.65ರಷ್ಟು ಪೂರ್ಣಗೊಂಡಿದೆ. ಸದ್ಯಕ್ಕೆ ಮೈಸೂರಲ್ಲಿ ಮಳೆ ಅನಾಹುತದಂತಹ ಘಟನೆ ಸಂಭವಿಸುವುದಿಲ್ಲ. ಪಾಲಿಕೆ ವ್ಯಾಪ್ತಿಯಲ್ಲಿ ಎಲ್ಲಾ ವಾರ್ಡ್ ಹಾಗೂ ಬಡಾವಣೆಗಳಲ್ಲೂ ಮಳೆ ನೀರು ಸರಾಗವಾಗಿ ಹರಿದು ಹೋಗಲು ಕ್ರಮ ಕೈಗೊಳ್ಳಲಾಗಿದೆ. ಜನ ಆತಂಕ ಪಡುವ ಅಗತ್ಯವಿಲ್ಲ.

- ಜೆ.ಮಹೇಶ್, ಸೂಪರಿಂಟೆಂಡೆಂಟ್ ಇಂಜಿನಿಯರ್, ಮಹಾನಗರ ಪಾಲಿಕೆ

ರೌಡಿಶೀಟರ್ ಚಂದ್ರು ಹತ್ಯೆ ಪ್ರಕರಣ

ತಲೆಮರೆಸಿಕೊಂಡಿದ್ದ ಉಳಿದ ಐವರ ಬಂಧನ

ಮೈಸೂರು, ಮೇ 22(ಆರ್‌ಕೆ)–ಮೈಸೂರಿನ ಒಂಟಿಕೊಪ್ಪಲು ನಿವಾಸಿಯಾಗಿದ್ದ ರೌಡಿ ಶೀಟರ್ ಚಂದ್ರು ಅಲಿಯಾಸ್ ಚಂದು ಹತ್ಯೆಗೈದು ಪರಾರಿಯಾಗಿದ್ದ ಉಳಿದ ಐವರನ್ನು ಇಂದು ಮುಂಜಾನೆ ಬಂಧಿಸಲಾಗಿದೆ.

ಕಾರು ಚಾಲಕ ವೆಂಕಟೇಶ್, ವರುಣ್ ಅಲಿಯಾಸ್ ಕಪ್ಪೆ, ಸಚಿನ್, ದರ್ಶನ್ ಅಲಿಯಾಸ್ ಅಪ್ಪು ಹಾಗೂ ಅನಿಲ್ ಕುಮಾರ್ ನಾಯ್ಕ ಬಂಧಿತರಾಗಿದ್ದು, ಇಂದು ಮುಂಜಾನೆ ಹೆಚ್.ಡಿ.ಕೋಟೆ ತಾಲೂಕಿನ ಗ್ರಾಮವೊಂದರಲ್ಲಿ ಅಡಗಿದ್ದ ಐವರನ್ನು ಪೊಲೀಸರು ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಕಳೆದ ಗುರುವಾರ ಸಂಜೆ ಒಂಟಿಕೊಪ್ಪಲಿನ ಕಾಳಿದಾಸ ರಸ್ತೆಯ ಟೈಲರ್ ಅಂಗಡಿ ಮುಂದೆ ಕುಳಿತ್ತಿದ್ದ ಚಂದ್ರು ಮೇಲೆರಗಿದ 9 ಮಂದಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಬರ್ಬರವಾಗಿ ಕೊಲೆಗೈದು ಮೂರು ಸ್ಕೂಟರ್‌ಗಳಲ್ಲಿ ಪರಾರಿಯಾಗಿದ್ದರು. ಅವರಿಗೆ ಇತರ ಮೂವರು ಸಾಥ್ ನೀಡಿ ಕೆಲಸ ಮುಗಿದ ಬಳಿಕ ಕಾರಿನಲ್ಲಿ ಪಾರಿಯಾಗಿದ್ದರು.

ಬಂಧಿತರ ಸಂಖ್ಯೆ 12ಕ್ಕೇರಿಕೆ



12 ಮಂದಿ ಪೈಕಿ 7 ಆರೋಪಿಗಳನ್ನು ಶನಿವಾರ ಮುಂಜಾನೆ ಇಲವಾಲ ಸಮೀಪ ಫಾರಂ ಹೌಸ್‌ವೊಂದರಲ್ಲಿ ಪತ್ತೆ ಮಾಡಿ ಬಂಧಿಸಿದ್ದ ಪೊಲೀಸರು, ಅಂದು ಮಧ್ಯಾಹ್ನ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ತಲೆಮರೆಸಿಕೊಂಡಿದ್ದ ಉಳಿದ ಐವರಿಗಾಗಿ ಶೋಧ ಮುಂದುವರಿಸಿದ್ದ ತನಿಖಾ ತಂಡದ ಅಧಿಕಾರಿಗಳು, ಇಂದು ಮುಂಜಾನೆ ಬಂಧಿಸಿದ್ದಾರೆ.

ವೆಂಕಟೇಶ್ ಕಾರಿನಲ್ಲಿ ಬಂದು ವರುಣ್, ಸಚಿನ್, ದರ್ಶನ್ ಹಾಗೂ ಅನಿಲ್ ಕುಮಾರ್ ಕೊಲೆ ಮಾಡಲು ಇತರರಿಗೆ ಸಹಾಯ ಮಾಡಿ ಪರಾರಿಯಾಗಿದ್ದರು. ಸುಳಿವಿನ ಜಾಡು ಹಿಡಿದು ಬೆನ್ನತ್ತಿದ ಪೊಲೀಸರು, ಅವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಚಂದ್ರು ಹತ್ಯೆ ಪ್ರಕರಣದಲ್ಲಿ ಭಾಗಿಯಾಗಿದ್ದ ಎಲ್ಲಾ ಆರೋಪಿಗಳನ್ನು ಪತ್ತೆ ಮಾಡಿದಂತಾಗಿದ್ದು, ಕೃತ್ಯಕ್ಕೆ ಬಳಸಿದ್ದ ಮಾರಕಾಸ್ತ್ರ, ಸ್ಕೂಟರ್‌ಗಳು, ಕಾರನ್ನು ವಶಪಡಿಸಿಕೊಳ್ಳಲಾಗಿದೆ.



ಮೈಸೂರಿನ ಜೀವಧಾರ ಸೇವಾ ಕೇಂದ್ರ ಮತ್ತು ಬಿಜೆಪಿ ಅಸಂಘಟಿತ ಕಾರ್ಮಿಕ ಪ್ರಕೋಷ್ಠ ವತಿಯಿಂದ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಉಚಿತವಾಗಿ ಶಾಲಾ ಕಿಟ್‌ಗಳನ್ನು ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತ ನಿಧಿ ಕೇಂದ್ರದ ಆವರಣದಲ್ಲಿ ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ವಿತರಿಸಿದರು. ಇದೇ ವೇಳೆ ಬಿಜೆಪಿ ರಾಜ್ಯ ಅಸಂಘಟಿತ ಕಾರ್ಮಿಕ ರಾಜ್ಯ ಸಂಚಾಲಕ ಪಿ.ಉಮೇಶ್, ಚಾಮರಾಜ ಕ್ಷೇತ್ರದ ಹಿಂದುಳಿದ ವರ್ಗದ ಮೋರ್ಚಾ ಅಧ್ಯಕ್ಷ ಸೂರಜ್ ಮತ್ತು ಸದಾಶಿವ ಹಾಜರಿದ್ದರು.



ಮೈಸೂರಿನ ಶ್ರೀ ಸುಶಮೀಂದ್ರ ಸೇವಾ ಪ್ರತಿಷ್ಠಾನದ ಆಶ್ರಯದಲ್ಲಿ ಆಯೋಜಿಸಿರುವ ಕ್ರಿಕೆಟ್ ಪಂದ್ಯಾವಳಿಯನ್ನು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಿದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾದ ರಾಜ್ಯ ಉಪಾಧ್ಯಕ್ಷ ನಂ ಶ್ರೀಕಂಠ ಕುಮಾರ್, ರಾಷ್ಟ್ರೀಯ ಕ್ರೀಡಾಪಟು ಎಸ್.ಎಸ್.ಸುಬ್ರಮಣ್ಯ, ಶ್ರೀನಿವಾಸ್, ಚೇತನ್, ಶ್ರೀಶ ರವರುಗಳು ಉಪಸ್ಥಿತರಿದ್ದರು.

ಡೇಟಾ ಎಂಟ್ರಿ ಆಪರೇಟರ್ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು, ಮೇ 22– ಮೈಸೂರು ವಿಶ್ವವಿದ್ಯಾನಿಲಯ ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ಅಧ್ಯಯನ ಕೇಂದ್ರದಲ್ಲಿ ಕರ್ನಾಟಕ ಸರ್ಕಾರ ಪ್ರಾಯೋಜಿತ ಸಂಶೋಧನಾ ಯೋಜನೆಗೆ ಒಂದು ವರ್ಷದ ಮಟ್ಟಿಗೆ ಡೇಟಾ ಎಂಟ್ರಿ ಆಪರೇಟರ್ ಆಗಿ ಕಾರ್ಯನಿರ್ವಹಿಸಲು ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಯಾವುದೇ ಸಾಮಾಜಿಕ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಮತ್ತು ಕಂಪ್ಯೂಟರ್ ಅಪ್ಲಿಕೇಶನ್‌ನಲ್ಲಿ ಪಿಜಿ ಡಿಪ್ಲೊಮಾ ಪದವಿ ಹೊಂದಿರಬೇಕು ಮತ್ತು ಯಾವುದಾದರೂ ಸಂಶೋಧನಾ ಯೋಜನೆಯಲ್ಲಿ 15 ತಿಂಗಳ ಕಾರ್ಯನಿರ್ವಹಿಸಿರುವ ಅನುಭವ ಇರಬೇಕು. ಅವಶ್ಯಕತೆ ಇದ್ದಲ್ಲಿ ಅಭ್ಯರ್ಥಿಗಳು ಕ್ಷೇತ್ರ ಕಾರ್ಯ ನಡೆಸಲು ಸಹ ಸಿದ್ಧರಿರಬೇಕು. ಹೆಚ್ಚಿನ ವಿವರಗಳಿಗೆ ಮೊ. 9008164514 ಸಂಪರ್ಕಿಸಬಹುದು. ಅರ್ಜಿ ಸಲ್ಲಿಸಲು ಜೂ. 10 ಕೊನೆ ದಿನ ಎಂದು ಪ್ರಕಟಣೆ ತಿಳಿಸಿದೆ.

ಕಳೆದ ರಾಜ್ಯ ಬಿಜೆಪಿ ಸರ್ಕಾರದ

ರೈತ ವಿರೋಧಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕು

ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಆಗ್ರಹ



ಮೈಸೂರು,ಮೇ 22(ಪಿಎಂ)– ಕಳೆದ ರಾಜ್ಯ ಬಿಜೆಪಿ ಸರ್ಕಾರದ ರೈತ ವಿರೋಧಿ ಭೂ ಸುಧಾರಣೆ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ, ಜಾನುವಾರು ಹತ್ಯೆ ನಿಷೇಧ ಮತ್ತು ಸಂರಕ್ಷಣಾ ಕಾಯ್ದೆಯನ್ನು ಕಾಂಗ್ರೆಸ್ ಸರ್ಕಾರ ಕೂಡಲೇ ವಾಪಸ್ ಪಡೆದು ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೂಡಲೇ ಈ ಮೂರು ಕಾಯ್ದೆಗಳನ್ನು ವಾಪಸ್ ಪಡೆಯಬೇಕು. ಚುನಾವಣಾ ಪೂರ್ವದಲ್ಲಿ ಕೆಪಿಸಿಸಿ ಅಧ್ಯಕ್ಷರಾಗಿ ಡಿ.ಕೆ.ಶಿವಕುಮಾರ್ ಈ ಸಂಬಂಧ ಭರವಸೆ ನೀಡಿದ್ದು, ಅದರಂತೆ ನಡೆದುಕೊಳ್ಳಬೇಕು. ಜೊತೆಗೆ ರೈತ ಸ್ನೇಹಿಯಾದ ಸುಧಾರಣೆಗಳನ್ನು ತರಬೇಕು. ಉಳುವ ರೈತನ ಅನುಕೂಲಕ್ಕೆ ಪೂರಕವಾದ ನೀತಿಗಳನ್ನು ರೂಪಿಸಬೇಕು ಎಂದು ಒತ್ತಾಯಿಸಿದರು.

ಖಾಸಗೀಕರಣಕ್ಕೆ ಪೂರಕವಾಗಿರುವ ವಿದ್ಯುತ್ (ತಿದ್ದುಪಡಿ) ಕಾಯ್ದೆ 2022 ಅನ್ನು ಬಿಜೆಪಿಯೇತರ ಆಡಳಿತವಿರುವ ರಾಜ್ಯಗಳು ಜಾರಿಗೊಳಿಸದಿರಲು ನಿರ್ಣಯ ಕೈಗೊಂಡಿವೆ ಅದೇ ರೀತಿಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರವೂ ಮುಂಬರುವ ಅಧಿವೇಶನದಲ್ಲಿ ಇದನ್ನು ಜಾರಿಗೊಳಿಸದಿರುವ ನಿರ್ಣಯ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಶಾಸನಾತ್ಮಕ ಸ್ವರೂಪ ನೀಡಿ: 2013ರಲ್ಲಿ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದಾಗ ಪುಟ್ಟಣ್ಣಯ್ಯ ನೇತೃತ್ವದಲ್ಲಿ ರೈತರ ಒತ್ತಾಯದ ಮೇರೆಗೆ ಕೃಷಿ ಬೆಲೆ ಆಯೋಗ ರಚನೆಯಾಗಿದೆ. ಈ ಆಯೋಗಕ್ಕೆ ಹೆಚ್ಚಿನ ಅಧಿಕಾರ ಮತ್ತು ಸವಲತ್ತುಗಳನ್ನು ನೀಡಿ ಶಾಸನಾತ್ಮಕ ಸ್ವರೂಪ ನೀಡಬೇಕು. ರಾಜ್ಯ ಕೃಷಿ ಉತ್ಪನ್ನಗಳಿಗೆ ಡಾ.ಸ್ವಾಮಿನಾಥನ್ ವರದಿ ಅನ್ವಯ ಕನಿಷ್ಠ ಬೆಂಬಲ ಬೆಲೆ ದೊರಕಿಸಬೇಕು. ಜೊತೆಗೆ ಆಯೋಗ ನೀಡುವ ರೈತ ಪರ ವರದಿಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಸದ್ಯದಲ್ಲೇ ರೈತ ಸಂಘದ ನಿಯೋಗವು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ರೈತ ಪರವಾದ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ಹಕ್ಕೊತ್ತಾಯ ಪತ್ರ ಸಲ್ಲಿಸಲಿದೆ ಎಂದು ತಿಳಿಸಿದರು.

ಸಿದ್ದರಾಮಯ್ಯನವರು ನಮ್ಮ ಜಿಲ್ಲೆಯವರೇ. ಸಮಾಜವಾದಿ ಚಿಂತನೆಯ ಗರಡಿಯಲ್ಲಿ ಬೆಳೆದವರು. ರೈತ ಸಂಘದ ಮೈಸೂರು ಜಿಲ್ಲೆಯ ಪ್ರಥಮ ಪ್ರಧಾನ ಕಾರ್ಯದರ್ಶಿ ಆಗಿದ್ದವರು. ಅವರು ಮತ್ತೊಮ್ಮೆ ಮುಖ್ಯಮಂತ್ರಿ ಆಗಿರುವುದನ್ನು ರೈತ ಸಂಘ ಸ್ವಾಗತಿಸಲಿದೆ. ಜನ ಬಹಳ ನಂಬಿಕೆ ಮತ್ತು ವಿಶ್ವಾಸದೊಂದಿಗೆ ಕಾಂಗ್ರೆಸ್ ಪಕ್ಷಕ್ಕೆ ಬಹುಮತ ನೀಡಿದ್ದಾರೆ. ಜನತೆ ಆಶಯಗಳಿಗೆ ತಕ್ಕಂತೆ ರಾಜ್ಯದ ಒಳಿತಿಗಾಗಿ ಈ ಸರ್ಕಾರ ಕೆಲಸ ಮಾಡಲಿ ಎಂದು ರೈತ ಸಂಘ ಶುಭ ಹಾರೈಸುತ್ತದೆ ಎಂದು ಹೇಳಿದರು.

ರೈತ ಚಳುವಳಿ, ಪ್ರಗತಿಪರ ಚಳುವಳಿ ಜೊತೆಗೆ ಪ್ರಜಾಪ್ರಭುತ್ವದ ಆಶಯ, ಸಂವಿಧಾನ ಒಪ್ಪಿಕೊಂಡ ಎಲ್ಲಾ ಮನಸ್ಸುಗಳೂ ಕರ್ನಾಟಕದಲ್ಲಿ ಇದ್ದ ಬಿಜೆಪಿ ಸರ್ಕಾರ ಕಿತ್ತೊಗೆಯಲು ತಮ್ಮದೇ ರೀತಿಯಲ್ಲಿ ಶ್ರಮ ವಹಿಸಿವೆ. ರೈತ ಸಮುದಾಯದ ಬುಡ ಅಲುಗಾಡಿಸಲು ಹೊರಟ ಪಕ್ಷವನ್ನು ಅಧಿಕಾರದಿಂದ ಕಿತ್ತೊಗೆದು ಗಟಾರಕ್ಕೆ ಸೇರಿಸಿದ ಎರಡನೇ ಉದಾಹರಣೆ ಈ ಚುನಾವಣೆ ಫಲಿತಾಂಶ ಎಂದರು.

1980ರಲ್ಲಿ ರೈತರಿಗೆ ಗುಂಡು ಹಾರಿಸಿದ ಗುಂಡೂರಾವ್ ಸರ್ಕಾರ ಮತ್ತೆ ಅಧಿಕಾರಕ್ಕೆ ಬರಲಾಗಲಿಲ್ಲ. ಸ್ವತಃ ಗುಂಡೂರಾವ್ ಸೋತರು. ಇದು ಮೊದಲ ಉದಾಹರಣೆಯಾಗಿದೆ. ಬಿಜೆಪಿ ಮತ್ತೆ ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುವುದನ್ನು ತಡೆಯುವಲ್ಲಿ ರೈತ ಚಳುವಳಿ ಪಾತ್ರವೂ ಮಹತ್ವದ್ದಾಗಿದೆ. ಇದನ್ನು ಹಲವು ಸಮೀಕ್ಷೆಗಳು ಹೇಳಿವೆ. ರೈತರು, ದಲಿತರು ಮತ್ತು ಕಾರ್ಮಿಕರು ಐಕ್ಯವಾಗಿ ಹೋರಾಟ ಮಾಡಿದೆವು. ಇದೆಲ್ಲದರ ಪರಿಣಾಮವಾಗಿ ಇದೀಗ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದ್ದು, ಕಾಂಗ್ರೆಸ್ ತಾನು ನುಡಿದಂತೆ ನಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಮೇಲುಕೋಟೆ ಕ್ಷೇತ್ರದಲ್ಲಿ ದರ್ಶನ್ ಪುಟ್ಟಣ್ಣಯ್ಯರನ್ನು ಗೆಲ್ಲಿಸಿ ರಾಜ್ಯದ ರೈತ ಸಮುದಾಯಕ್ಕೆ ಕ್ಷೇತ್ರದ ಮತದಾರರು ಕೊಡುಗೆ ನೀಡಿದ್ದಾರೆ. ಇದಕ್ಕಾಗಿ ಸರ್ವೋದಯ ಕರ್ನಾಟಕ ಪಕ್ಷ ಮತ್ತು ರೈತ ಸಂಘವು ಕ್ಷೇತ್ರದ ಮತದಾರರಿಗೆ ಕೃತಜ್ಞತೆ ಸಲ್ಲಿಸುತ್ತದೆ ಎಂದು ಹೇಳಿದರು.

ಕಾಂಗ್ರೆಸ್ ಗ್ಯಾರಂಟಿಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು, ಅನುತ್ಪಾದಕ ಹಾಗೂ ಯೋಜನೆಯೇತರ ವೆಚ್ಚಗಳಿಗೆ ಕಡಿವಾಣ ಹಾಕಿದರೆ ಗ್ಯಾರಂಟಿಗಳನ್ನು ಜಾರಿಗೊಳಿಸಲು ಸಾಧ್ಯವಿದೆ ಎಂದು ತಿಳಿಸಿದರು.

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಒತ್ತಾಯಿಸಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಪಾದಯಾತ್ರೆ ನಡೆದಿತ್ತು. ಈಗ ಕಾಂಗ್ರೆಸ್ ಅಧಿಕಾರಕ್ಕೆ ಬಂದರೂ ತಮಿಳುನಾಡಿನಲ್ಲಿ ಕಾಂಗ್ರೆಸ್ ಮಿತ್ರ ಪಕ್ಷವೇ ಅಧಿಕಾರದಲ್ಲಿ ಇರುವ ಹಿನ್ನೆಲೆಯಲ್ಲಿ ಈ ಯೋಜನೆ ಅನುಷ್ಠಾನ ಸಾಧ್ಯವೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ಮಿತ್ರ ಪಕ್ಷವೇ ಆಗಲಿ, ಒಂದೇ ಪಕ್ಷವೇ ಆಗಲಿ ಕಾಂಗ್ರೆಸ್ ಈಗ ಬದ್ಧತೆ ಪ್ರದರ್ಶಿಸಲೇಬೇಕು. ನಾವು ಕಾದು ನೋಡುತ್ತೇವೆ. ಈಗ ತಾನೆ ಅಧಿಕಾರಕ್ಕೆ ಬಂದಿರುವ ಹಿನ್ನೆಲೆಯಲ್ಲಿ ಕಾಲಾವಕಾಶ ಬೇಕು ಎಂದು ಹೇಳಿದರು. ಸಂಘದ ಮುಖಂಡರಾದ ಹೊಸಕೋಟೆ ಬಸವರಾಜು, ಪ್ರಸನ್ನ ಎನ್.ಗೌಡ, ಮಂಡಕಳ್ಳಿ ಮಹೇಶ್, ನಾಗನಹಳ್ಳಿ ವಿಜಯೇಂದ್ರ ಮರಂಕಯ್ಯ ಗೋಷ್ಠಿಯಲ್ಲಿದ್ದರು.

ಕೇಂದ್ರದಲ್ಲೂ ಅಧಿಕಾರದಿಂದ ಕಿತ್ತೊಗೆಯಬೇಕು...

ಯಾವ ಪಕ್ಷ ಅಧಿಕಾರದಲ್ಲಿದ್ದರೂ ಯಾವುದೇ ಮುಲಾಜಿಲ್ಲದೇ ವಿರೋಧ ಪಕ್ಷದಂತೆಯೇ ನ್ಯಾಯಪರ ಹೋರಾಟವನ್ನು ರೈತ ಸಂಘ ಮುಂದುವರೆಸಲಿದೆ. ನಮ್ಮದೇ ಸರ್ವೋದಯ ಕರ್ನಾಟಕ ಪಕ್ಷವಾದರೂ ಸಂಘ ಇದೇ ನಿಲುವಿಗೆ ಬದ್ಧವಾಗಿರಲಿದೆ. ಮುಂದೆ 2024ರಲ್ಲಿ ಲೋಕಸಭಾ ಚುನಾವಣೆ ಬರಲಿದ್ದು, ರಾಜ್ಯದಲ್ಲಿ ಈ ಬಾರಿಯ ಚುನಾವಣೆಯಲ್ಲಿ ಆದಂತೆ ಕೇಂದ್ರದಲ್ಲಿಯೂ ರೈತ ವಿರೋಧಿ ಪಕ್ಷವನ್ನು ಅಧಿಕಾರದಿಂದ ಕಿತ್ತೊಗೆಯಬೇಕೆಂಬ ನಿಟ್ಟಿನಲ್ಲಿ ರಾಜ್ಯ ರೈತ ಸಂಘ ಚಳವಳಿ ರೂಪಿಸಲಿದೆ.

-ಬಡಗಲಪುರ ನಾಗೇಂದ್ರ

ಮೈಸೂರು ಮಿತ್ರ

ಕಾಂಗ್ರೆಸ್‌ನಿಂದ ಸಂವಿಧಾನದ ಆಶಯಗಳಿಗೆ ಪೂರಕ ಆಡಳಿತ

ಶಾಸಕ ಡಾ.ಹೆಚ್.ಸಿ.ಮಹದೇವಪ್ಪ



ತಿ.ನರಸೀಪುರ, ಮೇ 22– ರಾಜ್ಯದಲ್ಲಿ ಬಡವರು, ಮಧ್ಯಮ ವರ್ಗದವರು ಹಾಗೂ ರೈತ ಪರವಾದ ಸರ್ಕಾರ ಅಧಿಕಾರಕ್ಕೆ ಬಂದಿರುವುದರಿಂದ ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಆಶಯಗಳಿಗೆ ಪೂರಕವಾದ ಆಡಳಿತವನ್ನು ಕಾಂಗ್ರೆಸ್ ನೀಡಲಿದೆ ಎಂದು ಶಾಸಕ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಕ್ಷೇತ್ರದ ಕಾಂಗ್ರೆಸ್ ಮುಖಂಡರು ಹಾಗೂ ಎಸ್ಸಿ/ಎಸ್ಟಿ ಗುತ್ತಿಗೆದಾರರ ಸಂಘದ ಜಿಲ್ಲಾಧ್ಯಕ್ಷ ಹೊಸಪುರ ಕೆ.ಮಲ್ಲು ಅವರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತ ನೀಡುವ ಮೂಲಕ ರಾಜ್ಯದ ಜನರು ಬಿಜೆಪಿ ದುರಾಡಳಿತ ಕೊನೆಗಾಣಿಸಿದ್ದಾರೆ. ಜನಪರ ಸರ್ಕಾರ ಅಧಿಕಾರಕ್ಕೆ ತರಲೇಬೇಕು ಎಂದು ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಕೈಗೆ ಅಧಿಕಾರ ನೀಡಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.


ಸಚಿವ ಸಂಪುಟ ರಚನೆಯಾದ ಬಳಿಕ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರ ಜೊತೆಗೂಡಿ ಕ್ಷೇತ್ರ ಪ್ರವಾಸ ಕೈಗೊಂಡು ಅಭಿವೃದ್ಧಿ ಕೆಲಸಗಳ ಜೊತೆಗೆ ಜನರಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸೋಣ. ಕ್ಷೇತ್ರದ ಜನರು ಕೂಡ ರಾಜ್ಯಾದ್ಯಂತ ಬದಲಾವಣೆ ಬಯಸಿ, ಕಾಂಗ್ರೆಸ್ ಗೆಲ್ಲಿಸಿದ್ದಕ್ಕೆ ಆಭಾರಿಯಾಗಿರೋಣ. ಸುನೀಲ್ ಬೋಸ್ ನೇತೃತ್ವದಲ್ಲಿ ಮುಂಬರುವ ಜಿಪಂ ಮತ್ತು ತಾಪಂ ಹಾಗೂ ಲೋಕಸಭೆ ಚುನಾವಣೆಗೆ ಕಾರ್ಯಕರ್ತರು ಈಗಿನಿಂದಲೇ ಸಜ್ಜಾಗಬೇಕು ಎಂದು ಮಹದೇವಪ್ಪ ಸಲಹೆ ನೀಡಿದರು.

ಚುನಾವಣೆ ಪೂರ್ವ ಪ್ರಣಾಳಿಕೆಯಲ್ಲಿ ಘೋಷಿಸಿದ್ದ 5 ಭರವಸೆಗಳನ್ನು ಮುಖ್ಯಮಂತ್ರಿ ಆಗುತ್ತಿದ್ದಂತೆ ಸಿದ್ದರಾಮಯ್ಯ ಅವರು ಈಡೇರಿಸುವ ಮೂಲಕ ನಮ್ಮದು ನುಡಿದಂತೆ ನಡೆಯುವ ಸರ್ಕಾರ ಎಂಬುದನ್ನು ಮತ್ತೊಮ್ಮೆ ಸಾಬೀತು ಪಡಿಸಿದ್ದಾರೆ. ಮುಂದಿನ 5 ವರ್ಷಗಳ ಕಾಲ ರಾಜ್ಯದ ಜನರು ಪಾರದರ್ಶಕತೆ, ಭ್ರಷ್ಟಾಚಾರ ಮುಕ್ತ ಸರ್ಕಾರದ ಆಡಳಿತ ನೋಡುವುದರಲ್ಲಿ ಯಾವುದೇ ಅನುಮಾನವಿಲ್ಲ. ಕಾಂಗ್ರೆಸ್ ಸರ್ಕಾರ ಅಭಿವೃದ್ಧಿ ಮತ್ತು ಆಡಳಿತದಲ್ಲಿ ದಕ್ಷತೆ ಕಾಯ್ದುಕೊಳ್ಳುವುದು ಖಚಿತ ಎಂದು ತಿಳಿಸಿದರು.

ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಎ.ಎನ್.ಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಕಲಿಯೂರು ವೆಂಕಟೇಶ್, ಗ್ರಾಪಂ ಸದಸ್ಯ ಸುಂದರ ನಾಯಕ, ಗುತ್ತಿಗೆದಾರ ಕೇತಹಳ್ಳಿ ಮಂಜು, ಮುಖಂಡ ಮೂಗೂರು ಗುರುಸಿದ್ದಪ್ಪ ಹಾಗೂ ಇನ್ನಿತರರಿದ್ದರು.

ಕಸುವಿನಹಳ್ಳಿಯಲ್ಲಿ ಅದ್ದೂರಿ ಬಸವ ಜಯಂತಿ





ನಂಜನಗೂಡು, ಮೇ 22– ತಾಲೂಕಿನ ಕಸುವಿನಹಳ್ಳಿಯಲ್ಲಿ ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಬಸವಣ್ಣನವರ ಉತ್ಸವಮೂರ್ತಿಗೆ ಮೈಸೂರಿನ ಬಸವ ಕೇಂದ್ರದ ಶ್ರೀ ಬಸವ ಯೋಗಿ ಪ್ರಭು ಸ್ವಾಮೀಜಿ ಹಾಗೂ ಹರಗುರು ಚರಮೂರ್ತಿಗಳು ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಬಸವಣ್ಣನ ಉತ್ಸವಮೂರ್ತಿ ಜೊತೆಗೆ ಅಷ್ಟಗಣಾಂಗಳ ಶರಣರ ಉತ್ಸವ, ನಂದಿ ಕುಣಿತ, ಸತ್ತಿಗೆ, ಮಂಗಳವಾದ್ಯ, ವೀರಗಾಸೆ ಕುಣಿತ, ಕಂಸಾಳೆ ಕುಣಿತಗಳು ಮೆರವಣಿಗೆಗೆ ಮೆರಗು ನೀಡಿದವು. ಬಸವಣ್ಣ ಅವರ ಉತ್ಸವ ಮೂರ್ತಿಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ಮೆರವಣಿಗೆ ಮಾಡಲಾಯಿತು. ಈ ವೇಳೆ ಗ್ರಾಮಸ್ಥರು ಬಸವಣ್ಣನಿಗೆ ಪೂಜೆ ನೆರವೇರಿಸಿದರು. ನಂತರ ಭಕ್ತರಿಗೆ ಅನ್ನ ಅಂತರ್ಪಣೆ ನಡೆಯಿತು.

ಈ ವೇಳೆ ವಿಶ್ವ ಬಸವ ಸೇನೆ ಮತ್ತು ಜಾಗತಿಕ ಲಿಂಗಾಯಿತ ಮಹಾಸಭೆ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಕಾರ್ಯಕರ್ತರು, ಬಸವಾದಿ ಶರಣರು, ಶರಣೆಯರು, ಗ್ರಾಮದ ಮುಖಂಡರು, ಯುವಕರು, ಅಕ್ಕಪಕ್ಕದ ಗ್ರಾಮಸ್ಥರು ಪಾಲ್ಗೊಂಡಿದ್ದರು.

ಕೆ.ಆರ್.ನಗರ: ಹಳೇ ವಸ್ತುಗಳ ಶೇಖರಣಾ ಘಟಕಕ್ಕೆ ಚಾಲನೆ



ಕೆ.ಆರ್.ನಗರ, ಮೇ 22– ಪಟ್ಟಣದ ಸ್ವಚ್ಛತೆ ಮತ್ತು ಹಳೇ ವಸ್ತುಗಳ ಶೇಖರಣೆಗಾಗಿ ಪುರಸಭೆ ವ್ಯಾಪ್ತಿಯಲ್ಲಿ 2 ತ್ಯಾಜ್ಯ ಶೇಖರಣಾ ಘಟಕ ತೆರೆಯಲಾಗಿದೆ ಎಂದು ಪುರಸಭಾ ಮುಖ್ಯಾಧಿಕಾರಿ ಸುಧಾರಾಣಿ ತಿಳಿಸಿದರು.

ಪಟ್ಟಣದ ಪುರಸಭೆ ಮಳಿಗೆಯಲ್ಲಿ ನನ್ನ ಜೀವನ ನನ್ನ ಸ್ವಚ್ಛ ನಗರ ಕಾರ್ಯಕ್ರಮದಡಿ ಹಳೇ ವಸ್ತುಗಳ ಶೇಖರಣಾ ಘಟಕಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಜೂ.5ರವರೆಗೆ ಈ ಕಾರ್ಯಕ್ರಮ ನಡೆಯಲಿದ್ದು, ಪಟ್ಟಣದ ಗಾಂಧಿ ಪಾರ್ಕ್ ಮತ್ತು ಪತ್ರಕರ್ತರ ಭವನದ ಪಕ್ಕದಲ್ಲಿರುವ ಪುರಸಭೆ ಮಳಿಗೆ ತೆರೆಯಲಾಗಿದೆ. ಸಾರ್ವಜನಿಕರು ಹಳೇ ವಸ್ತುಗಳನ್ನು ನೀಡುವ ಮೂಲಕ ಪಟ್ಟಣದ ಸ್ವಚ್ಛತೆಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಮನೆಯಲ್ಲಿರುವ ಹಳೇ ವಸ್ತುಗಳಾದ ಸಮವಸ್ತ್ರ, ದಿನಪತ್ರಿಕೆಗಳು, ಆಟಿಕೆಗಳು, ಹಳೆ ಪುಸ್ತಕಗಳು, ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್‌ಗಳು, ಸೀರೆ ಸೇರಿದಂತೆ ಉಪಯೋಗಕ್ಕೆ ಬಾರದ ಎಲೆಕ್ಟ್ರಾನಿಕ್ ಉಪಕರಣಗಳು ಸೇರಿದಂತೆ ಇನ್ನಿತರ ವಸ್ತುಗಳನ್ನು ಈ ಘಟಕಕ್ಕೆ ನೀಡುವ ಮೂಲಕ ಪುರಸಭೆ ವತಿಯಿಂದ ಕಸಿಮಾಡಿದ ಗೊಬ್ಬರ, ನೋಟ್‌ಬುಕ್ ಮತ್ತು ಪೆನ್ನು, ಪೆನ್ಸಿಲ್‌ಗಳನ್ನು ಪಡೆಯಬಹುದಾಗಿದೆ ಎಂದರು.

ಪುರಸಭೆಯಿಂದ ಈಗಾಗಲೇ ಪಟ್ಟಣದ ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ. ನನ್ನ ಜೀವನ ನನ್ನ ಸ್ವಚ್ಛ ನಗರ ಅಭಿಯಾನದಡಿ ಸಂಗ್ರಹಿಸಲಾದ ವಸ್ತುಗಳನ್ನು ಮೈಸೂರು ಜಿಲ್ಲಾ ಕೇಂದ್ರಕ್ಕೆ ಕಳಿಸಲಾಗುವುದು ಎಂದರು. ಸಾರ್ವಜನಿಕರು ಈ ಕಾರ್ಯಕ್ರಮವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಪುರಸಭಾ ಸದಸ್ಯ ತೋಂಟದಾರ್ಯ, ಪರಿಸರ ಅಭಿಯಂತರ ರೀತುಸಿಂಗ್, ಅಭಿಯಂತರೆ ಸೌಮ್ಯ, ಕಿರಿಯ ಆರೋಗ್ಯ ನಿರೀಕ್ಷಕ ಎಚ್.ಎಸ್.ಲೋಕೇಶ್, ಮುಖಂಡರಾದ ಧರ್ಮೇಂದ್ರ, ಪುಟ್ಟರಾಜ್, ನವಾಜ್, ವೃಷಭೇಂದ್ರಪ್ಪ, ಮಹದೇವ, ಕುಮಾರ್, ಪ್ರಮೋದ್, ಅಮಿತ್, ರಘು ಸೇರಿದಂತೆ ಇನ್ನಿತರರಿದ್ದರು.

ಪ್ಲಾಸ್ಟಿಕ್ ಮುಕ್ತ ಪಟ್ಟಣಕ್ಕೆ ಜನತೆ ಸಹಕಾರ ಅಗತ್ಯ



ಸರಗೂರು, ಮೇ 22– ಪಟ್ಟಣವನ್ನು ಪ್ಲಾಸ್ಟಿಕ್ ಮುಕ್ತ ಮಾಡಲು ಸಾರ್ವಜನಿಕರ ಸಹಕಾರ ಅಗತ್ಯ ಎಂದು ಪಪಂ ಅಧ್ಯಕ್ಷೆ ರಾಧಿಕಾ ತಿಳಿಸಿದರು.

ಪಟ್ಟಣದ ಸಂತೇಮಾಳದಲ್ಲಿರುವ ಆರ್‌ಆರ್ ಆರ್ ಕೇಂದ್ರದಲ್ಲಿ ಪಟ್ಟಣ ಪಂಚಾಯಿತಿ ವತಿಯಿಂದ ಆಯೋಜಿಸಿದ್ದ ನನ್ನ ಜೀವನ ನನ್ನ ಸ್ವಚ್ಛ ನಗರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತ್ಯಾಜ್ಯ ಉತ್ಪಾದನೆಗೆ ಕಡಿವಾಣ ಹಾಕಿ, ಮರು ಬಳಕೆ ಮತ್ತು ಮರು ಉಪಯೋಗಕ್ಕೆ ಆದ್ಯತೆ ನೀಡಲು, ಸುಸ್ಥಿರ ಜೀವನ ಪದ್ಧತಿ ಅಳವಡಿಸಿಕೊಳ್ಳುವ ಮೂಲಕ ಪರಿಸರ ರಕ್ಷಿಸುವ ಪ್ರಮುಖ ಉದ್ದೇಶದಿಂದ 'ನನ್ನ ಜೀವನ ನನ್ನ ಸ್ವಚ್ಛ ನಗರ ಯೋಜನೆ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಮುಖ್ಯಾಧಿಕಾರಿ ಮಂಜುನಾಥ್ ಮಾತನಾಡಿ, ಈ ಕಾರ್ಯಕ್ರಮ ಜೂ.5ರವರೆಗೆ ನಡೆಯಲಿದೆ. ಪಟ್ಟಣದ ನಿವಾಸಿಗಳು ಹಾಗೂ ನಾಗರಿಕರು ಮರು ಬಳಕೆಗೆ ಯೋಗ್ಯವಿರುವ ಹಳೆಯ ಬಟ್ಟೆಗಳು, ಸಮವಸ್ತ್ರ, ಸೀರೆಗಳು ಇತ್ಯಾದಿ, ಪ್ಲಾಸ್ಟಿಕ್ ಚೀಲಗಳು, ಆಟಿಕೆ ಸಾಮಾನುಗಳು, ಹಳೆಯ ಪುಸ್ತಕಗಳು ಹಾಗೂ ಎಲೆಕ್ಟ್ರಾನಿಕ್ ತ್ಯಾಜ್ಯಗಳನ್ನು ಬಯಲಿಗೆ ಬಿಸಾಡದೆ ಆರ್‌ಆರ್ ಆರ್ ಸೆಂಟರ್‌ಗೆ ನೀಡಬೇಕು ಎಂದರು.

ಈ ವೇಳೆ ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ವಿನಾಯಕಪ್ರಸಾದ್, ಸ್ಥಾಯಿ ಸಮಿತಿ ಅಧ್ಯಕ್ಷೆ ಉಮಾರಾಮು, ಸದಸ್ಯ ವೀರೇಶ್, ರಾಮು, ರಮೇಶ್, ಸ್ವಾಮಿ, ಮುಖ್ಯಾಧಿಕಾರಿ ಮಂಜುನಾಥ್, ಆರೋಗ್ಯಾಧಿಕಾರಿ ಸಂತೋಷ್, ಪಳನಿಸ್ವಾಮಿ, ಶಿವಕುಮಾರ್, ಅರ್ಜುನ, ಕುಮಾರ್, ಆರ್ಮುಗ, ಸೋಮು, ಚಿನ್ನಸ್ವಾಮಿ ಸೇರಿದಂತೆ ಇನ್ನಿತರರಿದ್ದರು.

ವೈಜ್ಞಾನಿಕ ಬೀಜ ಸಂಸ್ಕರಣೆಯಿಂದ ರೈತರಿಗೆ ಲಾಭ

ಕೃಷಿ ಇಲಾಖೆ ಆತ್ಮಯೋಜನೆ ತಾಂತ್ರಿಕ ವ್ಯವಸ್ಥಾಪಕ ಡಾ.ಡಿ.ಪಿ. ರಾಜೇಶ್



ಹೆಚ್.ಡಿ.ಕೋಟೆ, ಮೇ 22– ವಿಜ್ಞಾನಿಗಳು ಮತ್ತು ಅಧಿಕಾರಿಗಳ ಸಲಹೆ, ಸೂಚನೆಗಳ ಪ್ರಕಾರ ವೈಜ್ಞಾನಿಕ ಬೀಜ ಸಂಸ್ಕರಣೆಯಿಂದ ರೈತರಿಗೆ ಹೆಚ್ಚು ಲಾಭ ಎಂದು ಕೃಷಿ ಇಲಾಖೆ ಆತ್ಮಯೋಜನೆ ತಾಂತ್ರಿಕ ವ್ಯವಸ್ಥಾಪಕ ಡಾ.ಡಿ.ಪಿ.ರಾಜೇಶ್ ತಿಳಿಸಿದರು.

ತಾಲೂಕಿನ ಅಂತರಸಂತೆ ಹೋಬಳಿ ನೂರಲಕುಪ್ಪೆ ಗ್ರಾಮದಲ್ಲಿ ರೈತರಿಗೆ ಬೀಜೋಪಚಾರದ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗುಣಮಟ್ಟದ ಬಿತ್ತನೆ ಬೀಜಗಳು ಹೆಚ್ಚಿನ ಮೊಳಕೆ ಪ್ರಮಾಣ ಹೊಂದಿರುತ್ತದೆ. ಅಲ್ಲದೇ ಅನುವಂಶಿಯಾಗಿ ಶುದ್ಧವಾಗಿದ್ದು ಬೆರಕೆ ಬೀಜಗಳಿಂದ ಮುಕ್ತವಾಗಿರುತ್ತದೆ. ಇವುಗಳಿಗೆ ರೋಗ ಮತ್ತು ಕೀಟಗಳ ಬಾಧೆ ಇರುವುದಿಲ್ಲ. ಬೀಜಗಳು ಒಂದೇ ವೇಗದಲ್ಲಿ ಮೊಳಕೆ ಹೊಡೆಯುವುದರಿಂದ, ಭೂಮಿಯಲ್ಲಿ ಎಲ್ಲಾ ಸಸ್ಯಗಳು ಆರೋಗ್ಯಕರವಾಗಿ ಬೆಳೆಯುತ್ತವೆ ಮತ್ತು ಅದೇ ಸಮಯದಲ್ಲಿ ಕೊಯ್ಲು ಮಾಡಲಾಗುತ್ತದೆ. ಇದರಿಂದ ಶೇ.25ರಷ್ಟು ಇಳುವರಿ ಹೆಚ್ಚು ಪಡೆಯಬಹುದಾಗಿದೆ. ಅಲ್ಲದೇ ವೈಜ್ಞಾನಿಕ ಬೀಜೋಪಚಾರದಿಂದ ಹಣ ಖರ್ಚು ಕಡಿಮೆ ಮಾಡಬಹುದು ಎಂದರು.

ರಾಸಾಯನಿಕ ಗೊಬ್ಬರ ಬಳಕೆ ಕಡಿಮೆ ಮಾಡಿ ಮಣ್ಣಿನ ಫಲವತ್ತತೆ ಕಾಪಾಡಿಕೊಳ್ಳಬಹುದು. ಸಾರಜನಕ ಹೊರಸೂಸುವಿಕೆಯನ್ನು 15 ರಿಂದ 20% ರಷ್ಟು ಕಡಿಮೆ ಮಾಡಬಹುದು ಎಂದರು.

ರಾಗಿಯನ್ನು ಚೀಲದ ಮೇಲೆ ಹರಡಿ, ನಂತರ 50 ಗ್ರಾಂ ಬೆಲ್ಲ ಮತ್ತು 500 ಎಂಎಲ್ ನೀರಿನ ಜೊತೆ ಸೇರಿಸಿ ಚೆನ್ನಾಗಿ ಕುದಿಸಿ ಪಾಕ ಮಾಡಿದ ನಂತರ, ಬೆಲ್ಲದ ದ್ರಾವಣದ ಪಾಕವನ್ನು ರಾಗಿ ಮೇಲೆ ಲೇಪನ ಮಾಡಿ ನಂತರ ಅಜೋಸ್ಪಿರಿಲ್ಲಮ್, ಕಾರ್ಬಂಡೈಜಿನ್ ಒಂದು ಪ್ಯಾಕೆಟ್ ಅನ್ನು ಐದು ಕೆಜಿ ರಾಗಿ ಮೇಲೆ ಲೇಪನ ಮಾಡಿ ರಾಗಿಯನ್ನು ಚೆನ್ನಾಗಿ ಕಲಸಿ ಮರದ ನೆರಳಿನಲ್ಲಿ ಎರಡರಿಂದ ನಾಲ್ಕು ತಾಸು ಒಣಗಿಸಿ ನಂತರ ಬಿತ್ತನೆ ಬಿತ್ತಬಹುದು ಎಂದರು. ಈ ವೇಳೆ ನಂಜುಂಡಸ್ವಾಮಿ, ಮಂಜುನಾಥ್, ಪ್ರಕಾಶ ಮತ್ತು ಕೃಷ್ಣನಾಯಕ್ ಇದ್ದರು.

ಇಂದು ವಿದ್ಯುತ್ ವ್ಯತ್ಯಯ

ಹನಗೋಡು, ಮೇ 22– ಇಲ್ಲಿನ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕಾರ್ಯ ಹಮ್ಮಿಕೊಂಡಿರುವುದರಿಂದ ಮೇ 23ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಹನಗೋಡು, ಹಿಂಡಗೂಡ್ಲು, ಕಿರಂಗೂರು, ಕರುಣಕುಪ್ಪೆ, ದೊಡ್ಡಹೆಜ್ಜೂರು, ನೇರಳಕುಪ್ಪೆ, ಕೊಳವಿಗೆ, ಕಡೆಮನಗನಹಳ್ಳಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ

ಆರ್‌ಆರ್‌ಆರ್ ಸೆಂಟರ್, ಕಸ ಸಂಗ್ರಹ ವಾಹನಕ್ಕೆ ಚಾಲನೆ



ತಿ.ನರಸೀಪುರ ಮೇ 22– ತ್ಯಾಜ್ಯ ವಿಲೇವಾರಿ ಸಮಸ್ಯೆ ನಿವಾರಿಸಲು ತ್ಯಾಜ್ಯ ಉತ್ಪಾದನೆಗೆ ಕಡಿವಾಣ ಹಾಕಿ, ಮರು ಬಳಕೆ ಮತ್ತು ಮರು ಉಪಯೋಗಕ್ಕೆ ಆದ್ಯತೆ ನೀಡಲು ಪಟ್ಟಣದ ನಾಗರಿಕರು ರೆಡ್ಯೂಸ್, ರಿಯೂಸ್, ರಿಸೈಕಲ್(ಆರ್‌ಆರ್‌ಆರ್) ಸೆಂಟರ್ ಅನ್ನು ಕಡ್ಡಾಯವಾಗಿ ಬಳಸಿಕೊಳ್ಳಬೇಕು ಎಂದು ಪುರಸಭೆ ಸದಸ್ಯ ಸಿ.ಪ್ರಕಾಶ್ ಮನವಿ ಮಾಡಿದರು.

ಪಟ್ಟಣದ ಪುರಸಭೆ ಮುಂಭಾಗ ಸೋಮವಾರ ನಗರಾಭಿವೃದ್ಧಿ ಇಲಾಖೆಯ ನನ್ನ ಜೀವನ– ನನ್ನ ಸ್ವಚ್ಛನಗರ ಕಾರ್ಯಕ್ರಮದಡಿ ತೆರೆದಿರುವ ಆರ್‌ಆರ್‌ಆರ್ ಸೆಂಟರ್ ಉದ್ಘಾಟನೆ ಕಾರ್ಯಕ್ರಮದಲ್ಲಿ ಕಸ ಸಂಗ್ರಹ ವಾಹನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಘನ ತ್ಯಾಜ್ಯ ವಸ್ತುಗಳ ಪ್ರಮಾಣ ಹೆಚ್ಚುತ್ತಿರುವುದರಿಂದ ತ್ಯಾಜ್ಯವನ್ನು ರೆಡ್ಯೂಸ್, ರಿಯೂಸ್ ಹಾಗೂ ರಿಸೈಕಲ್ ಮಾಡಲು ತೆರೆದಿರುವ ಸೆಂಟರ್ ಅನ್ನು ಪ್ರತಿಯೊಬ್ಬರೂ ಬಳಕೆ ಮಾಡಲೇಬೇಕಾದ ಅನಿವಾರ್ಯತೆ ಇದೆ ಎಂದರು.

ಪರಿಸರ ಜೆಇ ಲೋಕೇಶ್ವರಿ ಮಾತನಾಡಿ, ಪಟ್ಟಣದ ನಿವಾಸಿಗಳು ಹಾಗೂ ನಾಗರಿಕರು ಮರು ಬಳಕೆಗೆ ಯೋಗ್ಯವಿರುವ ಹಳೆಯ ಬಟ್ಟೆಗಳು, ಸಮವಸ್ತ್ರ, ಸೀರೆಗಳು ಇತ್ಯಾದಿ, ಪ್ಲಾಸ್ಟಿಕ್ ಚೀಲಗಳು, ಆಟಿಕೆ ಸಾಮಾನುಗಳು, ಹಳೆಯ ಪುಸ್ತಕಗಳು ಹಾಗೂ ಎಲೆಕ್ಟ್ರಾನಿಕ್ ತ್ಯಾಜ್ಯಗಳನ್ನು ಬಯಲಿಗೆ ಬಿಸಾಡದೆ ಆರ್‌ಆರ್‌ಆರ್ ಸೆಂಟರ್‌ನ ಕಸ ಸಂಗ್ರಹ ವಾಹನಕ್ಕೆ ನೀಡಬೇಕು. ಇಂತಹ ವಸ್ತುಗಳು ತ್ಯಾಜ್ಯವಾಗಲು ಬಿಡದೆ ಮರುಬಳಕೆ ಹಾಗೂ ಉಪಯೋಗ ವಾಗುವಂತೆ ಮಾಡುತ್ತೇವೆ ಎಂದು ತಿಳಿಸಿದರು.

ಆರ್‌ಆರ್‌ಆರ್ ಸೆಂಟರ್ ಅನ್ನು ಪುರಸಭಾ ಉಪಾಧ್ಯಕ್ಷೆ ನಾಗರತ್ನ ಮಾದೇಶ್ ಉದ್ಘಾಟಿಸಿದರು. ಸದಸ್ಯರಾದ ಆರ್.ನಾಗರಾಜು, ರೂಪಶ್ರೀ ಪರಮೇಶ್, ಮಹದೇವಮ್ಮ, ಕೆ.ಗಣೇಶ್, ಮುಖ್ಯಾಧಿಕಾರಿ ಬಿ.ಕೆ. ವಸಂತ ಕುಮಾರಿ, ಗ್ರಾಪಂ ಮಾಜಿ ಸದಸ್ಯ ಹೇಮಂತ್ ಕುಮಾರ್, ಸಮುದಾಯ ಸಂಘಟಕ ಮಹದೇವ್, ಇಂಜಿನಿಯರ್ ನಾಗರಾಜು, ಸಿಬ್ಬಂದಿಗಳಾದ ಸಿದ್ದಯ್ಯ, ಪುಟ್ಟಸ್ವಾಮಿ ಹಾಗೂ ಪೌರಕಾರ್ಮಿಕರು ಹಾಜರಿದ್ದರು.

ಗಾವಡಗೆರೆಯಲ್ಲಿ ಉಚಿತ ಹೃದಯ ತಪಾಸಣಾ ಶಿಬಿರ



ಗಾವಡಗೆರೆ, ಮೇ 22– ಒತ್ತಡದ ಬದುಕು, ಗುರಿ ಇಲ್ಲದ ಜೀವನ ಶೈಲಿ, ಧೂಮಪಾನ, ಮದ್ಯಪಾನಗಳಿಂದ ಯುವಕರು ಹೊರಬಂದರೆ ಮಾತ್ರ ಸ್ವಾಸ್ಥ್ಯ ಸಮಾಜ ನಿರ್ಮಾಣ ಸಾಧ್ಯ ಎಂದು ಹೃದಯತಜ್ಞ ಡಾ.ಮುರುಳಿ ರಾವ್ ಶಿಂಧೆ ತಿಳಿಸಿದರು.


ಗ್ರಾಮದ ಶ್ರೀ ಶಿವ ಛತ್ರಪತಿ ಮರಾಠ ಭವನದಲ್ಲಿ ಭಾರತೀಯ ವೈದ್ಯಕೀಯ ಸಂಘ ಕೃಷ್ಣರಾಜನಗರ, ಮುಕ್ತ ಹೃದ್ರೋಗ ಕೇಂದ್ರ, ರಾಯಚೂರು, ಶ್ರೀ ಶಿವ ಛತ್ರಪತಿ ಮರಾಠ ಶ್ರೇಯೋಭಿವೃದ್ಧಿ ಸಮಿತಿ ಗಾವಡಗೆರೆ, ರೋಟರಿ ಕ್ಲಬ್ ಹುಣಸೂರು ಇವರ ಸಂಯುಕ್ತಾಶ್ರಯದಲ್ಲಿ ಭಾನುವಾರ ನಡೆದ ಉಚಿತ ಹೃದಯ ತಪಾಸಣಾ ಶಿಬಿರದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದ ಅವರು, ಜನರ ಆರೋಗ್ಯದ ದೃಷ್ಟಿಯಿಂದ ವರ್ಷಕ್ಕೆ 2 ಬಾರಿ ಉಚಿತ ಹೃದಯ ತಪಾಸಣಾ ಶಿಬಿರ ಆಯೋಜಿಸಲಾಗುವುದು ಎಂದರು. ಇದೇ ವೇಳೆ ಗಾವಡಗೆರೆ ಹಾಗೂ ಮುಳ್ಳೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ತಲಾ ಒಂದೊಂದು ಇಸಿಜಿ ಯಂತ್ರಗಳನ್ನು ಕೊಡುಗೆ ನೀಡಿದರು.

ಶಿಬಿರ ಉದ್ಘಾಟಿಸಿ ಮಾತನಾಡಿದ ಹಿರಿಯ ವೈದ್ಯ ಡಾ.ಕಿರಣ್, ಜನರು ಆಹಾರ ಪದ್ಧತಿ, ಜೀವನ ಶೈಲಿ ಬದಲಾಯಿಸಿಕೊಳ್ಳಬೇಕು. ಇದರಿಂದ ಮನುಷ್ಯ ಆರೋಗ್ಯದಿಂದ ಇರಬಹುದು ಎಂದರು.

ಭಾರತೀಯ ವೈದ್ಯಕೀಯ ಸಂಘದ ಕಾರ್ಯದರ್ಶಿ ಡಾ.ಅಜೇಯ್, ಡಾ.ಸುನೀಲ್, ಡಾ. ಪ್ರದ್ಯುಮ್ನ ಮಾತನಾಡಿದರು. ಇದೇ ವೇಳೆ ಗಾವಡಗೆರೆ ಸುತ್ತಮುತ್ತಲ ಗ್ರಾಮಸ್ಥರು ಡಾ.ಮುರುಳಿ ರಾವ್ ಶಿಂಧೆ ಅವರ ಕಾರ್ಯ ಶ್ಲಾಘಿಸಿ ಸನ್ಮಾನಿಸಿದರು. ಅಲ್ಲದೇ ಸೇವಾ ಕಾರ್ಯಗಳಿಗೆ ವಿನಿಯೋಗಿಸಿಕೊಳ್ಳುವಂತೆ 40 ಸಾವಿರ ರೂ.ಗಳನ್ನು ಮಾಜಿ ಸೈನಿಕರ ಮುಖ್ಯಸ್ಥ ಕಿಶೋರ್ ಕದಂ ನೀಡಿದರು.

ಶಿಬಿರದಲ್ಲಿ ಬಿಪಿ, ಶುಗರ್, ಇಸಿಜಿ, ಎಕೋ, ಕೊಲೆಸ್ಟ್ರಾಲ್ ಪರೀಕ್ಷಿಸಿ ಚಿಕಿತ್ಸೆ ನೀಡಲಾಯಿತು. ಶಿಬಿರದಲ್ಲಿ 400ಕ್ಕೂ ಹೆಚ್ಚು ಜನರು ತಪಾಸಣೆಗೊಳಪಟ್ಟು, ಶಿಬಿರದ ಪ್ರಯೋಜನ ಪಡೆದರು. ಶಿಬಿರದಲ್ಲಿ ಸಮಿತಿ ಅಧ್ಯಕ್ಷ ಹೊನ್ನಪ್ಪರಾವ್ ಕಾಳಿಂಗೆ, ಗೌರವಾಧ್ಯಕ್ಷೆ ಅನ್ನಪೂರ್ಣ ಬಾಯಿ, ಕಾರ್ಯಾಧ್ಯಕ್ಷ ವೀರೇಶ್ ರಾವ್, ಉಪಾಧ್ಯಕ್ಷ ನಾಗರಾಜ ರಾವ್ ಮತಾಲೆ, ಖಜಾಂಚಿ ಕೃಷ್ಣೋಜಿರಾವ್, ಸಂಘಟನಾ ಕಾರ್ಯದರ್ಶಿ ಜಿ.ವಿ.ಶ್ರೀನಾಥ್, ಸದಸ್ಯರಾದ ಅನಿಲ್ ಸೂರ್ಯವಂಶೆ, ಸತ್ಯಪ್ಪ, ಶ್ರೀನಾಥ್. ಪಿ.ಮಹದೇವ ರಾವ್, ಭಾನುಮತಿ ಬಾಯಿ, ಮೀನಾ ಬಾಯಿ, ಮುಕ್ತಾಬಾಯಿ, ತ್ರಿವೇಣಿ ಬಾಯಿ, ಸಜ್ಜನ್ ರಾವ್, ಅಂಬರೀಶ್, ಶ್ರೀನಿವಾಸ್ ರಾವ್, ಪ್ರಮೋದ್, ಪಾಷಶಿಂಧೆ, ಹಿರಿಯ ತಜ್ಞ ವೈದ್ಯರು, ಅಧಿಕಾರಿಗಳು ಹಾಜರಿದ್ದರು.

ಮೃತ ರೈತನ ಪತ್ನಿಗೆ ಚೆಕ್ ವಿತರಣೆ



ಸಿಡಿಲು ಬಡಿದು ಮೃತಪಟ್ಟ ಪಿರಿಯಾಪಟ್ಟಣ ತಾಲೂಕಿನ ಆವರ್ತಿ ಗ್ರಾಮದ ರೈತ ಲೋಕೇಶ್ ಅವರ ಮನೆಗೆ ಭೇಟಿ ನೀಡಿದ ತಹಸೀಲ್ದಾರ್ ಕುಂಞ ಅಹಮದ್, ಮೃತರ ಪತ್ನಿಗೆ 5 ಲಕ್ಷ ರೂ.ಗಳ ಪರಿಹಾರಧನದ ಚೆಕ್ ವಿತರಿಸಿದರು. ಈ ವೇಳೆ ಉಪ ತಹಶೀಲ್ದಾರ್ ಮಹೇಶ್, ಕಂದಾಯ ನಿರೀಕ್ಷಕ ಪ್ರದೀಪ್, ಮುಖಂಡರಾದ ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಚಂದ್ರಶೇಖರ್, ಮಹದೇವಪ್ಪ, ರವಿಕುಮಾರ್, ಪ್ರಮೋದ್, ಲೋಕೇಶ್, ಯೋಗಣ್ಣ ಸೇರಿದಂತೆ ಇನ್ನಿತರರಿದ್ದರು.

ಭಾರೀ ಮಳೆ: ಮನೆ ಮೇಲೆ ಮರ ಬಿದ್ದು ಮಹಿಳೆಗೆ ಗಾಯ



ಮಲ್ಲುಂಡಿ, ಮೇ 22– ಭಾನುವಾರ ರಾತ್ರಿ ಸುರಿದ ಭಾರೀ ಮಳೆಗೆ ಮನೆ ಮೇಲೆ ಮರ ಬಿದ್ದು ಮಹಿಳೆ ಗಾಯಗೊಂಡಿರುವ ಘಟನೆ ನಂಜನಗೂಡು ತಾಲೂಕಿನ ಹೆಡಿಯಾಲ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಶಿವಮ್ಮ ಗಾಯಗೊಂಡವರು. ಭಾನುವಾರ ರಾತ್ರಿ ಸುರಿದ ಭಾರೀ ಗಾಳಿ ಮಳೆ ವೇಳೆ ಮನೆ ಮೇಲೆ ಮರ ಬಿದ್ದಿದೆ. ಈ ವೇಳೆ ಮನೆಯಲ್ಲಿ ಮಲಗಿದ್ದ ಶಿವಮ್ಮ ಅವರ ತಲೆಗೆ ಗಾಯವಾಗಿ, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ತಕ್ಷಣ ಅವರನ್ನು ಸ್ಥಳೀಯ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಯಿತು. ವಿಷಯ ತಿಳಿದ ಗ್ರಾಪಂ ಅಧಿಕಾರಿ ಕರಿಯಪ್ಪ, ಗ್ರಾಪಂ ಸದಸ್ಯ ಅಶ್ರಫ್ ಅಲಿ ಮಹಿಳೆಗೆ ಸಾಂತ್ವನ ಹೇಳಿ ಚಿಕಿತ್ಸೆಗಾಗಿ 3 ಸಾವಿರ ರೂ.ಗಳ ಚೆಕ್ ನೀಡಿದರು.

ಗುರುಮಲ್ಲಪ್ಪ ನಿಧನ



ಸರಗೂರು, ಮೇ 22– ತಾಲೂಕಿನ ದೇವಲಾಪುರ ಗ್ರಾಮದ ತೋಟದಮನೆ ಗುರುಮಲ್ಲಪ್ಪ (80) ಸೋಮವಾರ ನಿಧನರಾದರು. ಮೃತರು ಐವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಾಮೂಹಿಕ ಉಪನಯನ

ಮೈಸೂರು, ಮೇ 22– ಮೈಸೂರು ಜಿಲ್ಲಾ ಬ್ರಾಹ್ಮಣ ಮಹಾಸಭಾ, ಸಂಧ್ಯಾ ಸುರಕ್ಷಾ ಟ್ರಸ್ಟ್, ಕರ್ನಾಟಕ ಬ್ರಾಹ್ಮಣ ಹಿರಿಯ ನಾಗರಿಕ ವೇದಿಕೆ ಹಾಗೂ ಬ್ರಾಹ್ಮಣ ಧರ್ಮ ಸಂಸ್ಕಾರ ಪ್ರತಿಷ್ಠಾನದ ಸಹ ಯೋಗದಲ್ಲಿ ಜೂ.9ರಂದು ಸಾಮೂಹಿಕ ಉಪನಯನ ಏರ್ಪಡಿಸಿದ್ದು, ಆಸಕ್ತ ತ್ರಿಮತಸ್ಥ ಬ್ರಾಹ್ಮಣರು ಮೇ 30 ರೊಳಗೆ ನೋಂದಣಿ ಮಾಡಿಕೊಳ್ಳಬಹುದು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ ರಾಜ್ಯ ಉಪಾಧ್ಯಕ್ಷ ಬಿ.ಆರ್. ನಟರಾಜ್ ಜೋಯಿಸ್ ನೇತೃತ್ವದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ತ್ರಿಮ ತಸ್ಥ ಪೀಠಾಧಿಪತಿಗಳ ಸಮ್ಮುಖದಲ್ಲಿ ವಟುವಿಗೆ ಬ್ರಹ್ಮೋಪದೇಶ ಬೋಧಿಸ ಲಾಗುವುದು. ಮಾಹಿತಿಗೆ ಮೊ.ಸಂ. 8088799540 ಸಂಪರ್ಕಿ ಸಬಹುದು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವಲಯ ಕಾರ್ಯ ದರ್ಶಿ ಎಂ.ಎಸ್.ಅನಂತ ಪ್ರಸಾದ್ ತಿಳಿಸಿದ್ದಾರೆ.

ಸಾರ್ವಜನಿಕ ತಿಳುವಳಿಕೆ

ನಮ್ಮ ಕಕ್ಷಿದಾರರಾದ ಮೈಸೂರಿನ ಮಹೇಶ್.ಕೆ. ರವರು ಷೆಡ್ಯೂಲ್‌ನಲ್ಲಿ ನಮೂದು ಮಾಡಿರುವ ಸ್ವತ್ತನ್ನು ಮೈಸೂರು ಸಿಟಿ, 3ನೇ ಹಂತ, ದಟ್ಟಗಳ್ಳಿ, ಮನೆ ನಂ. 2082 ರಲ್ಲಿ ವಾಸವಾಗಿರುವ ಲೇಟ್ ಬಿ.ಜೆ. ಅಶೋಕ್ ಕುಮಾರ್ ರವರ ಮಗನಾದ ಶ್ರೀ ವಿಕ್ರಂ. ಎಂ.ಎ. ಇವರಿಂದ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಒಪ್ಪಂದ ಮಾಡಿಕೊಂಡಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತು ಶ್ರೀ ವಿಕ್ರಂ. ಎಂ.ಎ. ರವರ ಸಂಪೂರ್ಣ ಮಾಲೀಕತ್ವಕ್ಕೆ ಒಳಪಟ್ಟಿರುತ್ತದೆಂದು ದೃಢೀಕರಿಸಿರುತ್ತಾರೆ.

ಆದಾಗಿ ಸಾರ್ವಜನಿಕರಲ್ಲಿ ಷೆಡ್ಯೂಲ್ ಸ್ವತ್ತಿನ ವ್ಯವಹಾರದ ಬಗ್ಗೆ ಏನಾದರೂ ತಂಟೆ ತಕರಾರು, ಆಕ್ಷೇಪಣೆ ಹಾಗೂ ಹಕ್ಕು ಬಾಧ್ಯತೆಗಳು ಇದ್ದಲ್ಲಿ ಈ ದಿನದಿಂದ ಏಳು ದಿನಗಳ ಒಳಗಾಗಿ ಸೂಕ್ತ ದಾಖಲಾತಿಗಳೊಂದಿಗೆ ಕೆಳಗೆ ತಿಳಿಸಿದ ವಿಳಾಸಕ್ಕೆ ತಮ್ಮ ತಕರಾರನ್ನು ಸಲ್ಲಿಸಬಹುದಾಗಿರುತ್ತದೆ. ಏಳು ದಿನಗಳ ಒಳಗಾಗಿ ಯಾವುದೇ ತಕರಾರುಗಳು ಬರದೇ ಹೋದಲ್ಲಿ ನಮ್ಮ ಕಕ್ಷಿದಾರರು ಸದರಿ ಸ್ವತ್ತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲವೆಂದು ಪರಿಗಣಿಸಿ ಕ್ರಯ ಪತ್ರವನ್ನು ಮಾಡಿಕೊಳ್ಳಲು ಬದ್ಧರಾಗಿರುತ್ತಾರೆ. ಏಳು ದಿನಗಳ ನಂತರ ಬಂದ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ನಮ್ಮ ಕಕ್ಷಿದಾರರು ಯಾವುದೇ ರೀತಿಯಲ್ಲೂ ಬಾಧ್ಯಸ್ಥರಾಗುವುದಿಲ್ಲ.

ಷೆಡ್ಯೂಲ್ ಸ್ವತ್ತು

ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಹೋಬಳಿ, ತಗ್ಗಲೂರು ಗ್ರಾಮಕ್ಕೆ ಸೇರಿದ ತರಿ ಸರ್ವೆ ನಂ. 52 ಒಟ್ಟು ವಿಸ್ತೀರ್ಣ 5 ಎಕರೆ, ಪೋಟ್ ಕರಾಬು 0.003 ಗುಂಟೆ ಜಾತಾ ಉಳಿಕೆ 4 ಎಕರೆ 37 ಗುಂಟೆ ಆಕಾರ ರೂ. 4.98 ಪೈಸೆ ತರಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಕೆಂಪಶೆಟ್ಟಿ ರವರ ಜಮೀನು ; ಪಶ್ಚಿಮಕ್ಕೆ: ಸರ್ಕಾರಿ ಜಮೀನು ; ಉತ್ತರಕ್ಕೆ: ಮಹೇಶ್ ರವರ ಜಮೀನು ; ದಕ್ಷಿಣಕ್ಕೆ: ಪುಟ್ಟಸಿದ್ದಮ್ಮರವರ ಜಮೀನು.

ಸಹಿ/– ಅಂಬ್ರೋಸ್ ಡಿಸೋಜ,
ಎಂ.ಬಿ.ಎ., ಎಲ್.ಎಲ್.ಬಿ., ವಕೀಲರು
ನಂ. 232, 1ನೇ ಹಂತ, ಕುವೆಂಪುನಗರ,
ಮೈಸೂರು. ಮೊ: 8660142178
ದಿನಾಂಕ: 22–5–2023

ವರಶಕ್ತಿ ಹೌಸಿಂಗ್ ಫೈನಾನ್ಸ್ ಪ್ರೈ.ಲಿ

ಸಾರ್ವಜನಿಕ ಪ್ರಕಟಣೆ

#58, ಚಂದ್ರಶೇಖರ ನಿಲಯ, 1ನೇ ಮಹಡಿ, ಮಹದೇಶ್ವರ ಲೇಔಟ್, ಹುಲ್ಲಹಳ್ಳಿ ರಸ್ತೆ, ನಂಜನಗೂಡು–571301 ರಲ್ಲಿ ಕಾರ್ಯನಿರ್ವಹಿಸುತ್ತಿರುವ ವರಶಕ್ತಿ ಹೌಸಿಂಗ್ ಫೈನಾನ್ಸ್, ಪ್ರೈ.ಲಿ, ನಂಜನಗೂಡು ಶಾಖೆಯು 01.09.2023ರಿಂದ ಜಾರಿಗೆ ಬರುವಂತೆ ಈ ಕೆಳಗಿನ ವಿಳಸಕ್ಕೆ ಸ್ಥಳಾಂತರಗೊಳ್ಳಲಿದೆ.

ಹೊಸ ವಿಳಾಸ

1ನೇ ಮಹಡಿ, ಮಹೇಶ್ ಕಾಂಪ್ಲೆಕ್ಸ್, ಬಸವನಗುಡಿ ಬ್ಲಾಕ್ 2ನೇ ಹಂತ, ಹುಲ್ಲಹಳ್ಳಿ ಮುಖ್ಯ ರಸ್ತೆ, ನಂಜನಗೂಡು 571301
ಶಾಖಾ ವ್ಯವಸ್ಥಾಪಕರು, ನಂಜನಗೂಡು ಶಾಖೆ 9964524996

ಸ್ಥಳ: ನಂಜನಗೂಡು
ದಿನಾಂಕ: 22.05.2023
ನಿಮ್ಮ ನಿರಂತರ ಪ್ರೋತ್ಸಾಹವನ್ನು ನಾವು ಕೋರುತ್ತೇವೆ.

